ಸಂಪುಟ: 13 Volume | ಸಂಚಿಕೆ: 309 Issue | ಪುಟಗಳು 08 Pages | ಬುಧವಾರ 28 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಒಂದು ಗ್ರಂಥಾಲಯದ ಎಲ್ಲಾ ತಿಳುವಳಿಕೆಗಳನ್ನು ತಲೆಯಲ್ಲಿರಿಸಿ ಅಹಂಕರಿಸಿ ನಡೆಯುವ ಒಬ್ಬ ವ್ಯಕ್ತಿಗಿಂತ ಒಳ್ಳೆಯ ಸ್ವಭಾವ ಮತ್ತು ನಡವಳಿಕೆಯಿರುವ ಒಬ್ಬ ಸಾಧಾರಣ ವ್ಯಕ್ತಿ ಮೇಲು.

–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

ಫಾಸ್ಟ್ ಟ್ರ್ಯಾಕ್ ಕೋರ್ಟ್ ರಚನೆಗೆ ಒತ್ತಾಯ 6
ಉಚಿತ ಡಯಾಲಿಸಿಸ್ ಕೇಂದ್ರ ಉದ್ಘಾಟನೆ 7
ಕ್ರಿಕೆಟ್: ಆಯ್ಕೆಯಾದ ಡೈಮಂಡ್ ವಿದ್ಯಾರ್ಥಿ 8



ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರ ಬೆಂಗಳೂರಿನ ಅಧಿಕೃತ ನಿವಾಸಕ್ಕೆ ಭೇಟಿ ನೀಡಿ ಇತ್ತೀಚೆಗೆ ಲಿಂಗೈಕ್ಯರಾದ ಹಿರಿಯ ಕಾಂಗ್ರೆಸ್ ನಾಯಕ ಡಾ. ಭೀಮಣ್ಣ ಖಂಡ್ರೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಈಶ್ವರ ಖಂಡ್ರೆ ಅವರಿಗೆ ಸಾಂತ್ವನ ಹೇಳಿದರು.

## ಮನರೇಗಾ ಮರುಸ್ಥಾಪನೆ ಆಗುವ ತನಕ ಹೋರಾಟ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಯುಪಿಎ ಸರಕಾರವು ಗ್ರಾಮೀಣ ಜನರ ಹಿತದೃಷ್ಟಿಯಿಂದ ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು (ಮನರೇಗಾ) ಹಿಂದಿನಂತೆಯೇ ಯಥಾವತ್ತಾಗಿ ಮುಂದುವರಿಸಬೇಕು. ಅಲ್ಲಿಯವರೆಗೂ ಕಾಂಗ್ರೆಸ್ ಪಕ್ಷವು ಇದಕ್ಕಾಗಿ ಸದನದ ಒಳಗೂ ಹೊರಗೂ ಹೋರಾಡಲಿದೆ ಎಂದು ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಈ ಯೋಜನೆಯ ಹೆಸರನ್ನು ಕೇಂದ್ರ ಸರಕಾರವು ವಿಬಿ–ಜಿ ರಾಮ್ ಜಿ ಎಂದು ಬದಲಿಸಿರುವುದನ್ನು ವಿರೋಧಿಸಿ ಮತ್ತು ಯೋಜನೆಯ ಸ್ವರೂಪದಲ್ಲಿ ಬದಲಾವಣೆ ಮಾಡಿರುವುದನ್ನು ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಮಂಗಳವಾರ



ಹಮ್ಮಿಕೊಂಡಿದ್ದ ಪ್ರತಿಭಟನೆ ಮತ್ತು ರಾಜಭಚನ ಚಲೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿಂದೆ ಸೋನಿಯಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಅವರ ಒತ್ತಾಸೆಯಿಂದ ಮಹಾತ್ಮ ಗಾಂಧಿ ಅವರ ಗ್ರಾಮ ಸ್ವರಾಜ್ಯದ ಆಶಯಕ್ಕೆ ತಕ್ಕಂತೆ ಮನರೇಗಾ ಯೋಜನೆಯನ್ನು ರೂಪಿಸಲಾಗಿತ್ತು. ಈಗ ಮೋದಿ ಸರಕಾರ ಇಂತಹ ಯೋಜನೆಯನ್ನೇ ಹಾಳು ಮಾಡಿದೆ ಎಂದು ಅವರು ಟೀಕಿಸಿದರು.

## ಭಾರತದೊಂದಿಗೆ ಮಹತ್ವದ ಒಪ್ಪಂದಕ್ಕೆ ಅಸ್ತು

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಭಾರತದೊಂದಿಗೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಇದರ ಬೆನ್ನಲ್ಲೇ ಶೀಘ್ರದಲ್ಲೇ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಕೂಡ ಭಾರತ ಪ್ರವಾಸ ಕೈಗೊಂಡಿದ್ದಾರೆ.

ಈ ಹಿಂದೆ ಕೆನಡಾ ಮತ್ತು ಭಾರತ ನಡುವಿನ ಸಂಬಂಧ ವಿವಿಧ ಕಾರಣಗಳಿಂದಾಗಿ ಹಳ್ಳ ಹಿಡಿದಿತ್ತು. ಈ ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡೋ ಅಧಿಕಾರಾವಧಿಯಲ್ಲಿ ಭಾರತ ಮತ್ತು ಕೆನಡಾ ನಡುವಿನ ಸಂಬಂಧ ವಿವಿಧ ಕಾರಣಗಳಿಂದಾಗಿ ಹಳಸಿತ್ತು.

ಇದೀಗ ಭಾರತ ಮತ್ತು ಕೆನಡಾ ನಡುವಿನ



ಸಂಬಂಧವನ್ನು ಮತ್ತೆ ಟ್ರ್ಯಾಕ್‌ಗೆ ತರಲು ಕೆನಡಾ ಸರ್ಕಾರ ಪ್ರಯತ್ನಿಸುತಿದೆ ಎನ್ನಲಾಗಿದೆ.

# ಕೈ ಶಸ್ತ್ರ ದೋಸ್ತಿಯ ಪ್ರತ್ಯಸ್ತ್ರ

## ಕೇಂದ್ರದ ವಿರುದ್ಧ ಕಾಂಗ್ರೆಸ್ ಕಿಡಿ | ಕಾಂಗ್ರೆಸ್ ವಿರುದ್ಧವೇ ಬಿಜೆಪಿ–ಜೆಡಿಎಸ್ ಕೆಂಡಾಮಂಡಲ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೇಂದ್ರದ ವಿರುದ್ಧ ಕಾಂಗ್ರೆಸ್ ಕಿಡಿಕಾರಿದರೆ, ಕಾಂಗ್ರೆಸ್ ವಿರುದ್ಧವೇ ಬಿಜೆಪಿ–ಜೆಡಿಎಸ್ ಪ್ರತಿಭಟನಾಸ್ತ್ರ ಪ್ರಯೋಗಿಸಿವೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (ಮನರೇಗಾ) ಹೆಸರು ಬದಲಾವಣೆ ಮಾಡಿ ಕಾಯ್ದೆ ತಿದ್ದುಪಡಿ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಸಿಡಿದೆದ್ದಿರುವ ರಾಜ್ಯ ಕಾಂಗ್ರೆಸ್ ನಾಯಕರು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ, ರಾಜಭವನ ಚಲೋ ನಡೆಸಿದ್ದಾರೆ. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಪ್ರತಿಪಕ್ಷಗಳ ಪ್ರತಿಭಟನೆ:** ರಾಜ್ಯ ವಿಧಾನಸಭೆಯ ಜಂಟಿ ಅಧಿವೇಶನದ ಸಂದರ್ಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಅವಮಾನಿಸಿದ ಮತ್ತು ಅಗೌರವಿಸಿದ ಆರೋಪದ ಮೇಲೆ ಕೆಲವು ಕಾಂಗ್ರೆಸ್ ಶಾಸಕರನ್ನು ಅಮಾನತುಗೊಳಿಸಬೇಕೆಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದವು. ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ನ್ಯಾಯಕ್ಕಾಗಿ ಒತ್ತಾಯಿಸಿದರು.






### ಧರಣಿ ಹಿಂಪಡೆದ ಪ್ರತಿಪಕ್ಷ

ಅಬಕಾರಿ ಸಚಿವರ ರಾಜೀನಾಮೆಗೆ ಆಗ್ರಹಿಸಿ ಆರಂಭಿಸಿದ್ದ ಧರಣಿಯನ್ನು ಪ್ರತಿಪಕ್ಷಗಳು ವಿಧಾನಸಭೆಯಲ್ಲಿ ಹಿಂಪಡೆದಿವೆ. ನಿಗದಿತ ಸಮಯಕ್ಕಿಂತ 2 ಗಂಟೆ ತಡವಾಗಿ ಸದನ ಆರಂಭವಾದಾಗ ಸಭಾಧ್ಯಕ್ಷ ಯು.ಟಿ.ಖಾದರ್ ಪ್ರಶಸ್ತಿಗೆ ಭಾಜನರಾದವರಿಗೆ ಅಭಿನಂದನೆ ಸಲ್ಲಿಸಲು ಮುಂದಾಗುವಾಗ ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಪ್ರತಿಪಕ್ಷಗಳ ಶಾಸಕರು ಧರಣಿ ಆರಂಭಿಸಿದ್ದರು.

### ಮನರೇಗಾ ಬೇಕೇ ಬೇಕು

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಬೃಹತ್ ಪ್ರತಿಭಟನೆ ನಡೆಸಿದರು. ಮನರೇಗಾ ಹೆಸರು ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮನರೇಗಾ ಹೆಸರು ಮರು ಸ್ಥಾಪನೆ ಮಾಡುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ವಿಬಿ ಜಿ ರಾಮ್ ಜಿನಲ್ಲಿರುವ ಈ ರಾಮ ದಶರಥ ರಾಮ ಅಥವಾ ಸೀತಾ ರಾಮ ಅಲ್ಲ, ಇದು ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ ಗಾಗಿ ವಿಕಸಿತ ಭಾರತ ಗ್ಯಾರಂಟಿ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಪರಿಚಯಿಸಿದ ಉದ್ಯೋಗದ ಹಕ್ಕು ನರೇಗಾ. ಕೇಂದ್ರವು ಅದನ್ನು ನಾಶಮಾಡಲು ಪ್ರಯತ್ನಿಸುತ್ತಿದೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿ

### ಅಪಮಾನ, ಸೆರೆಗೆ ಆಗ್ರಹ

ಹಿಂದೆ ಇಂದಿರಾ ಗಾಂಧಿಯವರ ಆಡಳಿತಾವಧಿಯಲ್ಲಿ ಗೌರವಾನ್ವಿತ ರಾಜ್ಯಪಾಲರನ್ನು ನಡೆಸಿಕೊಂಡದ್ದು ದೇಶಕ್ಕೆ ಗೊತ್ತಿದೆ. ರಾಜ್ಯಪಾಲರಿಗೆ ಜಂಟಿ ಅಧಿವೇಶನದ ಸಂದರ್ಭದಲ್ಲಿ ಅಪಮಾನಮಾಡಿ, ದುರ್ವರ್ತನೆ ತೋರಿದ್ದು, ಅವರು ಮಾಡಿದ್ದೇ ಸರಿ ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇಂಥವರನ್ನು ಬಂಧಿಸಬೇಕು. ಪಾದಯಾತ್ರೆ, ರಾಜಭವನ ಮುತ್ತಿಗೆ ಯಾವ ಪುರುಷಾರ್ಥಕ್ಕೆ ಎಂದು ಪ್ರತಿಪಕ್ಷದವರು ಪ್ರಶ್ನಿಸಿದ್ದಾರೆ.

### ಬಂಧನ ಬಿಡುಗಡೆ

ಮನರೇಗಾ ಹಾಗೂ ವಿಬಿ ಜಿ ರಾಮ್ ಜಿ ಹೋರಾಟವನ್ನು ತೀವ್ರಗೊಳಿಸಲು ಕೈ ಪಡೆ ಮುಂದಾಗಿವೆ. ಈ ಹಿನ್ನೆಲೆಯಲ್ಲಿ ರಾಜಭವನ ಚಲೋ ನಡೆಸಿದೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಸೇರಿದಂತೆ ರಾಷ್ಟ್ರೀಯ ನಾಯಕರು ಈ ಹೋರಾಟಕ್ಕೆ ಸಾಥ್ ನೀಡಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದ್ದಾರೆ.

## ದೇಶದ ಜನರಿಗೆ ಸಂವಿಧಾನ ಸರ್ವಶ್ರೇಷ್ಠ: ಡಿಗ್ಗಾವಿ



**ಕೆಂಭಾವಿ:** ಭಿನ್ನತೆಯಲ್ಲಿ ಏಕತೆ ಹಾಗೂ ಸಮಗ್ರತೆಯನ್ನು ಇಡೀ ಪ್ರಪಂಚಕ್ಕೆ ಎತ್ತಿ ತೋರಿಸುತ್ತಿರುವ ಹೆಮ್ಮೆಯ ಭವ್ಯ ಭಾರತ ನಮ್ಮದು ಎಂದು ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆಯ ಸಂಚಾಲಕ ಮೋಹನರಡ್ಡಿ ಡಿಗ್ಗಾವಿ ಹೇಳಿದರು. ಪಟ್ಟಣದ ಹೇಮರಡ್ಡಿ ಮಲ್ಲಮ್ಮ ಶಾಲೆಯಲ್ಲಿ ಸೋಮವಾರ ನಡೆದ 77 ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು ನಮ್ಮ ವೀರ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ನಮ್ಮ ಮಹಾನ್ ನಾಯಕರ ದೂರದೃಷ್ಟಿಯನ್ನು ನೆನಪಿಸುತ್ತಾ, ನಾವು ನಮ್ಮ ರಾಷ್ಟ್ರದ ಗೌರವದ ಮೌಲ್ಯಗಳನ್ನು ಅನುಸರಿಸಬೇಕು. ಏಕತೆ ಮತ್ತು ಸಮಾನತೆಯೊಂದಿಗೆ ಭಾರತದ ಪ್ರಗತಿಗಾಗಿ ಶ್ರಮಿಸಬೇಕು. ಬೇರೆ ಬೇರೆ ಭಾಷೆ– ಧರ್ಮಗಳ ಜನರು ಒಟ್ಟಾಗಿ ಸಹಜೀವನ ನಡೆಸುತ್ತಿರುವುದರ ಹಿಂದೆ ಬಾಬಾಸಾಹೇಬರ ಪರಿಶ್ರಮ ಹಿರಿದಾಗಿದೆ. ದೇಶದ ಜನರಿಗೆ ಸಂವಿಧಾನ ಸರ್ವಶ್ರೇಷ್ಠವಾಗಿದೆ ಎಂದರು. ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಶಾಂತಗೌಡ ಪಾಟೀಲ್ ನೀರಲಗಿ ನೆರವೇರಿಸಿದರು. ಉಪಾಧ್ಯಕ್ಷ ಶರಣಬಸವ ಪ್ಯಿ ಡಿಗ್ಗಾವಿ, ಕಾರ್ಯದರ್ಶಿ ವೈ.ಟಿ ಪಾಟೀಲ್ ಸೇರಿದಂತೆ ಶಾಲೆಯ ಮುಖ್ಯ ಗುರುಗಳು, ಶಿಕ್ಷಕ ಹಾಗೂ ಶಿಕ್ಷ–ಕೇತರ ಸಿಬ್ಬಂದಿ ಭಾಗವಹಿಸಿದ್ದರು. ಧ್ವಜಾರೋಹಣದ ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಸಚವರ ಗೈರು ಹಾಜರಿಗೆ ಆಕ್ಷೇಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಪ್ರಶ್ನೋತ್ತರ ವೇಳೆ ಆರಂಭವಾದ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರು ಹಾಜರಿಲ್ಲದ ಬಗ್ಗೆ ಬಿಜೆಪಿ ವಿಧಾನಸಭೆಯಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಪ್ರಶ್ನೋತ್ತರ ಕಲಾಪ ಆರಂಭಿಸಿ ಪ್ರಶ್ನೆ ಕೇಳಬೇಕಾದ ಶಾಸಕರು ಹೆಸರನ್ನು ಹೇಳಲಾರಂಭಿಸಿದರು.

ಆಗ ಸಂಬಂಧಿತ ಸಚಿವರು ಇಲ್ಲದಿರುವುದನ್ನು ಗಮನಿಸಿದ ಪ್ರತಿಪಕ್ಷದ ನಾಯಕ, ಸಚಿವರೇ ಇಲ್ಲ ಎಂದರೆ ಹೇಗೆ? ಎಂದಿದ್ದಾರೆ. ಆಗ ಸಭಾಧ್ಯಕ್ಷರು ಇಂದು ಏಕೆ ಸದನ ಆರಂಭವಾಗಿದೆ?, ಹಾಜರಾತಿ ಏಕೆ ಕಡಿಮೆ ಇದೆ ಎಂಬುದು ನಿಮಗೆ ಗೊತ್ತಿದೆ. ಅದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎನ್ನುತ್ತಿದ್ದಂತೆ, ಅಶೋಕ್ ಅವರು ಹಾಜರಿರಬೇಕಾದವರ ಪಟ್ಟಿಯನ್ನು ವಾಚಿಸಿ ಎಂದು ಒತ್ತಾಯಿಸಿದರು. ಜಮೀರ್ ಅಹಮದ್ ಖಾನ್, ಸುಧಾಕರ್ ಸೇರಿದಂತೆ ಇನ್ನೂ ಕೆಲವು ಸಚಿವರು ಸದನದಲ್ಲಿ ಹಾಜರಿರಲಿಲ್ಲ. ಆಗ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಂಡ ಸಭಾಧ್ಯಕ್ಷರು ಎಚ್‌ಕೆ.ಸುರೇಶ್‌ರನ್ನು ಪ್ರಶ್ನೆ ಕೇಳುವಂತೆ ಆಹ್ವಾನಿಸಿದರು. ಆಗ ಶಾಸಕರು ಆ ಸಂದರ್ಭದಲ್ಲಿ ಸದನದಲ್ಲಿ ಹಾಜರಿರಲಿಲ್ಲ.

## ಜೆಡಿಎಸ್: ಶಕ್ತಿ ಶಾಲಿ ನಾಯಕರ ಸೃಷ್ಟಿ

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ



ಮಿಸ್ಟರ್ ಚಲುವರಾಯಸ್ವಾಮಿ ನಾವ್ಯಾವತ್ತೂ ಅಡ್ಜಸ್ಟ್‌ಮೆಂಟ್ ರಾಜಕಾರಣಕ್ಕೆ ತಲೆಕೊಟ್ಟವರಲ್ಲ. ನಮ್ಮ ಪಕ್ಷದಲ್ಲಿ ತಿಂದು ಬೆಳೆದು ಮಂತ್ರಿಯಾಗಿ ನಮ್ಮ ಪಕ್ಷವನ್ನೇ ಕಿತ್ತೋಗೆಯಬೇಕೆನ್ನುತ್ತಿರಾ? ಇನ್ನೂ ಎರಡೂವರೆ ವರ್ಷ ಕಾಯಿರಿ, ಜನರೇ ಉತ್ತರ ನೀಡಲಿದ್ದಾರೆ ಎಂದು ಚಲುವರಾಯಸ್ವಾಮಿ ವಿರುದ್ಧ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು. ಮಂಡ್ಯ ಜಿಲ್ಲೆ ಮಡುವಿನಕೋಡಿ ಗ್ರಾಮದಲ್ಲಿ ಮಂಗಳವಾರ ನಡೆದ ಜೆಡಿಎಸ್ ಸಮಾವೇಶದಲ್ಲಿ ಮಾತನಾಡಿ, ಜೆಡಿಎಸ್ ಪಕ್ಷವು ಶಕ್ತಿಶಾಲಿ ನಾಯಕರನ್ನು ಸೃಷ್ಟಿಸುವ ಕಾರ್ಖಾನೆಯಿದ್ದಂತೆ. ಸಚಿವರಾಗಿರುವವರು ಮಾತ್ರವಲ್ಲ, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ಎಚ್.ಡಿ.ದೇವೇಗೌಡರ ಮಾರ್ಗದರ್ಶನದಲ್ಲಿ ಬೆಳೆದವರೇ. ಪಕ್ಷದಲ್ಲಿ ಬೆಳೆದು, ಉಂಡು ಹೋದವರು ಇಂದು ಪಕ್ಷದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

## ಪಾಟೀಲ ಪರಿವಾರದ ಕೃತಜ್ಞತೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಶ್ರೀ ವೀರಭದ್ರೇಶ್ವರ ಜಾತ್ರೆಯನ್ನು ಯಶಸ್ವಿಯಾಗಿ ನಡೆಸಲು ನಿಸ್ವಾರ್ಥ ಸೇವೆ ಸಲ್ಲಿಸಿದ ಎಲ್ಲಾ ಭಕ್ತಾದಿಗಳಿಗೆ, ಪಲ್ಲಕ್ಕಿ ಸೇವಕರಿಗೆ, ಕರ ಸೇವಕರಿಗೆ, ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ, ಗ್ರಾಮದ ಹಿರಿಯರಿಗೆ, ಯುವಕರಿಗೆ, ಮಹಿಳೆಯರಿಗೆ, ದಾನಿಗಳಿಗೆ, ಪೊಲೀಸ್ ಇಲಾಖೆ, ಪುರಸಭೆ, ವಿದ್ಯುತ್ ಇಲಾಖೆ, ಆರೋಗ್ಯ ಇಲಾಖೆ, ಸ್ವಚ್ಛತಾ ಸಿಬ್ಬಂದಿ ಹಾಗೂ ಜಾತ್ರೆ ಯ ವ್ಯವಸ್ಥೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಪಾಟೀಲ ಪರಿವಾರದ ವತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳು.



ನಿಮ್ಮ ಸಹಕಾರ, ಶ್ರಮ ಮತ್ತು ಭಕ್ತಿಯೇ ಈ ಜಾತ್ರೆಯ ಸೌಂದರ್ಯ ಮತ್ತು ಯಶಸ್ಸಿಗೆ ಕಾರಣವಾಗಿದೆ. ಶ್ರೀ ವೀರಭದ್ರೇಶ್ವರರ ಕೃಪೆ ನಿಮ್ಮೆಲ್ಲರ ಮೇಲೂ ಸದಾ ಇರಲಿ ಎಂದು ಹಾರೈಸುತ್ತೇವೆ ಎಂದು ಮಾಜಿ ಸಚಿವರಾದ ರಾಜಶೇಖರ ಬಿ.ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ ತಿಳಿಸಿದರು.

## ವೀರಭದ್ರೇಶ್ವರನ ಅದ್ಧೂರಿ ಜಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಶ್ರೀ ವೀರಭದ್ರೇಶ್ವರ ಜಾತ್ರೆಯ ರಥೋತ್ಸವ ಅದ್ದೂರಿಯಾಗಿ ನೆರವೇರಿತು. ಹುಮನಾಬಾದ್ ತಾಲ್ಲೂಕಿನ ಐತಿಹಾಸಿಕ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಜಾತ್ರೆಯ ಅಂಗವಾಗಿ ನಡೆದ ರಥೋತ್ಸವವು ಸಾವಿರಾರು ಭಕ್ತರ ಸಾನ್ನಿಧ್ಯದಲ್ಲಿ ಭಕ್ತಿಭಾವ ಹಾಗೂ ವೈಭವದಿಂದ ಜರುಗಿತು. ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ದೇವರ ದರ್ಶನ ಪಡೆದು ಹರಕೆ ಸಲ್ಲಿಸಿದರು. ವಿಶೇಷ ಪೂಜೆ, ಅಲಂಕಾರ ಮತ್ತು ಮಂಗಳವಾದ್ಯಗಳೊಂದಿಗೆ ರಥವನ್ನು ತೇರ ಮೈದಾನದಿಂದ ಎಳೆಯಲಾಯಿತು. ಪೊಲೀಸ್ ಇಲಾಖೆಯ ಸಮರ್ಪಕ ಬಂದೋಬಸ್ತ್ ಹಾಗೂ ದೇವಾಲಯ ಸಮಿತಿ, ಸ್ವಯಂಸೇವಕರ ಸಹಕಾರದಿಂದ ರಥೋತ್ಸವ ಶಾಂತಿಯುತವಾಗಿ ನೆರವೇರಿತು. ಶಾಸಕರುಗಳು, ಮಾಜಿ ಸಚಿವರು, ವಿವಿಧ ಪಕ್ಷದ ಮುಖಂಡರು, ವಿವಿದ ಸಂಘ ಸಂಸ್ಥೆಯವರು, ಸೇರಿದಂತೆ ಇತರರಿದ್ದರು.



## ಕೆಂಪುಕೋಟೆಯಲ್ಲಿ ಕಲೆಯ ಕಲರವ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಗಣರಾಜ್ಯೋತ್ಸವದ ನಿಮಿತ್ತ ರಾಷ್ಟ್ರದ ರಾಜಧಾನಿ ನವದೆಹಲಿಯ ಕೆಂಪುಕೋಟೆಯಲ್ಲಿ ಆಯೋಜಿಸಿದ್ದ ಪಥಸಂಚಲನದಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಗೋರ್ಲೆಕೊಪ್ಪ ಮಹಿಳಾ ಕಲಾತಂಡದ ಕಲಾವಿದರು ಭಾಗವಹಿಸಿ ಕಲೆ ಪ್ರದರ್ಶಿಸಿದರು.

ನವದೆಹಲಿಯಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟ 77ನೆಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಜಿಲ್ಲೆಯ ಕುಕನೂರು ತಾಲೂಕಿನ ಗೋರ್ಲೆಕೊಪ್ಪ ಗ್ರಾಮದ ಶ್ರೀ ಆದಿಶಕ್ತಿ ಮಹಿಳಾ ಜಾನಪದ ಕಲಾತಂಡದ ಮಹಿಳಾ ಡೊಳ್ಳು ಕುಣಿತ ಕಲಾವಿದರು ಭಾಗವಹಿಸಿ ತಮ್ಮ ಕಲೆ ಪ್ರದರ್ಶಿಸುವುದರೊಂದಿಗೆ ಎಲ್ಲರ ಮೆಚ್ಚುಗೆ ಪಾತ್ರರಾದರು.

ಪ್ರದರ್ಶನ ನೀಡಿದ ಕಲಾವಿದರಿಗೆ ಗ್ರಾಮಸ್ಥರು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಿರುವುದಾಗಿ ಗ್ರಾಮದ ಜಾನಪದ ಕಲಾಸಂಘದ ಅಧ್ಯಕ್ಷ ಶರಣಯ್ಯ ಎನ್ ಇಟಗಿ ತಿಳಿಸಿದ್ದಾರೆ.

**ಮನರೇಗಾ ಬರಿ ಹೆಸರು ಮಾತ್ರ ಬದಲಾವಣೆಯಾಗಿದೆ. ಸೌಲಭ್ಯಗಳು ಹಾಗೇ ಇವೆ: ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವ**

# ಮೂಲಭೂತ ಹಕ್ಕುಗಳ ಸರಿಯಾದ ಪಾಲನೆ ಆಗಬೇಕು: ರೂಪಾ ಪಾಟೀಲ್



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಅಂಬೇಡ್ಕರರವರ ಸಂವಿಧಾನದ ನಿಜವಾದ ಮೌಲ್ಯಗಳನ್ನ ನಾವು ಅರಿತುಕೊಂಡಾಗ ಮಾತ್ರ ನಮ್ಮ ದೇಶ ಅಭಿವೃದ್ಧಿಯಾಗಿ ಬಲಿಷ್ಠ ರಾಷ್ಟ್ರವಾಗಲೂ ಸಾಧ್ಯ ನಾವೆಲ್ಲ ದೇಶವಾಸಿಗಳು ಈ ನಿಟ್ಟಿನಲ್ಲಿ ಕಾರ್ಯಗತರಾಗಿ ಒಂದಾಗಬೇಕು ಎಂದು ರೂಪಾ ಕಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನವಜೀವನ ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ಜನೆವರಿ 26ರಂದು 77 ನೆಯ ಗಣರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಧ್ವಜಾರೋಹಣವನ್ನು ನೆರವೇರಿಸಿದ ನವಜೀವನ ಶಾಲೆಯ ಅಧ್ಯಕ್ಷರಾದ ಶ್ರೀ ಅನಿಲಕುಮಾರ್ ಬೆಲದಾರ ಅವರು ಹೇಳಿದರು.

ಅದೇ ರೀತಿ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ತನುಜಾ ನಾಗಮಾರಪಳ್ಳಿ ಅವರು ಮಾತನಾಡಿ ನಾವು ಜಾತಿ ಬೇಧ ಮರೆಯಬೇಕು ಬಸವಣ್ಣವರು ಹೇಳಿದ ಹಾಗೆ ಕೇವಲ ಗಂಡು ಹೆಣ್ಣು ಇವೆರಡು ಜಾತಿ ಮಾತ್ರ ಬೇರೆ ಯಾವ ಜಾತಿಯೂ ಇರಬಾರದು ಎಂದು ಅಭಿಪ್ರಾಯ ಪಟ್ಟರು ಇನ್ನೋರ್ವ ಅತಿಥಿಗಳಾದ ಶ್ರೀಮತಿ ಶಿವಲೀಲಾ ಬಂಡೆ ಅವರು ಮೊಟ್ಟ ಮೊದಲ ಬಾರಿಗೆ

ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಣೆ ತುಂಬ ಖುಷಿ ಕೊಟ್ಟಿತು ಇವರಿಗಾಗಿ ಯಾವುದೇ ರೀತಿಯ ಸಹಾಯ ಬೇಕಿದ್ದರೂ ಮಾಡಲು ಸಿದ್ಧ ಎಂದು ಸಂತಸದಿಂದ ಹೇಳಿಕೊಂಡರು ನಾವೆಲ್ಲರೂ ಬಸವಣ್ಣ ಹಾಗೂ ಅಂಬೇಡ್ಕರರ ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಎರಡು ಮಾತುಗಳಲ್ಲಿ ಹೇಳಿದರು.

ಅದೇ ರೀತಿ ರೂಪಾ ಕಲೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷೆ ರೂಪಾ ಪಾಟೀಲ ಮಾತನಾಡಿ ನಮ್ಮ ಸಂವಿಧಾನವು ವಿಶ್ವದ ಅತ್ಯಂತ ದೊಡ್ಡ ಲಿಖಿತ ಸಂವಿಧಾನವಾಗಿದೆ. ಇದರ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ನಾವು ಇಂದು ಭಕ್ತಿಯಿಂದ ಸ್ಮರಿಸಬೇಕು. ಅವರ ಸಂವಿಧಾನ ನಮ್ಮ ದೇಶಕ್ಕೆ ಕೊಟ್ಟಂತಹ ದೊಡ್ಡ ಕೊಡುಗೆಯಾಗಿದೆ ಜಾತಿ, ಮತ, ಭಾಷೆ ಎಂಬ ಭೇದವಿಲ್ಲದೆ ನಾವೆಲ್ಲರೂ ಸಮಾನರು ಎಂಬ ಹಕ್ಕನ್ನು ನೀಡಿದ್ದು ಈ ಸಂವಿಧಾನ. ಪ್ರಜೆಗಳೇ ಪ್ರಭುಗಳು ಎಂದು ಸಾರಿದ ದಿನವಿದು. ದೇಶದ ಗಡಿಯಲ್ಲಿ ಹೋಗಿ ದುಡಿಯದಿದ್ದರು ನಾವೆಲ್ಲರೂ ನಮ್ಮ ದೇಶದ ಸಂಪನ್ಮೂಲಗಳನ್ನು ಹಾಳು ಮಾಡದೆ ಉಳಿಸಿಕೊಂಡು ಹೋಗಬೇಕು ಎಂದು ಕಳಕಳಿಯಿಂದ ನುಡಿದರು. ನವಜೀವನ ಶಾಲೆಯ ಸಿಬ್ಬಂದಿಗಳು ಹಾಗೂ ಮಕ್ಕಳು ಹಾಜರಿದ್ದರು. ಟ್ರಸ್ಟ್ ನ ಪದಾಧಿಕಾರಿಗಳು ಇದ್ದರು.

# ಕಾರಂಜಾ ಸಂತ್ರಸ್ತರಿಗೆ ಪರಿಹಾರ ಬಿಡುಗಡೆಗೆ ಸಂತ್ರಸ್ತರ ಸಮಿತಿಯ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಕಾರಂಜಾ ಮುಳುಗಡೆ ಸಂತ್ರಸ್ತರಿಗೆ ಮಾನವೀಯತೆಯ ಮಾನದಂಡ ಹಾಗೂ ವೈಜ್ಞಾನಿಕ ಆಧಾರದ ಮೇಲೆ ಸಮರ್ಪಕ ಪರಿಹಾರ ನೀಡಬೇಕು ಎಂಬ ಬೇಡಿಕೆಗೆ ಸಂಬಂಧಿಸಿ ರಾಜ್ಯ ಸರ್ಕಾರ ರಚಿಸಿರುವ ಉನ್ನತ ಮಟ್ಟದ ತಾಂತ್ರಿಕ ಸಮಿತಿಯ ವರದಿಯನ್ನು ಆಧರಿಸಿ, ಸಂತ್ರಸ್ತರಿಗೆ ಕಾಲಮಿತಿಯಲ್ಲಿ ಪರಿಹಾರ ಹಣ ಬಿಡುಗಡೆ ಮಾಡಬೇಕು ಎಂದು ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯು ಒತ್ತಾಯಿಸಿದೆ.

ಕಾರಂಜಾ ಸಂತ್ರಸ್ತರ ದೀರ್ಘಕಾಲದ ಹೋರಾಟವನ್ನು ಪರಿಗಣಿಸಿ, ರಾಜ್ಯ ಸರ್ಕಾರವು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಅಧಿಕೃತ ವರದಿಯನ್ನು



ಡಿಸೆಂಬರ್ 2025ರ ಅಂತ್ಯದಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ವರದಿ ಈಗಾಗಲೇ ಸರ್ಕಾರದ ಕೈ ಸೇರಿದೆ. ಈ ಹಿನ್ನೆಲೆಯಲ್ಲಿ ತಕ್ಷಣ ಕ್ರಮ ಕೈಗೊಂಡು ಸಂತ್ರಸ್ತರಿಗೆ ಪರಿಹಾರ ವಿತರಿಸಬೇಕೆಂದು ಅರಣ್ಯ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆಯವರಿಗೆ ಸಂತ್ರಸ್ತರ ಸಮಿತಿಯು ಆಗ್ರಹಿಸಿದೆ.

ರವಿವಾರ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿ ಹಾಗೂ ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ ಅವರ ನೇತೃತ್ವದ ನಿಯೋಗವು ಭಾಲ್ಕಿಯಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರ ನಿವಾಸಕ್ಕೆ ಭೇಟಿ ನೀಡಿ ಮನವಿ ಪತ್ರವನ್ನು ಸಲ್ಲಿಸಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸೇರಿದಂತೆ ಸಂಬಂಧಪಟ್ಟ ಸಚಿವರು ಕಾಲಮಿತಿಯಲ್ಲಿ ಸಂತ್ರಸ್ತರ ಬೇಡಿಕೆಗೆ ಸ್ಪಂದಿಸಿ ಸಮರ್ಪಕ ಪರಿಹಾರ ಒದಗಿಸಲು ವಿಶೇಷ ಮುತುವರ್ಜಿ ವಹಿಸಬೇಕೆಂದು ಮನವಿ ಮಾಡಲಾಯಿತು.

ಸಂತ್ರಸ್ತರ ಮನವಿಯನ್ನು ಸ್ವೀಕರಿಸಿ ಮಾತನಾಡಿದ ಸಚಿವ ಈಶ್ವರ ಖಂಡ್ರೆಯವರು, ಕಾರಂಜಾ ಸಂತ್ರಸ್ತರ ಸಮಸ್ಯೆಯ ಬಗ್ಗೆ ತಾವು ವಿಶೇಷ ಕಾಳಜಿ ವಹಿಸಿ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರಾಜಪ್ಪ ಕಮಲಪೂರೆ, ಡಾ. ರಾಜಶೇಖರ ರಂಜೋಳ, ಮಾದಪ್ಪ ಕೌದೆ, ಇಸೂಫಮಿಯಾ ರೇಕುಳಗಿ, ಮಹಮ್ಮದ್ ಸೋಲಾಪೂರೆ, ಮಹೇಶ್ ಕಮಲಪೂರೆ, ಚಂದ್ರಶೇಖರ ಮುತ್ತಣ್ಣ, ಶಂಕರೆಪ್ಪ ಮೂಲಗಿ, ಶ್ರೀಮತಿ ಲಕ್ಷ್ಮೀ ಕೌದೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಮಲನಗರ: ತಾಲೂಕಿನ ರಾಂಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಮುಖ್ಯಶಿಕ್ಷಕಿ ಮಂಗಲಾ ಅವರು ಧ್ವಜಾರೋಹಣ ನೆರವೇರಿಸಿದರು.
ರಾಷ್ಟ್ರೀಯ ಮೋದಿ ಸೇವಾ ಸಮಿತಿ ಕಮಲನಗರ ತಾಲ್ಲೂಕು ಘಟಕ ಅಧ್ಯಕ್ಷ ಬಬನ ರಾಠೋಡ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಗಣಪತರಾವ ಬಿರಾದಾರ, ಬಾಲಿಕಾ ರೇಷ್ಮಾ, ಸುನೀತಾ, ಅನುಸೂಯಾ ಹಾಗೂ ಮಕ್ಕಳು ಇದ್ದರು.

# ಇತಿಹಾಸದಲ್ಲಿ ದಾಖಲಾದ ಬೀದರ ಪುಸ್ತಕ ಸಂತೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಗಡಿಜಿಲ್ಲೆ ಬೀದರನಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪುಸ್ತಕ ಸಂತೆಯು ಅತ್ಯಂತ ಯಶಸ್ಸು ಕಂಡಿರುವುದು ಇಲ್ಲಿನ ಸಾಹಿತ್ಯಾಸಕ್ತಿ ಬೆಳೆಸುವುದರ ಜೊತೆಗೆ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಚಿಂತನೆಗೆ ಬಲ ತುಂಬಿದೆ ಮತ್ತು ಇದು ಇತಿಹಸದಲ್ಲಿ ದಾಖಲಾಗುವಂತಾಗಿದೆ ಎಂದು ಪುಸ್ತಕ ಸಂತೆಯ ಆಯೋಜಕರಾದ ಗುರುನಾಥ ರಾಜಗೀರಾ ತಿಳಿಸಿದ್ದಾರೆ.

ಭಾಲ್ಕಿ ಹಿರೇಮಠ ಸಂಸ್ಥಾನ ಅರ್ಪಿಸಿದ್ದ ಬೀದರ ಜಿಲ್ಲಾ ಕಸಾಪ ಸಹಯೋಗದೊಂದಿಗೆ ಹಾಗೂ ಆದೀಶ್ ವಾಲಿ ಸಾರಥ್ಯದ ಉತ್ತರ ಕರ್ನಾಟಕ ನ್ಯೂಸ್ ಸಹಕಾರದೊಂದಿಗೆ ವೀರಲೋಕ ಪುಸ್ತಕ ಸಂಸ್ಥೆ ಆಯೋಜಿಸಿದ್ದ ವೀರಲೋಕ ಪುಸ್ತಕ ಸಂತೆ– 4 ಜನವರಿ 24, 25 ಮತ್ತು 26ರಂದು ಬೀದರಿನಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಈ ಸಂತೆಯು ಬೀದರ ಇತಿಹಾಸದಲ್ಲಿ ಒಂದು ದಾಖಲೆಯಾಗಿ ಉಳಿಯಿತು 11ಕೃತಿಗಳು ಲೋಕಾರ್ಪಣೆಗೊಂಡವು, 50,000ಕ್ಕೂ ಹೆಚ್ಚು ಜನರು ಭೇಟಿ ನೀಡಿ, 30 ಲಕ್ಷ ಮೌಲ್ಯದ ಪುಸ್ತಕಗಳು ಮಾರಾಟವಾದವು, 55 ಪ್ರಕಾಶಕರು, 212ಕ್ಕೂ ಹೆಚ್ಚು ಲೇಖಕರು ಭಾಗವಹಿಸಿ ಸಾಹಿತ್ಯಾಸಕ್ತರ ಮನವನ್ನು ಸೆಳೆದರು. ಬೀದರ ಸಾಹಿತ್ಯ ಇತಿಹಾಸದಲ್ಲಿ ಹಿಂದೆಂದೂ ಕಾಣದಂತಹ ಸಂತೆ ಇದಾಗಿತ್ತು ಈ ಮಹತ್ತರ ಸಾಧನೆಗೆ ಬೆಂಬಲ ನೀಡಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದ್ದಾರೆ ಆಯೋಜಕರು.

ನಿರ್ದಿಷ್ಟವಾಗಿ ಭಾಲ್ಕಿಯ ಹಿರೇಮಠದ ಪೂಜ್ಯರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೂಜ್ಯ ಗುರುಬಸವ ಪಟ್ಟದ್ದೇವರು, ಬೀದರ ಜಿಲ್ಲಾ ಕಸಾಪ ಅದ್ಯಕ್ಷರಾದ ಸುರೇಶ ಚನ್ನಶೆಟ್ಟಿ, ಆದೀಶ್ ವಾಲಿ ಸಾರಥ್ಯದ ಉತ್ತರ ಕರ್ನಾಟಕ ನ್ಯೂಸ್, ಜಿಲ್ಲೆಯ ಸಚಿವರು, ಎಲ್ಲಾ ಶಾಸಕರು, ಜಿಲ್ಲಾಡಳಿತ ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳು, ಶಿಕ್ಷಣ ಸಂಸ್ಥೆಗಳಿಗು, ಪತ್ರಿಕಾ ಮಾಧ್ಯಮದವರು, ವ್ಯಾಪಾರಸ್ಥರು, ಪೋಲಿಸ್ ಇಲಾಖೆ, ಮಹಾನಗರ ಪಾಲಿಕೆಯ ಸಿಬ್ಬಂದಿಗಳಿಗು, ಸಾಯಿ ಶಾಲೆಯವರಿಗು ಮತ್ತು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪುಸ್ತಕ ಸಂತೆಯ ಯಶಸ್ಸಿಗೆ ಸಹಕರಿಸಿದ ಸ್ಥಳೀಯರಿಗು ಧನ್ಯವಾದಗಳನ್ನು ಸಲ್ಲಿಸಿದ್ದಾರೆ.ಈ ಸಂತೆಯು ಬೀದರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಂಪರೆಗೆ ಒಂದು ಹೊಸ ಅಧ್ಯಾಯವನ್ನು ಸೇರಿಸಿದೆ ಪ್ರತಿ ವರ್ಷ ಈ ಸಂತೆಯನ್ನು ಆಯೋಜಿಸುವ ಉದ್ದೇಶವಿದ್ದು ನಿಮ್ಮ ನಿರಂತರ ಬೆಂಬಲವನ್ನು ಕೋರುತ್ತೇವೆ ಎಂದು ಸಂತೆಯ ಆಯೋಜಕ ಗುರುನಾಥ ರಾಜಗೀರಾ ತಿಳಿಸಿದ್ದಾರೆ.



ಕಮಲನಗರ :ತಾಲೂಕಿನ ತೋರಣಾ ಗ್ರಾಮ ಪಂಚಾಯತ ಕಟ್ಟಡದಲ್ಲಿ 77ನೇ ಗಣರಾಜ್ಯೋತ್ಸವವನ್ನು ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮ ಪಂಚಾಯತ ಅಧ್ಯಕ್ಷರಾದ ಸುನಿಲ ಶೀಗರೆ ಧ್ವಜಾರೋಹನ ಮಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಲ್ಲೇಶ ಹಾಗೂ ಗ್ರಾಮ ಪಂಚಾಯತ ಸದಸ್ಯರು ಸೇರಿದಂತೆ ಗ್ರಾಮಸ್ಥರು ಶಾಲಾ ಮಕ್ಕಳು ಒಗ್ಗೂಡಿ ರಾಷ್ಟ್ರಗೀತೆ ಹಾಡಿ ದೇಶ ಪ್ರೇಮ ಮೆರೆದರು.

# ದತ್ತು ಅಗರವಾಲ ಅವರ ಕಾರ್ಯ ಶ್ಲಾಘನೀಯ ; ಡಾ. ನಾಗಲಕ್ಷ್ಮೀ ಚೌಧರಿ.

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ ;**



ಸ್ವತಹ ತಾವೇ ಅಂಧರಾದರೂ ಕೂಡಾ ಅಂಧ ಮಕ್ಕಳಿಗೆ ವಿಶೇಷವಾಗಿ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗದಿರಲಿ ಎಂದು ದತ್ತು ಅಗರವಾಲ ಅವರ ತಾಯಿ ಹೆಸರಿನ ಮೇಲೆ ಶಿಕ್ಷಣ ಸಂಸ್ಥೆ ಪ್ರಾರಂಭಿಸಿ ಅಂಧ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ವಿಷಯ ಎಂದು ರಾಜ್ಯ ಮಹಿಳಾ ಆಯೋಗದ ಅದ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಹೇಳಿದರು.

ತಾಲ್ಲೂಕಿನ ಮುಗಳನಾಗವಿ ಅಭಿನವ ಶ್ರೀ ಸಿದ್ಧಲಿಂಗ ಶಿವಾಚಾರ್ಯರ 49 ನೇ ಜನ್ಮದಿನದ ಅಂಗವಾಗಿ ಆಯೋಜಿಸಿದ ಸಮಾರಂಭದಲ್ಲಿ ಹೈದರಾಬಾದ್ ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಹಾಗೂ ಮಾತೋಶ್ರೀ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯ ಸಂಸ್ಥಾಪಕ ಅದ್ಯಕ್ಷಾರದ ದತ್ತು ಅಗರವಾಲ ಅವರಿಗೆ ಸನ್ಮಾನಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ನಿಮ್ಮ ಶಿಕ್ಷಣ ಸಂಸ್ಥೆಗೆ ಸರ್ಕಾರದ ವತಿಯಿಂದ ಸಿಗಬೇಕಾದ ಪ್ರತಿಯೊಂದು ಸೌಲಭ್ಯಗಳನ್ನು ದೊರಕುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವೆ ಎಂದು ಚೌಧರಿ ತಿಳಿಸಿದರು.

ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿ, ಸುಮಾರು ವರ್ಷಗಳಿಂದ ದತ್ತು ಅಗರವಾಲ ಅವರು ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಪ್ರಮಾಣದ ಅಂಧ ಮಕ್ಕಳ ಶಿಕ್ಷಣ ನೀಡಲು ಆ ಭಗವಂತ ಶಕ್ತಿ ನೀಡಲಿ ಎಂದು ಶ್ರೀಗಳು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ರಾಜಕೀಯ ಗಣ್ಯರು ಸೇರಿದಂತೆ ಅನೇಕರು ಇದ್ದರು.

# ಸೂರ್ಯೋದಯ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ‘ದೇಶ ಪ್ರಗತಿಯತ್ತ ಸಾಗುತ್ತಿದೆ’




ದೇಶ ಸ್ವಾತಂತ್ರ್ಯ ಕ್ಕಾಗಿ ಅಂದಿನ ಯುವಕರು ಮತ್ತು ಮಹಿಳೆಯರು, ಹಿರಿಯರು ಪ್ರಾಣ ತ್ಯಾಗ ಮಾಡಿದ್ದಾರೆ. ಅವರ ತ್ಯಾಗ–ಬಲಿದಾನದಿಂದ ದೊರೆತ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುವ ಹೊಣೆಗಾರಿಕೆ ಎಲ್ಲರ ಮೇಲಿದೆ.

**ಸಂತೋಷ ಖಂಡ್ರೆ ಅಧ್ಯಕ್ಷರು**
**ಸೂರ್ಯೋದಯ ಪಬ್ಲಿಕ್ ಶಾಲೆ ಭಾಲ್ಕಿ.**

**‘ವಿವಿಧತೆಯಲ್ಲಿ ಏಕತೆ ಕಾಣುವ ದೇಶದ ಸಂವಿಧಾನ ಅರಿತು‌ಕೊಂಡು ನಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ಸಮಾನವಾಗಿ ಸ್ವೀಕರಿಸಬೇಕು.ಬಾಬಾಸಾಹೇಬ ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದ ಭಾರತದ ಮಹಿಳೆಯರು ಶಿಕ್ಷಣ ಕ್ಷೇತ್ರ ಸೇರಿದಂತೆ ಎಲ್ಲ ರಂಗದಲ್ಲಿ ಮುಂದುವರೆಯುತ್ತಿರುವುದು ಅಭಿಮಾನದ ಸಂಗತಿ’**

**ಉಷಾ ಸಂತೋಷ ಖಂಡ್ರೆ**
**ಕಾರ್ಯದರ್ಶಿ ಸೂರ್ಯೋದಯ ಪಬ್ಲಿಕ್ ಶಾಲೆ ಭಾಲ್ಕಿ.**

• **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

,1950ರಂದು ಜಾರಿಗೊಂಡ ಸಂವಿಧಾನದ ಆಶಯದಂತೆ ಭಾರತ ಇಂದು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾದಿಸುತ್ತಿದೆ ಎಂದು ನಿವೃತ್ತ ಪ್ರಾಂಶುಪಾಲ ಅಶೋಕ ರಾಜೋಳೆ ಪ್ರತಿಪಾದಿಸಿದರು. ಭಾಲ್ಕಿ–ಭಾತಂಬ್ರಾ ಮುಖ್ಯರಸ್ತೆಯಲ್ಲಿರುವ ಸೂರ್ಯೋದಯ ಪಬ್ಲಿಕ್ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ 77ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಯುವಶಕ್ತಿಯಿಂದಲೇ ರಾಷ್ಟ್ರ ಮುನ್ನೇಡೆಸಿಕೊಂಡು ಹೋಗಲು ಸಾಧ್ಯ.ಡಾ.ಬಿ.ಆರ್.ಅಂಬೇಡ್ಕರ್ ರಚಿತ ಸಂವಿಧಾನ ಎಲ್ಲ ಸಮುದಾಯದವರಿಗೆ ಸಮಾನ ಅವಕಾಶ ಕಲ್ಪಿಸಿದೆ.ಹಕ್ಕುಗಳ ಜತೆಗೆ ಕರ್ತವ್ಯಗಳನ್ನು ಅರಿತುಕೊಳ್ಳುವುದು ಅಗತ್ಯ. ಸೂರ್ಯೋದಯ ಪಬ್ಲಿಕ್ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಪ್ರತಿವರ್ಷ ಫಲಿತಾಂಶ ಗರಿಷ್ಠವಾಗಿರುತ್ತದೆ ಎಂದರು.ಸಂಸ್ಥೆ ಕಾರ್ಯದರ್ಶಿ ಉಷಾ ಖಂಡ್ರೆ ಮಾತನಾಡಿ,ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವದಂತಹ ರಾಷ್ಟ್ರೀಯ ಹಬ್ಬಗಳನ್ನು ಅತಿ ಉತ್ಸಾಹದಿಂದ ಆಚರಿಸಬೇಕು.ಇತ್ತಿಚಿಗೆ ಮಕ್ಕಳಲ್ಲಿ ಓದುವ ಸಂಸ್ಕೃತಿ ಕ್ಷೀಣಿಸುತ್ತಿದೆ . ಶಾಲಾಪಠ್ಯದ ಜೊತೆಗೆ ಇತರೆ ಮೌಲಿಕ ಕೃತಿಗಳು ಓದಬೇಕು ಎಂದು ಸಲಹೆ ನೀಡಿದರು.

ಸಂತ ಜ್ಞಾನೇಶ್ವರ ಮೌಲಿ ಮಂದಿರದ ಅಧ್ಯಕ್ಷ ನರಸಿಂಗರಾವ ತೋರಣೆ ಮಾಹಾರಾಜ ಮಾತನಾಡಿ,ಶಿಕ್ಷಣದ ಜತೆಗೆ ಆಧ್ಯಾತ್ಮಕ್ಕೆ ಪ್ರಾಧಾನ್ಯತೆ ನೀಡಿದರೆ ಮಕ್ಕಳಲ್ಲಿ ನೈತಿಕ ಮೌಲ್ಯಗಳು ವೃದ್ಧಿಸುತ್ತವೆ ಎಂದು ಹೇಳಿದರು.ಸನ್ಮಾನ: ಇದೇ ಸಂದರ್ಭದಲ್ಲಿ ಆಟೋಟಗಳಲ್ಲಿ ವಿಜೇತರಾದ ಮಕ್ಕಳಿಗೆ ಗೌರವಿಸಲಾಯಿತು. ಕು.ಮಹಾದೇವಿ ಪ್ರಾರ್ಥನೆ ಗೀತೆ ನುಡಿದರು.ಮುಖ್ಯಗುರು ಅನಿಲ ಪಾಟೀಲ್ ಸ್ವಾಗತಿಸಿದರು. ನಾಗರಾಜ ನಿಟ್ಟೂರೆ ನಿರೂಪಿಸಿದರು. ಕು.ಶೀತಲ ವಂದಿಸಿದರು.

# ತುಂಗಭದ್ರಾ ಗೇಟ್ ಅಳವಡಿಕೆಗೆ ಆಂಧ್ರ ಸರ್ಕಾರ ನೀಡಿದ್ದ ಹಣ ರಾಜ್ಯ ಸರ್ಕಾರ ಕತ್ತರಿ. ಸರ್ಕಾರ ದಿವಾಳಿ ನಾಡಗೌಡ ವ್ಯಂಗ್ಯ

• **ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರು:**

ಬಳ್ಳಾರಿ.ಹೊಸಪೇಟೆ. ಕೊಪ್ಪಳ ಆಂದ್ರಪ್ರದೇಶ ರಾಯಚೂರು ಸೇರಿದಂತೆ ನಾಲ್ಕು ಜಿಲ್ಲೆಗಳ ರೈತರ ಜೀವನಾಡಿಯಾಗಿರುವ ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ಗಳು ಅಳವಡಿಕೆ ಕುರಿತು ಆಂಧ್ರಪ್ರದೇಶ ಸರ್ಕಾರ ನೀಡಿದ್ದ. ಅನುದಾನದಲ್ಲಿ ರಾಜ್ಯದ ಸಿದ್ದರಾಮಯ್ಯ ಸರ್ಕಾರ ಹತ್ತು ಕೋಟಿ ರೂ ಯಾವ ಆಧಾರದ ಮೇಲೆ ಕತ್ತರಿ ಹಾಕಿದೆ ಎಂಬುದರ ಬಗ್ಗೆ ಸರ್ಕಾರದ ನಡೆ ನಿಗೂಢವಾಗಿದೆ ಎಂದು ಮಾಜಿ ಸಚಿವ ಹಾಗೂ (ಕೆ ಓ.ಎಫ್ ) ರಾಜ್ಯ ಅಧ್ಯಕ್ಷ ವೆಂಕಟರಾವ್ ನಾಡಗೌಡ ಗಂಭೀರವಾಗಿ ಆರೋಪಿಸಿದ್ದಾರೆ

ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ಅಳವಡಿಕೆ ಹಿನ್ನೆಯಲ್ಲಿ ಆಂಧ್ರಪ್ರದೇಶ ಕನ್ನಯ್ಯ ನಾಯ್ಡು ಅವರು ತುಂಗಭದ್ರಾ ಜಲಾಶಯಕ್ಕೆ ಆಗಮಿಸಿ ಪರಿಶೀಲನೆ ಮಾಡಿದಾಗ ಕ್ರಸ್ಟ್ ಗೇಟ್ ಅಳವಡಿಕೆ ಕಾರ್ಯ ಬಾರಿ ನಿಧಾನಗತಿ ಸಾಗುತ್ತದೆ ಎಂದು ಇಂಜಿನಿಯರ್ ಹಾಗೂ ಸಿಬ್ಬಂದಿಗಳು ಚರ್ಚಿಸಿದಾಗ ರಾಜ್ಯ



ಸರ್ಕಾರ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ತಿಳಿಸಿದಾಗ ಆಂಧ್ರಪ್ರದೇಶದ ಸರ್ಕಾರ 20 ಕೋಟಿ ರೂ ಮತ್ತು ಕರ್ನಾಟಕ ರಾಜ್ಯ ಸರ್ಕಾರ 10 ಕೋಟಿ ರೂ ತುಂಗಭದ್ರಾ ಬೋರ್ಡ್ ಗೆ ನೀಡಿದ್ದಲ್ಲ. ಎಂದು ವಿಚಾರಿಸಿದಾಗ ಇದರಲ್ಲಿ ರಾಜ್ಯ ಸರ್ಕಾರ ಅನುದಾನದಲ್ಲಿ ರಾಜ್ಯ ಸರ್ಕಾರ ಕತ್ತರಿ ಹಾಕಿರುವುದು ಬೆಳಕಿಗೆ ಬಂದಿದ್ದು. ಇನ್ನು 19 ಗೇಟ್ ಅಳವಡಿಕೆ ಮಾಡಿದ್ದೆ ಬಿಲ್ ಪಾವತಿ ಆಗಿಲ್ಲ ಎಂದರೆ ರಾಜ್ಯ ಸರ್ಕಾರದ ಖಜಾನೆಯಲ್ಲಿ ದುಡ್ಡು ಲ್ಲದೆ ದಿವಾಳಿಯಾಗಿದೆ ಎಂದು ಮಾಜಿ ಸಚಿವರು ರಾಜ್ಯ ಸರ್ಕಾರದ ಆಕ್ರೋಶವನ್ನು ವ್ಯಕ್ತಪಡಿಸಿದರು

ತುಂಗಭದ್ರಾ ಜಲಾಶಯ ಗೇಟ್ ನಿರ್ಮಾಣದ ಬಗ್ಗೆ ಕಾರ್ಯ ಸೇರಿದಂತೆ ಇತರ ಖರ್ಚುಗಾಗಿ 35 ಕೋಟಿ ರೂ ಆಂಧ್ರಪ್ರದೇಶ ಸರ್ಕಾರ ರಾಜ್ಯ ಸರ್ಕಾರದ ಖಜಾನೆ ಮೂಲಕ ಬೋರ್ಡ್ ಗೆ ನೀಡಿದ್ದು. ಆದರೆ ರಾಜ್ಯ ಸರ್ಕಾರ 10 ಕೋಟಿ ರೂ ವಾಪಸ್ ಪಡೆದುಕೊಂಡಿದ್ದು ಯಾಕೆ...,? ಪ್ರಶ್ನೆ ಉದ್ಭವಿಸಿದೆ. ಇದರ ಇದರ ಉದ್ದೇಶವಾದರೂ ಏನು..... ? ಎಂಬುದು ರಾಜ್ಯ ಸರ್ಕಾರ ತಿಳಿಸಬೇಕಾಗಿದೆ ಎಂದು ಆಗ್ರಹಿಸಿದರು ಈಗಾಗಲೇ ಜಲಾಶಯದಲ್ಲಿ ನೀರು ಇದೆ ಎರಡನೇ ಬೆಳೆ ಬೆಳೆಯುವುದಕ್ಕೆ ಇದ್ದ ನೀರು ಸರಿಹೋಗುತ್ತದೆ ಎಂದು ನಾನು ರೈತರೊಂದಿಗೆ ಹೋರಾಟ ಮಾಡಿದರೆ. ಸಚಿವ ಶಿವರಾಜ ತಂಗಡಗಿ ಬೆಳೆಗೆ ನೀರು ಬೇಕು.. ರ? ಅಥವಾ ಗೇಟ್ ಅಳವಡಿಕೆ ಕಾರ್ಯ ಬೇಕು..? (ಬೇಡವೋ ) ಎಂದು ರೈತರಲ್ಲಿ ಗೊಂದಲ ಸೃಷ್ಟಿ ಮಾಡಿದರು. ನಂತರ ಸಣ್ಣ ನೀರಾವರಿ ಸಚಿವ ಎನ್. ಎಸ್. ಬೋಸರಾಜು ಹಾಗೂ ಸಚಿವ ತಂಗಡಗಿ ಗೇಟ್ ಕೊಡುವುದಕ್ಕೆ ಅನುದಾನ ಕೊರತೆಯಿಲ್ಲ . ನಂತರ ಆಂಧ್ರಪ್ರದೇಶ ಸರ್ಕಾರ ಅನುದಾನ ಭರಸಲಿ ಅ ನಂತರ ಹಣವನ್ನು ಪಡೆಯಲಾಗುತ್ತಿದೆ ಎಂದು ಹೇಳಿರುತ್ತಾರೆ. ಆದರೆ ಬೇರೆ ರಾಜ್ಯ ಕೊಟ್ಟು ಹಣವನ್ನು ವಾಪಸ್ ಪಡೆದುಕೊಳ್ಳುತ್ತಾರೆ ಎಂದರೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮಾಜಿ ಸಚಿವ ವೆಂಕಟರಾವ್ ನಾಡಗೌಡ ತಿಯ್ದುದ್ದಾರೆ.

ಹೋದ ವರ್ಷ ಜೋಳ ಖರೀದಿ ವಿಚಾರದಲ್ಲಿ ಎಡವಿದ್ದು. ಶಾಸಕರು ರೈತರಲ್ಲಿ ಗೊಂದಲ ಸೃಷ್ಟಿ ಮಾಡಿದ್ದರು ಈ ವರ್ಷ ಸಹ ಖರೀದಿ ಕೇಂದ್ರ ಬಂದ್ ಮಾಡಿ ರೈತರ ಜೀವನದಲ್ಲಿ ಚೆಲ್ಲಾಟ ಆಡದಂತೆ ಶಾಸಕರು ಹಂಪನಗೌಡ ಬಾದರ್ಲಿ ಹಾಗೂ ಅಧಿಕಾರಿಗಳು ನಿಗಾವಹಿಸಬೇಕು. ಏಕೆಂದರೆ ಈಗಾಗಲೇ ಜೋಳ ಕಟಾವು ಮಾಡಿ 15 ದಿನಗಳ ಕಳೆದಿವೆ ನೋಂದಣಿ ಪ್ರಕ್ರಿಯೆ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಎಂದರೆ ಶಾಸಕರು ಎಲ್ಲವನ್ನೂ ಮರೆತಂತೆ ಕಂಡು ಬರುತ್ತದೆ ಎಂದು ಆರೋಪಿಸಿದರು

ಜೂನ್ ತಿಂಗಳವರೆಗೆ ಕುಡಿಯುವುದಕ್ಕೆ ನೀರು ಸರಬರಾಜು ಆಗುತ್ತಿಲ್ಲ ಆದ್ದರಿಂದ ಹತ್ತು ದಿನಕ್ಕೆ ಒಮ್ಮೆ ನೀರು ಬಿಡಿ ಎಂದು ತಾ.ಪಂ. ಇಒ ಅವರೇ ಹೇಳುತ್ತಾರೆ.ಆದರೆ ಮೂರು ನಾಲ್ಕು ತಿಂಗಳುಗಳಲ್ಲಿ ನೀರು ಕೆಟ್ಟ ಹೋಗುತ್ತವೆ ಆದ್ದ–ರಿಂದ ಮಾರ್ಚ್ ತಿಂಗಳಲ್ಲಿ ಎಲ್ಲ ಕೆರೆಗಳನ್ನು ನೀರು ತುಂಬಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ. ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ. ಬಸವರಾಜ ನಾಡಗೌಡ. ಎಸ್ .ದೇವೇಂದ್ರಗೌಡ. ಜಿ ಸತ್ಯನಾರಾಯಣ ವೆಂಕೋಬಣ್ಣ ಎಸ ಪಿ ಟೈಲರ್ ಅಸೀಫ್ ಸೇರಿದಂತೆ ಇತರರು ಇದ್ದರು.

# ಶೈಕ್ಷಣಿಕ ಪ್ರಗತಿಗೆ ಪಾಲಕರ ಸಹಕಾರ ಅಗತ್ಯ: ಪಟ್ಟದ್ದೇವರು



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ:**

ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪಾಲಕರ ಸಹಕಾರ ಅತ್ಯಗತ್ಯವಾಗಿದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ನ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದ ಅನುಭವ ಮಂಟಪದಲ್ಲಿ ಮಂಗಳವಾರ ಆಯೋಜಿಸಿದ್ದ ಮಾಂಟೆಸರಿ ಶಾಲೆಯ 2025–26ನೇ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಅದ್ಭುತ ಶಕ್ತಿ ಅಡಗಿರುತ್ತದೆ. ಶಿಕ್ಷಕರು ಕಾಲಕಾಲಕ್ಕೆ ನೀಡುವ ಸಲಹೆ ಸೂಚನೆಗಳನ್ನು ಪಾಲಕರು ಪಾಲಿಸುವ ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಬೇಕು ಎಂದು ತಿಳಿಸಿದರು.

> ಮೆಟ್ರೋಪಾಲಿಟನ್ ನಂತಹ ನಗರ ಪ್ರದೇಶಗಳಿಗೆ ಸಿಮೀತವಾಗಿದ್ದ ಮಾಂಟೆಸರಿ ಶಿಕ್ಷಣ ಅಪಾರ ದೂರದೃಷ್ಟಿಯೊಂದಿಗೆ ಡಾ.ಬಸವಲಿಂಗ ಪಟ್ಟದ್ದೇವರು ಗ್ರಾಮೀಣ ಭಾಗದಲ್ಲಿ ಆರಂಭಿಸಿದ್ದಾರೆ. ಇದರ ಸದುಪಯೋಗ ಎಲ್ಲ ಪಾಲಕರು ಪಡೆದು ಕೊಳ್ಳಬೇಕು.
>
> **ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ**

ನೇತೃತ್ವ ವಹಿಸಿದ್ದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಮಕ್ಕಳಿನ ಪ್ರತಿಭಾ ಅನಾವರಣಕ್ಕೆ ಮಾಂಟೆಸರಿ ಶಿಕ್ಷಣ ಪೂರಕವಾಗಿದೆ. ಬಾಲ್ಯದಿಂದಲೇ ಉತ್ತಮ ಶಿಕ್ಷಣ, ಸಂಸ್ಕಾರದಂತಹ ಭದ್ರ ಬುನಾದಿ ಕಲ್ಪಿಸಿದರೇ ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದು ತಿಳಿಸಿದರು.ಆಡಳಿತಾಧಿಕಾರಿ ಮೋಹನ ರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿದರು.

ಪ್ರಾಚಾರ್ಯ ಬಸವರಾಜ ಮೊಳಕೀರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಾಲಕರ ಪರವಾಗಿ ಅಭಿವೃದ್ಧಿ ಅಧಿಕಾರಿ ಗೀತಾ ಪಾಟೀಲ್ ಮಾತನಾಡಿದರು.

ಈ ಸಂದರ್ಭದಲ್ಲಿ ಡಾ.ಶಶಿಕಾಂತ ಭೂರೆ,ಸದಾನಂದ,ಡಾ.ಗುಂಡೂರಾವ್ ಶೆಡೋಳೆ, ಎಂಜನಿಯರ್ ಮುಕೇಶ ಚವ್ಹಾಣ, ಪ್ರಥಮ ದರ್ಜೆ ಗುತ್ತಿಗೆದಾರ ರಾಜಕುಮಾರ ಬಿರಾದಾರ್, ಉದ್ಯಮಿ ಅಕ್ಷಯ ಪೆನ್ಸಲವಾರ್, ಡಾ.ಶಿಕ್ಷಾ ಸೂರ್ಯವಂಶಿ, ನೀಲಗಂಗಾ ಎಂ.ಎಚ್, ಕಲ್ಪನಾ, ವಿಶ್ವನಾಥ ಸೇರಿದಂತೆ ಹಲವರು ಇದ್ದರು. ಮಾಂಟೆಸರಿ ಪ್ರಿನ್ಸಿಪಲ್ ಜಯಲಕ್ಷ್ಮಿ ನಿರೂಪಿಸಿ, ವಂದಿಸಿದರು.

# ಎಲ್ಲರೂ ಕೂಡಿ ಕೂಡು ಬಾಳಬೇಕು

## ಗೋಣಿ ರುದ್ರ ಮಹಾಸ್ವಾಮಿಗಳು



ಮಲ್ಲಮ್ಮ ನುಡಿ ವಾರ್ತೆ, ಬಸವಕಲ್ಯಾಣ:

ಎಲ್ಲರೂ ಕೂಡಿ ಕೂಡು ಬಾಳಬೇಕು. ನಮ್ಮ ಮನೆಗಳೆ ಪವಿತ್ರ ದೇವಾಲಯ ಆಗಬೇಕು ಎಂದು ಕೊಹಿನೂರ ಬಸವ ತತ್ವ ಪ್ರಸಾರ ಮತ್ತು ಪ್ರಚಾರ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯಶ್ರೀ ಗೋಣಿ ರುದ್ರ ಮಹಾಸ್ವಾಮಿಗಳು ತಿಳಿಸಿದರು. ತಾಲೂಕಿನ ಕೊಹಿನೂರ ಗ್ರಾಮದಲ್ಲಿ ಗುಂಡಮ್ಮ ಜಗದಯ್ಯ ಹಿರೇಮಠ ಶರಣ ದಂಪತಿಗಳ ಅವರ ನಿವಾಸದಲ್ಲಿ ಮನೆ ಮನೆಗೂ ಮನ ಮನಕ್ಕು ಸಂಸ್ಕಾರ ಎಂಬ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಅವರು ಶಾಂತಿ ಸಮಾಧಾನ ಸಿಗ್ಬೇಕಾದ್ರೆ ಬಸವ ಸಂದೇಶ ಬಹು ಮುಖ್ಯವಾಗಿದೆ ಎಂದರು. ಗ್ರಾಮ ಪಂಚಾಯತ ಸದಸ್ಯರಾದ ಅನುರಾಧ ಅಮರನಾಥ ಜಮಾದಾರ. ನರಸಪ್ಪ ಹಿರೇಮಠದ ಪರಿವಾರದವರು ಭಾಗವಹಿಸಿ ದರು. ವಚನ ಗಾಯನ ವೇ ಮೂರ್ತಿಕರ್ ಬಸಯ್ಯಸ್ವಾಮಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಗಾ. ಪಂ ಮಾಜಿ ಅಧ್ಯಕ್ಷರಾದ ಶಿವಶರಣಪ್ಪ ಸಂತಾಜಿ ಸ್ವಾಗತಿಸಿದರು. ಕೌಶಿಕಯ್ಯಸ್ವಾಮಿ ವಂದಿಸಿದರು.

# ಜಿಲ್ಲಾಧಿಕಾರಿಗಳಿಂದ "ರೇಷ್ಮೆ ಮೇಳ"ಕ್ಕೆ ಚಾಲನೆ

- ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:




ಕೇಂದ್ರ ರೇಷ್ಮೆ ಮಂಡಳಿ, ರಾಜ್ಯ ರೇಷ್ಮೆ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವುಗಳ ಸಹಯೋಗದೊಂದಿಗೆ ಗುಣಮಟ್ಟದ ರೇಷ್ಮೆಗೂಡಿನಿಂದ–ಗುಣ ಮಟ್ಟದ ರೇಷ್ಮೆ ಉತ್ಪಾದನೆಯೆಂಬ ಉದ್ದೇಶದೊಂದಿಗೆ ಇತ್ತೀಚೆಗೆ ಕಾಳಗಿ ತಾಲೂಕಿನ ಚಿಂಚೋಳಿ (ಹೆಚ್) ಗ್ರಾಮದ ಮೇ॥ ಲುಂಬಿನಿ ಸ್ವಯಂ ಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕದಲ್ಲಿ ಆಯೋಜಿಸಲಾದ ರೇಷ್ಮೆ ಬೆಳೆಗಾರರು ಹಾಗೂ ನೂಲು ಬಿಚ್ಚಾಣಿಕೆದಾರರ "ರೇಷ್ಮೆ ಮೇಳ"ಕ್ಕೆ ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌ–ಜಿಯಾ ತರನ್ನುಮ್ ಅವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ರೇಷ್ಮೆ ವಸ್ತು ಪ್ರದರ್ಶನ ಹಾಗೂ ತೋಟಗಾರಿಕೆ ವಸ್ತು ಪ್ರದರ್ಶನದ ಮಳಿಗೆ ಉದ್ಘಾಟಿಸಿ ರೇಷ್ಮೆ ಬೆಳೆಗಾರರು ಹಾಗೂ ನೂಲು ಬಿಚ್ಚಾಣಿಕೆದಾರರನ್ನು ಉದ್ದೇಶಿಸಿ ಮಾತನಾಡಿದರು. ನಂತರ ಅವರು ಉತ್ತಮ ರೇಷ್ಮೆ ಗೂಡು ಬೆಳೆದಂತಹ ಕಲಬುರಗಿ ಹಾಗೂ ಬೀದರ ಜಿಲ್ಲೆಗಳ ಪ್ರಗತಿಪರ ರೇಷ್ಮೆ ಬೆಳೆಗಾರರಿಗೆ ಪ್ರಶಂಸಾ ಪ್ರಮಾಣಪತ್ರ ವಿತರಿಸಿ ಸನ್ಮಾಸಿದರು. ನಂತರ ಸ್ವ–ಯಂ ನೂಲು ಬಿಚ್ಚಾಣಿಕೆ ಘಟಕದ ಕಾರ್ಯಚಟುವಟಿಕೆಯನ್ನು ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಪಂಚಾಯತ್ ರೇಷ್ಮೆ ಉಪನಿರ್ದೇಶಕ ಎಸ್.ಪ್ರಕಾಶ ಬಾಬು ಇಲಾಖಾ ಯೋಜನೆಗಳ ಬಗ್ಗೆ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಧಾರವಾಡ 'ಡಿ' ಸಿ.ಎಸ್.ಬಿ.–ಸಿಎಸ್‌ಟಿಆರ್‌ಐ (CSB-CSTRI) ವಿಜ್ಞಾನಿ ಎಸ್.ಎಮ್.ಹುಕ್ಕೇರಿ, ಕಲಬುರಗಿ ಜಿಲ್ಲಾ ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರವಿಗೌಡ, ಆರ್.ವಿ.ಎಸ್. ಟ್ರೇಡಿಂಗ್ ಕಂಪನಿಯ ಸಿ.ಇ.ಓ. ರೇಷ್ಮಾ ಎ.ಕೆ., ತೋಟಗಾರಿಕೆ ಜಂಟಿ ನಿರ್ದೇಶಕ ಸಂತೋಷ ಇನಾಮದಾರ, ಬೀದರ್ ಜಿಲ್ಲಾ ಪಂಚಾಯತ್ ರೇಷ್ಮೆ ಉಪನಿರ್ದೇಶಕ ರಂಗನಾಥ, ಬೀದರ 'ಬಿ' ಖಇಅ,ಅಖಃ–ಅಖಖ&ಖಘ ವಿಜ್ಞಾನಿ ಡಾ. ಶ್ರೀನಿವಾಸ್.ಕೆ, ಜಿಲ್ಲಾ ಆರೋಗ್ಯಾಧಿಕಾರಿ ಡಾ॥ಶರಣಬಸಪ್ಪಾ ಕ್ಯಾತನಾಳ,

ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಕಾಸ ಸಜ್ಜನ, ಕಲಬುರಗಿ ವಿಭಾಗ ರೇಷ್ಮೆ ಸಹಾಯಕ ನಿರ್ದೇಶಕ ಅನಿಲ ಎಸ್.ವಾಡಿ, ಗೂಡಿನ ನಂತರ ಚಟುವಟಿಕೆ ಜೇವರ್ಗಿ, 500 ಜನ ರೇಷ್ಮೆ ಬೆಳೆಗಾರರು, ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರದ ಮಾಲೀಕರು, ರೀಲಿಂಗ್ ತರಬೇತಿ ಪಡೆದ ನವ ಉದ್ಯಮಿಗಳು, ಕಲಬುರಗಿ ಹಾಗೂ ಬೀದರ್ ಜಿಲ್ಲೆ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಮಂಜುನಾಥ ಆರ್.ಎನ್. ಅವರು ಸ್ವಾಗತಿಸಿದರು. ಕಲಬುರಗಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿ ವೀಣಾ ಹಾಗೂ ಅಣವೀರಪ್ಪ ಅವರು ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಮಹೇಶ್ವರಿ.ವಿ.ಸಜ್ಜನ ವಂದಿಸಿದರು.

# ಬದುಕಿನ ಖುಷಿ ಉತ್ತಮ ಆರೋಗ್ಯದಲ್ಲಿದೆ: ಹಾರಕೂಡ ಶ್ರೀ



- ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :

ಆರೋಗ್ಯ ಎನ್ನುವುದು ಕೇವಲ ದೇಹದ ಸುಸ್ಥಿತಿ ಅಲ್ಲ ಅದು ವ್ಯಾಪಕವಾದ ಅರ್ಥ ಹೊಂದಿದ್ದು, ಅಂತಹ ಉತ್ತಮ ಆರೋಗ್ಯ ಹೊಂದಿದವರ ಬದುಕಿನಲ್ಲಿ ಖುಷಿಯ ಕೊರತೆ ಇರುವುದಿಲ್ಲ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀ ಮಠದಲ್ಲಿ ಕೇರ್ ಅಂಡ್ ಕ್ಯೂರ್ ಹೋಮಿಯೋಪಥಿ ಆಸ್ಪತ್ರೆ ಬಸವಕಲ್ಯಾಣ ವತಿಯಿಂದ ಆಯೋಜಿಸಿದ ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಇಂದಿನ ಧಾವಂತದ ಬದುಕು ಕಲುಷಿತ ವಾತಾವರಣ, ಕಲಬೆರಕೆ ಆಹಾರ, ಪರಿಶ್ರಮವಿಲ್ಲದ ಜೀವನ ಶೈಲಿ ಇವುಗಳಿಂದ ಮನುಷ್ಯ ದೈಹಿಕವಾಗಿ ಮಾನಸಿಕವಾಗಿ ಅಸಮಾತೋಲನ ಸ್ಥಿತಿಯನ್ನು ಅನುಭವಿಸುತ್ತಿದ್ದಾನೆ.

ಹೀಗಾಗಿ ಹೊಸ ಹೊಸ ರೋಗಗಳು ಮನುಷ್ಯನನ್ನು ವಿಪರೀತವಾಗಿ ಪೀಡಿಸುತ್ತಿವೆ.

ವೈದ್ಯ ಲೋಕದ ಪ್ರಾಮಾಣಿಕ ಪ್ರಯತ್ನದಿಂದ ಕೋವಿಡ್ ನಂತಹ ಮಹಾಮಾರಿಯನ್ನು ಮೆಟ್ಟಿನಿಂತಿರುವುದು ಇಲ್ಲಿ ಉಲ್ಲೇಖನೀಯವಾಗಿದೆ.

ವೈದ್ಯರ ಹಾಗೂ ಎಲ್ಲಾ ಆರೋಗ್ಯ ಕಾರ್ಯ ಕರ್ತರ ಸೇವೆ ಸ್ಮರಣೀಯವಾಗಿದ್ದು ಕೇರ್ ಅಂಡ್ ಕ್ಯೂರ್ ಆಸ್ಪತ್ರೆಯವರು ಹಾರಕೂಡ ಶ್ರೀಮಠದಲ್ಲಿ ಆಯೋಜಿಸಿದ ಆರೋಗ್ಯ ತಪಾಸಣೆ ಶಿಬಿರದಿಂದ ಈ ಭಾಗದ ಜನರಿಗೆ ಉತ್ತಮ ಸೇವೆ ದೊರಕುವಂತಾಗಲಿ ಹಾಗೂ ಆಯೋಜಕರಿಗೂ ಮತ್ತು ಸರ್ವರಿಗೂ ಹಾರಕೂಡಧೀಶ ಆಯು–ಆರೋಗ್ಯ ಕರುಣಿಸಲಿ ಎಂದು ಶುಭ ಹಾರೈಸಿದರು.

ಡಾ. ಶೈಲೇಂದ್ರ ವಾಗ್ಮಾರೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಡಾ. ರಾಜಶೇಖರ ಮದರಿ, ಡಾ. ಅಲ್ಕಾ ವಾಗಮಾರೆ, ಪಂಡಿತರಾವ ದೇಗಾಂವ, ನಾಗಣ್ಣ ಪೀರಜೆ, ವೀರಯ್ಯ ಸ್ವಾಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪಂಡಿತ ಪೂಜಾರಿ ಸ್ವಾಗತಿಸಿ ನಿರೂಪಿಸಿದರು.

ಶಿಬಿರದಲ್ಲಿ 100ಕ್ಕೂ ಅಧಿಕ ರೋಗಿಗಳಿಗೆ ಆರೋಗ್ಯ ತಪಾಸಣೆ ಮಾಡಿ, ಚಿಕಿತ್ಸೆ ನೀಡಲಾಯಿತು.



ಬಸವಕಲ್ಯಾಣ :– ಇಲ್ಲಿನ ಬುಧವಾರ ಪೇಟೆನಲ್ಲಿರುವ ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆ ವಿದ್ಯಾ ಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 77. ನೇಯ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಬಸವಲಿಂಗ ಸುಬೇದಾರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಜರಗಿತು. ಪ್ರಧಾನ ಕಾರ್ಯದರ್ಶಿಗಳಾದ ದತ್ತಾತ್ರಿ ಮುಲಗೆ. ನಿರ್ದೇಶಕರಾದ ಶ್ರೀನಿವಾಸ್ ಕಠಾರೆ. ಮುಖ್ಯ ಗುರುಗಳು ಹಾಗೂ ಶಿಕ್ಷಕರಾದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# 77ನೇ ಗಣರಾಜ್ಯೋತ್ಸವ ಆಚರಣೆ




- ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:

ಮಕ್ಕಳು ಬಾಲ್ಯದಿಂದಲೇ ಸಂವಿಧಾನದ ಮಹತ್ವ ಅರಿಯಿರಿ ಅದರಂತೆ ನಡೆದು ಸಮಾಜ ಕಟ್ಟಲು ಸಿದ್ದರಾಗಬೇಕು ಎಂದು ತುಮಕೂರು ಲೋಕಾಯುಕ್ತ ಪೊಲೀಸ್ ಇನ್ಸ್ಪೆಕ್ಟರ್ ತಾಲೂಕಿನ ಬೇಗೂರು ಗ್ರಾಮದ ಶಿವರುದ್ರಪ್ಪ ಮೇಟಿ ಮಾತನಾಡಿದರು. ಅವರು ತಾಲೂಕಿನ ದಾಸ್ತಿಕೊಪ್ಪ ಗ್ರಾಮದಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ 77ನೇ ಗಣರಾಜ್ಯೋತ್ಸವ ಆಚರಣೆ ಸಂಭ್ರಮ ನಿಮಿತ್ಯ ಮಕ್ಕಳನ್ನುದ್ದೇಶಿಸಿ ಮಾತನಾಡುತ್ತ ಸತತ ಪ್ರಯತ್ನದಿಂದ ಎಲ್ಲವನ್ನು ಸಾಧಿಸ ಬಹುದು ಆದ್ದರಿಂದ ಮಕ್ಕಳು ಬಾಲ್ಯದಲ್ಲಿ ಕಷ್ಟಪಟ್ಟು ಓದುವ ಅಬ್ಯಾಸವನ್ನು ರೂಡಿಸಿಕೊಳ್ಳ ಬೇಕು ಇದರಿಂದ ಯಶಸ್ಸು ನಿಮ್ಮದಾಗುತ್ತದೆ ಎಂದರು.

ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ನೀಲಕಂಠಗೌಡ ಪಾಟೀಲ್ ಶಾಲಾ ಧ್ವಜಾರೋಹಣ ನೆರವರೆಸಿದರು.

ಶಾಲಾ ಮುಖ್ಯೋಪಾದ್ಯಯರಾದ ತಿಮ್ಮಾರೆಡ್ಡಿ ಮಾತನಾಡಿದರು. ಶಾಲಾ ಮಕ್ಕಳಿಂದ ಸಾಂಸ್ಕ್ರತಿಕ ಕಾರ್ಯಕ್ರಮ ಜರುಗಿದವು. ಕಾರ್ಯಕ್ರಮದಲ್ಲಿ ಶಾಲಾ ಸಿಬ್ಬಂದಿಗಳು ಉಪಾಧ್ಯಕ್ಷರು ಸರ್ವ ಸದಸ್ಯರು, ವಿದ್ಯಾರ್ಥಿಗಳು ಶಿಕ್ಷಕರು ಹಾಜರಿದ್ದರು.



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ನಾರಂಜಾ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ಡಿ ಕೆ ಸಿದ್ರಾಮ್ ಹುಮನಾಬಾದ್(ಜಯಸಿಂಹನಗರದ)ಆರಾಧ್ಯದೈವ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಅಗ್ಗಿ ತುಳಿದು, ದೇವರ ದಿವ್ಯ ದರ್ಶನವನ್ನು ಪಡೆದುಕೊಂಡು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು.

# ಅದ್ದೂರಿಯಾಗಿ ಜರುಗಿದ ಶ್ರೀ ವೀರಭದ್ರೇಶ್ವರ ಜಾತ್ರೆಯ ರಥೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್:

ತಾಲ್ಲೂಕಿನ ಐತಿಹಾಸಿಕ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಜಾತ್ರೆಯ ಅಂಗವಾಗಿ ನಡೆದ ರಥೋತ್ಸವವು ಸಾವಿರಾರು ಭಕ್ತರ ಸಾನ್ನಿಧ್ಯದಲ್ಲಿ ಭಕ್ತಿಭಾವ ಹಾಗೂ ವೈಭವದಿಂದ ಜರುಗಿ–ತು. ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ದೇವರ ದರ್ಶನ ಪಡೆದು ಹರಕೆ ಸಲ್ಲಿಸಿದರು.

ವಿಶೇಷ ಪೂಜೆ, ಅಲಂಕಾರ ಮತ್ತು ಮಂಗಳವಾದ್ಯಗಳೊಂದಿಗೆ ರಥವನ್ನು ತೇರ ಮೈದಾನದಿಂದ ಎಳೆಯಲಾಯಿತು. ಪೊಲೀಸ್ ಇಲಾಖೆಯ ಸಮರ್ಪಕ ಬಂದೋಬಸ್ತ್ ಹಾಗೂ ದೇವಾಲಯ ಸಮಿತಿ, ಸ್ವಯಂಸೇವಕರ ಸಹಕಾರದಿಂದ ರಥೋತ್ಸವ ಶಾಂತಿಯುತವಾಗಿ



ನೆರವೇರಿತು. ಈ ಸಂದರ್ಭದಲ್ಲಿ ಶಾಸಕರುಗಳು, ಮಾಜಿ ಸಚಿವರು, ವಿವಿಧ ಪಕ್ಷದ ಮುಖಂಡರು, ವಿವಿದ ಸಂಘ ಸಂಸ್ಥೆಯವರು, ಸೇರಿದಂತೆ ಇತರರಿದ್ದರು.

# ಜಾವಿದ್ ಅವಲ್ದಾರ್ ವಿಶೇಷ ಸನ್ಮಾನ



- ಮಲ್ಲಮ್ಮ ನುಡಿ ವಾರ್ತೆ ,ಯಾದಗಿರಿ.

ಸುರಪುರದ ಸನ್ ಶೈನ್ ಶಾಲೆಯಲ್ಲಿ 77ನೇ ಗಣರಾಜ್ಯೋತ್ಸವದ ಸಂಸ್ಕೃತಿಯ ಕಾರ್ಯಕ್ರಮದ ಪ್ರಯುಕ್ತ ಇತೀಚಿಗೆ ರಾಜ್ಯ ಮಟ್ಟದ ವಿಜಯಪುರದಿಂದ ಸಾಹಿತ್ಯ ಕ್ಷೇತ್ರದಲ್ಲಿ ಅಪ್ಪ ಸಾಹಿತ್ಯ ಪ್ರಶಸ್ತಿ ಹಾಗೂ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಹಾರೂಗೇರಿಯ ಹಜೂರ ಪ್ರತಿಷ್ಠಾನದಿಂದ ತಂದೆ ತಾಯಿಯರ ಋಣ ಎಂಬ ಪುಸ್ತಕಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿರುವುದ್ದಕ್ಕೆ ಜಾವಿದ್ ಅವಲ್ದಾರ್ ರವರಿಗೆ ಶಾಲೆಯ ಅಧ್ಯಕ್ಷ ಶಿವರಾಜ ನಾಯಕರವರು ಹಾಗೂ ಸುರಪುರದ ಖ್ಯಾತ ವರ್ತಕರಾದ ಕಿಶೋರ್ ಚಂದ ಜೈನ ಸುರಪುರ ಹಾಗೂ ಅಪ್ಪರಾವ್ ನಾಯಕ ನ್ಯಾಯವಾದಿಗಳು ಸತ್ಯಂಪೇಟರವರು ಹಾಗೂ ಮುಖ್ಯಗುರುಗಳು ಸಾಹೇಬಣ್ಣ ಸುರಪುರ ಸೇರಿ ಅನೇಕ ಪಾಲಕ ಪೋಷಕರು ವಿದ್ಯಾರ್ಥಿಗಳು ಸೇರಿ ವಿಶೇಷವಾಗಿ ಗೌರವಿಸಿ ಸನ್ಮಾನಿಸಿ ಶುಭ ಹಾರೈಸಿ ಅಭಿನಂದಿಸಿದ್ದಾರೆ.

# ಜಾತ್ರಾ ಮಹೋತ್ಸವಗಳಲ್ಲಿ ಸರ್ವ ಸಮಾಜದವರು ಪಾಲ್ಗೊಳ್ಳಿ

- ಮಲ್ಲಮ್ಮ ನುಡಿ ವಾರ್ತೆ ,ಕೊಲ್ಹಾರ:

ಪಟ್ಟಣದಲ್ಲಿ ದೇವಾಂಗ ಸಮಾಜದವರು ಕಡಿಮೆ ಜನಸಂಖ್ಯೆಯಲ್ಲಿದ್ದರು ಕೂಡಾ ಶ್ರೀ ಬನಶಂಕರಿ ದೇವಿಯ ಜಾತ್ರೆಯನ್ನು ಭಕ್ತಿ ಸಂಘಟನೆಯಲ್ಲಿ ಯಾವುದೇ ಸಮಾಜಕ್ಕೂ ಕಡಿಮೆ ಇಲ್ಲದಂತೆ ವಿಜ್ರಂಭಣೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ ಎಂದು ಮಾಜಿ ಸಚಿವ ಎಸ್ ಕೆ ಬೆಳ್ಳುಬ್ಬಿ ಹೇಳಿದರು ಸೋಮವಾರ ಪಟ್ಟಣದಲ್ಲಿ ನಡೆದ ಶ್ರೀ ಬನಶಂಕರಿ ದೇವಿಯ ಜಾತ್ರಾಮಹೋತ್ಸವದಲ್ಲಿ ಹಾಸ್ಯರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು ಪಟ್ಟಣದಲ್ಲಿರುವ ಎಲ್ಲ ದೇವಾನು ದೇವತೆಗಳು, ಮಸೀದಿ ದರ್ಗಾ ಗಳಲ್ಲಿ ನಡೆಯುವ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಹಿಂದೂ ಮುಸ್ಲಿಂ ಸೇರಿದಂತೆ ಸರ್ವ ಸಮಾಜದವರು ಭಾಗವಹಿಸಬೇಕಾಗಿರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಯಾರು ನಮಗೆ ಜಾತ್ರೆಗೆ ಬನ್ನಿ ಎಂದು ಕರೆಯುವಂತಿಲ್ಲದಲ್ಲಾ ಪ್ರತಿಯೊಬ್ಬರೂ ಇಂತಹ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಜನ್ಮ ಕೊಟ್ಟ ತಾಯಿ ಹಾಗೂ ಜನ್ಮ ಭೂಮಿಯ ಋಣವನ್ನು ನಾವು ನೀವುಗಳು ತೀರಿಸಬೇಕಾಗಿದೆ ಎಂದರು

ಈ ವೇಳೆಯಲ್ಲಿ ಅಲ್ಹಾಜ್ ಅಯ್ಯೂಬ ಖಾನ್ ಭಕ್ತಿಯರಖಾನ್ ಪಠಾಣ ಮತ್ತು ಸೋಮನಗೌಡ ಪಾಟೀಲ(ಮನಗೂಳಿ) ಕೈಲಾಸನಾಥ ಸ್ವಾಮೀಜಿಗಳು ,ಸಿ ಎಮ್ ಗಣಕುಮಾರ, ಬಸಪ್ಪ ಗಾಜಿ,ದ್ಯಾವಪ್ಪ ತುಂಬರಮಟ್ಟಿ,ಶ್ರೀಶೈಲ ಅಥಣಿ ,ಬಾಬು ಭಜಂತ್ರಿ,ಸುಭಾಸ ಭಜಂತ್ರಿ,ಅಪ್ಪಸಿ ಮಟ್ಯಾಳ ,ಕಲ್ಲು ಸೊನ್ನದ, ಗೂಳಪ್ಪ ವಾಲಿಕಾರ,ಹಣಮಂತ ಗೌ–ರೋಜಿ, ಸಂತೋಷ ಹಡ್ರೋಳ್ಳಿ, ಹಣಮಂತ ಕೊಠಾರಿ, ಅಶೋಕ ಗಿಡ್ಡಪ್ಪಗೋಳ, ಮಲ್ಲಪ್ಪ ಗಣಿ ಇತರರಿದ್ದರು.

# ಜ.30ರಿಂದ 24ನೇ ವಚನ ವಿಜಯೋತ್ಸವ: ಡಾ.ಗಂಗಾಂಬಿಕೆ ಅಕ್ಕ

ಮಲ್ಲಮ್ಮ ನುಡಿ ವಾರ್ತೆ ಬೀದರ್ :

ಬಸವಾದಿ ಶರಣ ವಚನಗಳು, ಮಾನವ ಬದುಕಿನ ದಾರಿಯಲ್ಲಿ ಹಚ್ಚಿಟ್ಟ ದೀಪಗಳು. ಸಮಾನತೆ, ಸಹಕಾರ–ಸಹಬಾಳ್ವೆ, ಸಾಮಾಜಿಕ ನ್ಯಾಯ ಹಾಗೂ ಮಾನವೀಯತೆಯ ಧರ್ಮದ ನುಡಿ ರಚನೆಗಳು.12ನೇ ಶತಮಾನದ ಶರಣರ ಸ್ವಾನುಭಾವದಿಂದ ಮೂಡಿ ಬಂದಿರುವ ಈ ಶ್ರೇಷ್ಠ ನುಡಿಗಳು ಇಂದು ನಮಗೆ ಉಳಿದು ಬಂದಿದ್ದೇ ರೋಚಕ ಸಂಗತಿ.ಶರಣರ ಬಲಿದಾನ ಹಾಗೂ ವೀರಗಾಥೆಯ ಕಾರ್ಯಗಳಿಂದ ಉಳಿದು ಬಂದಿರುವ "ವಚನ ಸಾಹಿತ್ಯ ಸಂರಕ್ಷಣೆ" ಸ್ಮರಣೆಗಾಗಿ ಪ್ರತಿ ವರ್ಷ ವಚನ ವಿಜಯೋತ್ಸವ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದು ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಗಂಗಾಂಬಿಕೆ ಅಕ್ಕ ನುಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ




ಮಾತನಾಡಿದ ಅವರು, 24ನೇ ವಚನ ವಿಜಯೋತ್ಸವವನ್ನು ಜನವರಿ 30,31 ಮತ್ತು ಫೆಬ್ರವರಿ 01 ರಂದು ಮೂರು ದಿನಗಳ ಕಾಲ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ಅಗತ್ಯ ಸಿದ್ಧತೆಗಳು ಭರದಿಂದ ನಡೆಯುತ್ತಿವೆ ಎಂದರು.

ಜನವರಿ 30 ರಂದು ಮುಂಜಾನೆ 8.00 ಗಂಟೆಗೆ ಸಾಮೂಹಿಕ ಇಷ್ಟಲಿಂಗ ಪೂಜಾಯೋಗವು ಪೂಜ್ಯ' ಸಿದ್ಧರಾಮ ಶರಣರು ಬೆಲ್ದಾಳ ಹಾಗೂ ಇನ್ನಿತರ ಪೂಜ್ಯರ ಸಾನಿಧ್ಯದಲ್ಲಿ ನಡೆಯಲಿದ್ದು, ಬಸವಕಲ್ಯಾಣ ಕ್ಷೇತ್ರ ಸಮಿತಿ ಸಂಯೋಜ–ಕ ಬಸವರಾಜ ಪಾಟೀಲ ಸೇಡಂ ಉದ್ಘಾಟಿಸುವರು.ಡಾ.ವಿಜಯಶ್ರೀ ಬಶೆಟ್ಟಿ ಧ್ವಜಾರೋಹಣಗೈಯುವರು ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ಪಿ.ರುದ್ರಪ್ಪಾ ಕುರಕುಂದಾ ಅನುಭಾವ ನೀಡುವರು, ಅಂದು ಮುಂಜಾನೆ 11.00 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷರಾದ ನಾಡೋಜ ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರ ಹಾಗೂ ಹುಲಸೂರಿನ ಪೂಜ್ಯ ಡಾ. ಶಿವಾನಂದ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ತಮ್ಮ ನೇತೃತ್ವದಲ್ಲಿ ತೆಲಂಗಾಣ ರಾಜ್ಯದ ವಾರಂಗಲದ ಪಾಲಕುರಿಕೆ ಸೋಮನಾಥ ಕಲಾ ಪೀಠದ ಅಧ್ಯಕ್ಷ ಡಾ. ರೂಪಾಲು ಸತ್ಯನಾರಾಯಣ ಉದ್ಘಾಟಿಸುವರು. ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು ವಚನ ವಿಜಯೋತ್ಸವ ಸ್ವಾಗತ ಸಮಿತಿ ಅಧ್ಯಕ್ಷರಾದ ಈಶ್ವರ ಖಂಡ್ರೆ ಅಧ್ಯಕ್ಷತೆ ವಹಿಸಿಕೊಳ್ಳುವರು. ಹಿರಿಯ ಸಾಹಿತಿ ಪ್ರೊ. ಎಸ್.ಜಿ.ಸಿದ್ದರಾಮಯ್ಯ ಅನುಭಾವ ನೀಡುವರು ಸಾಹಿತಿ ಡಾ. ಬಸವರಾಜ ಸಬರದ, ಮಾಜಿ ಸಚಿವರಾದ ರಾಜಶೇಖರ ಪಾಟೀಲ, ಬಂಡೆಪ್ಪ ಖಾಸೇಂಪೂರ, ಬುಡಾ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಕುರುಪತಿ ನೀಲಕಂಠೇಶ್ವರ ಪ್ರಸಾದ, ದೇವರಾಜ ಬಿ.ಲಿಗಾಡೆ ಸೇರಿದಂತೆ ಇತರರು ಪಾಲ್ಗೊಳ್ಳುವರು.

ಮಧ್ಯಾಹ್ನ 3.00 ಗಂಟೆಗೆ ಸ್ತ್ರೀ ಶಕ್ತಿ ಸಮಾವೇಶ: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹಾಗೂ ಖ್ಯಾತ ವೈದ್ಯರಾದ ಡಾ. ವಿಜಯಲಕ್ಷ್ಮಿ ದೇಶಮಾನೆ ಉದ್ಘಾಟಿಸುವರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆ ನಿರ್ದೇಶಕಿ ಗೀತಾ ಖಂಡ್ರೆ ಗುರುಪೂಜೆ ನೇರವೇರಿಸುವರು. ಅಭಾವಿಲಿಮ ರಾಷ್ಟ್ರೀಯ ಉಪಾಧ್ಯಕ್ಷೆ ಡಾ.ಗುರಮ್ಮಾ ಸಿದ್ದಾರೆಡ್ಡಿ ಅಧ್ಯಕ್ಷತೆ ವಹಿಸಿಕೊಳ್ಳುವರು. ಚಿತ್ರದುರ್ಗದ ಬಸವತತ್ವ ಚಿಂತಕಿ ಡಿ.ಶಬ್ರಿನಾ ಅನುಭಾವ ನೀಡುವರು

.ಸಾಯಂಕಾಲ : 6.00 ಗಂಟೆಗೆ ಶರಣ ಕಲಾವೈಭವವು ಮಾತೆ ಮೈತ್ರಾದೇವಿ ಸಾನಿಧ್ಯದಲ್ಲಿ ಪ್ರೊ. ಸಿದ್ರಾಮಪ್ಪಾ ಮಾಸಿಮಡೆ ಉದ್ಘಾಟಿಸುವರು. ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯ ಮಕ್ಕಳಿಂದ ಶಿವಯೋಗಿ ಸಿದ್ಧರಾಮೇಶ್ವರ ನಾಟಕ ನಡೆಯಲಿದೆ. ಸುವರ್ಣಾ ಚಿಮಕೋಡೆ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದು, ಶಾಂತಬಾಯಿ ಬಿರಾದಾರ, ಸುನಿತಾ ದಾಡಗೆ ಉಪಸ್ಥಿತರಿರುವರು ಎಂದರು.ಜ.31 ರಂದು ಬೆಳಗ್ಗೆ 8 ಗಂಟೆಗೆ ಸಾಮೂಹಿಕ ವಚನ ಪಾರಾಯಣ:ಪೂಜ್ಯ ಬಸವಪ್ರಭು ಸ್ವಾಮಿಗಳ ಸಾನಿಧ್ಯದಲ್ಲಿ ಡಿಡಿಪಿಐ ಸುರೇಶಗೌಡ ಎಚ್.ಜಿ ಉದ್ಘಾಟಿಸುವರು. ಮುದ್ದೆ ಬಿಹಾಳದ ಬಸವತತ್ವ ಚಿಂತಕರಾದ ರುದ್ರೇಶ ಕಿತ್ತೂರ ಅನುಭಾವ ನೀಡುವರು. ವಿವಿಧ ಶಾಲೆಯ 1008 ಮಕ್ಕಳಿಂದ ಸಾಮೂಹಿಕ ವಚನ ಪಾರಾಯಣ ನಡೆಯಲಿದೆ.

# ಸಚಿವ ಗಿರೀಶ್ ಮಹಾಜನನ್ನು ವಜಾ ಮಾಡಿ ಅಟ್ರಸಿಟಿ ಹಾಗೂ ದೇಶದ್ರೋಹ

## ಪ್ರಕರಣ ದಾಖಲಿಸಲು ಆಗ್ರಹ



ಮಲ್ಲಮ್ಮ ನುಡಿ ವಾರ್ತೆ,ನಾಶಿಕ್: ನಾಶಿಕ್‌ನಲ್ಲಿ ಸೋಮವಾರ 26 ಗಣರಾಜ್ಯೋತ್ಸವ ಭಾಷಣದ ವೇಳೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರು ಉಲ್ಲೇಖಿಸದಿರುವುದಕ್ಕೆ ಮಹಾರಾಷ್ಟ್ರದ ಜಲಸಂಪನ್ಮೂಲ ಸಚಿವ ಗಿರೀಶ್ ಮಹಾಜನ್ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ ಅವರನ್ನು ಕೂಡಲೇ ಸರ್ಕಾರದಿಂದ ವಜಾ ಮಾಡಿ ಅವರ ವಿರುದ್ಧ ಅಟ್ರಾಸಿಟಿ ಮತ್ತು ದೇಶದ್ರೋಹ ಪ್ರಕರಣ ದಾಖಲೆ ಮಾಡಬೇಕು ಅಂಬೇಡ್ಕರ್ ಅವರ ಹೆಸರನ್ನು ಉಲ್ಲೇಖಿಸಿರಲಿಲ್ಲ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಮಾಧ್ವಿ ಜಾಧವ್ ಅವರು , 'ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಸಂಬಂಧವಿಲ್ಲದವರ ಹೆಸರುಗಳನ್ನು ಉಲ್ಲೇಖಿಸುತ್ತಿದ್ದೀರಿ. ಆದರೆ, ಗಣರಾಜ್ಯೋತ್ಸವದ ಗೌರವಕ್ಕೆ ನಿಜವಾಗಿ ಅರ್ಹರಾದ ಅಂಬೇಡ್ಕರ್ ಅವರ ಹೆಸರನ್ನು ಏಕೆ ಹೇಳಲಿಲ್ಲ' ಎಂದು ಪ್ರಶ್ನಿಸಿದರು. ಇಂಥ ಮನಸ್ಥಿತಿ ಇರತಕ್ಕಂತ ಸಚಿವರನ್ನು ತಕ್ಷಣವೇ ಮಹಾರಾಷ್ಟ್ರ ಸರ್ಕಾರ ವಜ ಮಾಡಿ ಇವರ ವಿರುದ್ಧ ದೇಶದ್ರೋಹದಡಿಯಲ್ಲಿ ಪ್ರಕರಣ ದಾಖಲೆ ಮಾಡಬೇಕು ಹಾಗೂ ಮಾದೇವಿ ಜಾದವರನ್ನು ಮಹಾರಾಷ್ಟ್ರ ಸರ್ಕಾರದಿಂದ ಗೌರವ ಪೂರಕವಾಗಿ ನಡೆದುಕೊಳ್ಳಬೇಕು ಮುಂದೆ ಎಂಥ ಘಟನೆ ಆದರೆ ಅದಕ್ಕೆ ನೇರವಾಗಿ ಸರಕಾರವೇ ಪ್ರಕರಣವನ್ನು ದಾಖಲಿಸುವಂತಹ ಕೆಲಸ ಮಾಡಬೇಕು ಎಂದು ಪೃಥ್ವಿರಾಜ ಎಸ್ ಅವರು ಮಹಾರಾಷ್ಟ್ರ ಸರ್ಕಾರವನ್ನು ಪತ್ರಿಕಾ ಪ್ರಕಟಣೆಯ ಮೂಲಕ ರಾಜ್ಯಪಾಲರಿಗೆ ಆಗ್ರಹ ಮಾಡಿದರೆ

# ರಾಯಣ್ಣನ ಮನೋಜ್ಞ ಪ್ರದರ್ಶನ



• ಮಲ್ಲಮ್ಮ ನುಡಿ ವಾರ್ತೆ ,ಕೆಂಭಾವಿ:

ಗಣರಾಜ್ಯೋತ್ಸವದ ಅಂಗವಾಗಿ ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಶಾಲೆ ಮಕ್ಕಳ ಸಾಂಸ್ಕೃತಿಕ ಕಾಲ ಪ್ರದರ್ಶನದಲ್ಲಿ ಇಲ್ಲಿನ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಪ್ರಸ್ತುತ ಪಡಿಸಿದ ಕಿತ್ತೂರು ಸಂಸ್ಥಾನದ ವೀರ ರಾಣಿ ಚೆನ್ನಮ್ಮಳ ಬಲಗೈ ಭಂಟ ಸಂಗೊಳ್ಳಿ ರಾಯಣ್ಣನ ಪ್ರಮುಖ ಪಾತ್ರದ ರೂಪಕ ನಾಟಕ ನೋಡುಗರ ಮೆಚ್ಚುಗೆ ಪಾತ್ರವಾಯಿತು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧದ ಅವರ ಸಾವಿನವರೆಗೂ ಹೋರಾಡಿದ್ದು, ಥ್ಯಾಖರೆ, ರಾಣಿ ಚನ್ನಮ್ಮ ಮತ್ತು ರಾಯಣ್ಣನ ತಾಯಿ ಕೆಂಚವ್ವಳೊಂದಿಗಿನ ಸಂಭಾಷಣೆಗಳ ಮಕ್ಕಳ ಅಭಿನಯದ ಕಿರು ನಾಟಕ ಸಭಿಕರನ್ನು ಭಾವದ್ವೇಗಗೊಳಿಸಿತು. ದೇಶಭಕ್ತಿಯ ರಾಯಣ್ಣ ಕಚ್ಚೆದೆಯ ಮಾತುಗಳಿಗೆ ಬಂದ ಹರ್ಷೋದ್ಘಾರ, ಶಿಳ್ಳೆ, ಚಪ್ಪಾಳೆ ಮುಗಿಲು ಮುಟ್ಟಿತು.

ಕೆಚ್ಚೆದೆಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ದೇಶಭಕ್ತಿಯ ಮಕ್ಕಳ ಮನೋಜ್ಞಪ್ರದರ್ಶನ ಪುರಸಭೆಯಿಂದ ಪ್ರಥಮ ಬಹುಮಾನ ಪಡೆದುಕೊಂಡು, ಶಾಲೆಯ ಶಿಕ್ಷಕರು ಮತ್ತು ಆಡಳಿತ ಮಂಡಳಿ ಸೇರಿದಂತೆ ಹಲವರು ಅಭಿನಂದಿಸಿ ಶ್ಲಾಘಿಸಿದರು.

# ಸಮಗ್ರ ದೇಶದ ಅಭಿವೃದ್ಧಿಗೆ ಮಹಾನ್ ವ್ಯಕ್ತಿಗಳ ಪ್ರೇರಣೆ: ರಾಮು ದೊರೆ ಗೌಡಗೆರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



ನಾಡಿನಲ್ಲಿ ಪ್ರತಿಯೊಬ್ಬರು ಎಷ್ಟೇ ಬಡತನ ಆರ್ಥಿಕ ಸಮಸ್ಯೆ ಇದ್ದರೂ ತಮ್ಮ ಮಕ್ಕಳನ್ನ ಶಿಕ್ಷಣ ವಂತರನ್ನಾಗಿ ಮಾಡುವ ಉದ್ದೇಶ ಪ್ರಕಟಿಕೊಳ್ಳಬೇಕು, ಸಮಗ್ರದೇಶದ ಅಭಿವೃದ್ಧಿಗೆ ಮಹಾನ್ ವ್ಯಕ್ತಿಗಳ ಪ್ರೇರಣೆ ಆಗಲಿ ಎಂದು ಶಾಲೆಯ ಎಸ್ ಎ ಡಿ ಎಂ ಸಿ ಅಧ್ಯಕ್ಷ ರಾಮು ದೊರೆ ಗೌಡಗೆರ ಹೇಳಿದರು.

ಯಾದಗಿರಿ ತಾಲೂಕಿನ ಗೌಡಗೇರಾ ಗ್ರಾಮದಲ್ಲಿ ಸಾರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 77 ನೇ ಗಣರಾಜ್ಯೋತ್ಸವದಲ್ಲಿ ಧ್ವಜಾ– ರೋಣ ನೆರವೇರಿಸಿ ಮಾತನಾಡಿದ ಶಾಲೆಯ ಎಸ್ ಎ ಡಿ ಎಂ ಸಿ ಅಧ್ಯಕ್ಷ ರಾಮು ದೊರೆ ಗೌಡಗೆರ ಮಾತನಾಡಿದರು.

ಮನುಷ್ಯ ಪ್ರತಿದಿನ ಸಮಯವನ್ನು ವ್ಯರ್ಥ ಮಾಡಿ ತಮ್ಮ ಮಕ್ಕಳ ಜೀವನವನ್ನು ಹಾಳು ಮಾಡುವ ಕೆಲಸ ಮಾಡುತ್ತಿದ್ದು, ಮಕ್ಕಳನ್ನ ಶಿಕ್ಷಣವಂತಾರನಾಗಿ, ನಾಡಿನ ಪ್ರಜೆ– ಯಾಗಿ ಮಾಡುವ ಸದ್ದುದ್ದೇಶ ನಮ್ಮದಾಗಬೇಕು,

ಡಾ. ಬಿ ಆರ್ ಅಂಬೇಡ್ಕರ್ ಈ ದೇಶಕ್ಕೆ ಶೋಷಿತ ವರ್ಗದ ಸರ್ವ ಜಾತಿಗೆ ಸಂವಿಧಾನದ ಹಕ್ಕುನ್ನು ನೀಡಿದ್ದಾರೆ, ಸವಿಧಾನವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಅವುಗಳನ್ನು ಬಳಕೆ ಮಾಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರು ಪರಶುರಾಮ್ ಮ್ಯಾಗೇರಿ, ಶಿವುಕುಮಾರ ಜುಲ್ಪಿ, ಕೆ.ಕುಮಾರ್ ನಾಯಕ, ನಾಗಪ್ಪ, ದೇಸಾಯಿ, ಮಹದೇವಪ್ಪ ನರಸಪ್ಪನವರ್ , ಮಲ್ಲು ಪೂಜಾರಿ, ಸುಭಾಷ್ ದೊರೆ, ರಂಗನಾಥ, ದೇವು ದೊ– ರೆ, ದೊಡಮನಿ, ರಾಜೂಗೌಡ, ಮಲ್ಲು ದೊರೆ, ಸವಿತಾ ಕುರುವತಿ, ಪಾರ್ವತಿ, ಹೇಮಾವತಿ, ಕೆ.ಲಕ್ಷ್ಮಿ, ಸಾಬಮ್ಮ, ಸುನೀತಾ, ಸುಮಿತ್ರಾ , ಉಪಸ್ಥಿತರಿದ್ದರು.

# 2026ನೇ ಸಾಲಿನ ಶಾಲಾ ಮುಖಂಡರ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆ,ಬೀದರ:

ಜನವರಿ : ಬೆಂಗಳೂರಿನ "ಶಾಲಾ ಮುಖಂಡರ ಪ್ರಶಸ್ತಿ ಸಮ್ಮೇಳನ 2026" 'ಇತ್ತಿಚೆಗೆ ನಡೆದ ಬೀರ್ಸ್ ಸೌಹಾರ್ದ ಭವನದಲ್ಲಿ ಈ ಸಮ್ಮೇಳನದಲ್ಲಿ ವಿಸ್ಡಮ್ ಮ್ಯಾನೇಜಮೆಂಟ್‌ನ ಸೇವೆಗಳನ್ನು ಪರಿಗಣಿಸಿ, ವಿಸ್ಡಮ್ ಸಂಸ್ಥೆಯ ಕಾರ್ಯದರ್ಶಿ ಮುಹಮ್ಮದ ಸಲಾಹುದ್ದೀನ್ ಫರ್ಹಾನ್ ಅವರಿಗೆ ಮುಖ್ಯ ಅತಿಥಿಗಳಾದ ಶ್ರೀ ನಸೀರ್ ಅಹ್ಮದ ಎಂ.ಎಲ್.ಸಿ ಕರ್ನಾಟಕ ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಮತ್ತು ಫೆಡರೇಶನ್ ಆಫ್ ಮೈನಾರಿಟಿ ಎಜುಕೇಷನಲ್ ಇನ್ಸಿ ಟ್ಯೂಷನ್ಸನ (ಈಒಇಖ) ಕೇಂದ್ರ ಮತ್ತು ರಾಜ್ಯದ ಪದಾಧಿಕಾರಿಗಳು ಸೇರಿ "ಶಾಲಾ ಮುಖಂಡರ ಪ್ರಶಸ್ತಿ 2026" ನೀಡಿ ಸನ್ಮಾನಿಸಿದರು.

# ಡಾ. ಅಂಬೇಡ್ಕರ್ ನಿಗಮದ ಗುತ್ತಿಗೆ ನೌಕರನ ನಿಯೋಜನೆ ಕೈಬಿಡದಿದ್ದರೆ ಉಗ್ರ ಹೋರಾಟ:ಯರಗೋಳ

• ಮಲ್ಲಮ್ಮ ನುಡಿ ವಾರ್ತೆ ,ಯಾದಗಿರಿ.

ಜಿಲ್ಲೆಯ ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಗರ್ ಸಜ್ಜನ್ ಈತನನ್ನು ನಿಯುಕ್ತಿಗೊಳಿಸಬಾರದೆಂದು ಪ್ರಧಾನ ವ್ಯವಸ್ಥಾಪಕರು ಆದೇಶ ಮಾಡಿದ್ದರೂ ಅವರನ್ನು ಮುಂದುವರೆಸುತ್ತಿರುವುದನ್ನು ಕೈಬಿಟ್ಟು ತಕ್ಷಣ ಅವರನ್ನು ಕೈಬಿಡುವಂತೆ ಆಗ್ರಹಿಸಿ ಅಂಬೇಡ್ಕರ್ ಸೇನೆ ಮನವಿ ಸಲ್ಲಿಸಿದೆ.

ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿ ಯಾದಗಿರಿಯ ಡಾ।ಬಿ.ಆರ್. ಅಂಬೇಡ್ಕರ್



ಅಭಿವೃದ್ಧಿ ನಿಗಮದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಾಗರ್ ಸಜ್ಜನ್ ಈತನನ್ನು ನಿಗಮಕ್ಕೆ ನಿಯೋಜಿಸಬಾರದೆಂದು ಸೂಚಿಸಿ ಪತ್ರ ಬರೆದಿದ್ದರೂ ಕೂಡಾ ಮುಂದುವರೆಸಿದ್ದು, ಸದರಿಯವರನ್ನು ಒಂದು ವಾರದೊಳಗೆ ಬಿಡುಗಡೆಗೊಳಿಸದೇ ಇದ್ದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ಮಾಡಲಾಗುವುದೆಂದು ಎಚ್ಚರಿಕೆ ನೀಡಿದ್ದಾರೆ.

ಸದರಿ ನೌಕರನ ವಿರುದ್ಧ ಆರ್ಥಿಕ ಅಪರಾಧದ ಆರೋಪಗಳು ಸಾರ್ವಜನಿಕರಿಂದ ದೂರುಗಳು ಇರುವುದರಿಂದ ಅವರನ್ನು ನಿಗಮದ ಕೆಲಸಕ್ಕೆ ನಿಯುಕ್ತಿ ಮಾಡದಂತೆ ಈಗಾಗಲೇ ಮನವಿ ಸಲ್ಲಿಸಿದ್ದು ಅದರನ್ವಯ ಪ್ರಧಾನ ವ್ಯವಸ್ಥಾಪಕರು ಆದೇಶ ಮಾಡಿರುತ್ತಾರೆ.

ಆದರೆ ಇದುವರೆಗೆ ಅವರನ್ನು ಕೈಬಿಡುವ ಕೆಲಸ ಮಾಡದೇ ಇರುವುದರಿಂದ ಮತ್ತೆ ಮನವಿ ಸಲ್ಲಿಸಿದ್ದು,

ಒಂದು ವಾರದೊಳಗೆ ಬಿಡುಗಡೆಗೊಳಿಸದೇ ಇದ್ದಲ್ಲಿ ಹೋರಾಟ ನಡೆಸಲಾಗುವುದು ಎಂದು ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಭೀಮಾಶಂಕರ ಯರಗೋಳ ಎಚ್ಚರಿಸಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಂಜುನಾಥ,ಶಿಲ್ಪಾ,ಮಮತಾ,ಶಿವಕುಮಾರ, ಶರಣಪ್ಪ,ಮಹೇಶ,ಗೊವಿಂದ,ಹನುಮೇಶ ಇದ್ದರು.

# ಸಮಾನ ವಯಸ್ಕರಿಂದ ಮಕ್ಕಳಿಗೆ ಸೈಕಲ್ ವಿತರಣೆ



ದೂರದಿಂದ ಬರುವ ಮಕ್ಕಳಿಗೆ ಉತ್ತಮವಾದ ಶಿಕ್ಷಣ ದೊರೆಯಲಿ ಮಕ್ಕಳ ಭವಿಷ್ಯ ಉಜ್ವಲ ಗೊಳ್ಳಲಿ ಎಂಬ ಸಂಕಲ್ಪದೊಂದಿಗೆ ನಮ್ಮ ಸಮಾನ ವಯಸ್ಕರರೂ ಸೇರಿ ಮಕ್ಕಳಿಗೆ ಉಚಿತ ಸೈಕಲ್ ವ್ಯವಸ್ಥೆ ಮಾಡಿದ್ದೇವೆ, ನಾವು ಓದುವಾಗ ಸರ್ಕಾರ ನಮಗೆ ನೀಡಿದ ಸೈಕಲ್ಲು ಇಂದು ಓದುವ ವಿದ್ಯಾರ್ಥಿಗಳಿಗಿಲ್ಲ ಸೌಲಭ್ಯ ಬೇಸರವಾಗಿ ನಾವೆಲ್ಲ ಸೇರಿಕೊಂಡು ಮಾಡಿರುವ ಚಿಕ್ಕ ಅಳಿಲು ಸೇವೆ.

**ಬಸವರಾಜ್ ಕುಂಬಾರ ಸಮಾಜ ಸೇವಕರು.**

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಬಳಿಚಕ್ರ ತಾಂಡಾ ಹಾಗೂ ಜಿಲ್ಲಾಪುರ ಗ್ರಾಮಗಳಿಂದ ಪ್ರತಿದಿನ ನಡೆದುಕೊಂಡು ಸರಕಾರಿ ಪ್ರೌಢಶಾಲೆಗೆ ತೆರಳುತ್ತಿದ್ದ ಮಹಿಳಾ ವಿದ್ಯಾರ್ಥಿಗಳಿಗೆ ಸೈಕಲ್ ವ್ಯವಸ್ಥೆ ಮಾಡಿದ ಯುವಕರ ಕಾರ್ಯ ಶ್ಲಾಘನೀಯವಾಗಿದೆ, ಗ್ರಾಮೀಣ ಪ್ರದೇಶದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಹತ್ವದ ಸಹಕಾರವಾಗಲಿದೆ ಎಂದು ಮಾಜಿ ತಾಲೂಕ ಪಂಚಾಯತಿ ಸದಸ್ಯ ಹಣಮಂತ ಬೋಹಿನ್ ಹೇಳಿದರು. ತಾಲೂಕಿನ ಬಳಿಚಕ್ರ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ 77 ನೇ ಗಣರಾಜ್ಯೋತ್ಸವ ಅಂಗವಾಗಿ ಮಕ್ಕಳಿಗೆ ಸೈಕಲ್ ವಿತರಿಸಿ ಮಾತನಾಡಿದರು.

ದೂರ ಮತ್ತು ಶ್ರಮದಿಂದ ಉಂಟಾಗುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ಈ ವರೆಗೆ ವಿದ್ಯಾರ್ಥಿನಿಯರು ದೂರದ ಕಾರಣದಿಂದಾಗಿ ಶಾಲೆಗೆ ಹೋಗಿ ಬರುವಲ್ಲಿ ಹೆಚ್ಚಿನ ಸಮಯ ಮತ್ತು ಶ್ರಮ ವ್ಯಯಿಸಬೇಕಾಗುತ್ತಿತ್ತು. ದಿನನಿತ್ಯದ ದೀರ್ಘ ಪ್ರಯಾಣದಿಂದ ದೈಹಿಕ ದಣಿವು ಉಂಟಾಗುತ್ತಿದ್ದು, ಕೆಲ ಸಂದರ್ಭಗಳಲ್ಲಿ ಹಾಜರಾತಿಯ ಮೇಲೂ ಪರಿಣಾಮ ಬೀರುತ್ತಿತ್ತು. ಈ ಹಿನ್ನೆಲೆಯಲ್ಲಿ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸೈಕಲ್ ವಿತರಣೆಯ ಯೋಜನೆ ಕೈಗೊಳ್ಳಲಾಯಿತು.

ಸಮಯ ಉಳಿತಾಯದಿಂದ ಶಿಕ್ಷಣದ ಮೇಲೆ ಹೆಚ್ಚಿನ ಗಮನಸೈಕಲ್‌ಗಳ ಬಳಕೆಯಿಂದ ಮಕ್ಕಳಿಗೆ ಶಾಲೆಗೆ ಹೋಗಿ ಬರುವ ಸಮಯದಲ್ಲಿ ಗಮನಾರ್ಹ ಉಳಿತಾಯವಾಗಲಿದೆ. ಶ್ರಮ ಕಡಿಮೆಯಾಗುವುದರಿಂದ ವಿದ್ಯಾರ್ಥಿನಿಯರು ಪಾಠಾಭ್ಯಾಸದ ಮೇಲೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗಲಿದೆ. ಇದರೊಂದಿಗೆ ಶಾಲಾ ಹಾಜರಾತಿ ಹೆಚ್ಚುವ ನಿರೀಕ್ಷೆಯಿದ್ದು, ಕಲಿಕಾ ಉತ್ಸಾಹ ಮತ್ತು ಆತ್ಮವಿಶ್ವಾಸದಲ್ಲೂ ಸ್ಪಷ್ಟವಾದ ಬದಲಾವಣೆ ಕಾಣಿಸಿಕೊಳ್ಳಲಿದೆ. ಗ್ರಾಮೀಣ ಹಾಗೂ ತಾಂಡಾ ಪ್ರದೇಶದ ಮಕ್ಕಳ ಭವಿಷ್ಯಕ್ಕೆ ಬೆಂಬಲ ಗ್ರಾಮೀಣ ಮತ್ತು ತಾಂಡಾ ಪ್ರದೇಶದ ಮಕ್ಕಳಿಗೆ ಇಂತಹ ಸೌಲಭ್ಯಗಳು ಲಭ್ಯವಾಗುವುದು ಅವರ ಶಿಕ್ಷಣದ ಮುಂದುವರಿಕೆಗೆ ಬಹುಮುಖ್ಯವಾಗಿದೆ. ಸೈಕಲ್ ಕೇವಲ ಸಂಚಾರ ಸಾಧನವಲ್ಲದೆ, ಶಿಕ್ಷಣದ ಹಾದಿಗೆ ದಾರಿ ಮಾಡಿಕೊಡುವ ಪ್ರಮುಖ ಸಾಧನವಾಗಿದ್ದು, ವಿಶೇಷವಾಗಿ ಮಹಿಳಾ ಮಕ್ಕಳ ಸುರಕ್ಷತೆ, ಸ್ವಾವಲಂಬನೆ ಮತ್ತು ನಿರಂತರ ಶಿಕ್ಷಣಕ್ಕೆ ಉತ್ತೇಜನ ನೀಡಲಿದೆ. ಸಮಾಜಸೇವಕರ ಹಾಗೂ ದಾನಿಗಳ ಅಮೂಲ್ಯ ಸಹಕಾರ ಈ ಮಹತ್ವದ ಕಾರ್ಯಕ್ಕೆ ಸಮಾಜಸೇವಕರು, ದಾನಿಗಳು ಹಾಗೂ ಹಿತೈಷಿಗಳು ಕೈಜೋಡಿಸಿದ್ದು, ಅವರ ಕೊಡುಗೆ ಶ್ಲಾಘನೀಯವಾಗಿದೆ. ಸಾರ್ವಜನಿಕರ ಸಹಕಾರದಿಂದಲೇ ಇಂತಹ ಶಿಕ್ಷಣಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿದೆ.

ಸಮಾಜದ ಪ್ರತಿಯೊಬ್ಬರೂ ಶಿಕ್ಷಣದ ಅಭಿವೃದ್ಧಿಗೆ ಕೈಜೋಡಿಸಿದಾಗ ಮಾತ್ರ ಸಮಾನ ಅವಕಾಶಗಳ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿಯ ಸಂಕಲ್ಪ ಮಕ್ಕಳ ಶಿಕ್ಷಣವು ಕೇವಲ ವೈಯಕ್ತಿಕ ಅಭಿವೃದ್ಧಿಯಲ್ಲದೆ ಸಮಾಜದ ಸಮಗ್ರ ಪ್ರಗತಿಯ ಮೂಲವಾಗಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಶಿಕ್ಷಣಪರ ಕಾರ್ಯಕ್ರಮಗಳನ್ನು ಇನ್ನಷ್ಟು ವಿಸ್ತರಿಸುವ ಆಶಯವನ್ನು ಆಯೋಜ– ಕರು ವ್ಯಕ್ತಪಡಿಸಿದ್ದಾರೆ. ಯಾವುದೇ ಮಗು ದೂರ, ಬಡತನ ಅಥವಾ ಮೂಲಸೌಕರ್ಯದ ಕೊರತೆಯಿಂದ ಶಿಕ್ಷಣದಿಂದ ವಂಚಿತವಾಗಬಾರದು ಎಂಬುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದ್ದರು.

ಸೈಕಲ್ ವಿತರಣೆಗೆ ಸಹಕರಿಸಿದರು. ಬಸವರಾಜ್ ಕುಂಬಾರ್, ವೈದ್ಯಧಿಕಾರಿ ಡಾ.ಮುದಸಿರ್, ಮಲ್ಲು ನಾಯಕ, ಮಲ್ಲು, ರವಿ, ಸುಗರೆಡ್ಡಿ ಗೌಡ, ಅರುಣ್ ಕುಮಾರ್, ವಿನಯ್ ಕುಮಾರ್, ಯಂಕಪ್ಪ, ಆಂಜನೇಯ ಈ ಸಂದರ್ಭದಲ್ಲಿ ಎಸ್ ಎ ಡಿ ಎಂ ಸಿ ಅಧ್ಯಕ್ಷ ಸಿದ್ರಾಮ್ ಬೋಹಿನ್, ಮುಖ್ಯ ಗುರು ಬನ್ನಪ್ಪ ಮ್ಯಾಗೇರಿ, ಅಂಗನವಾಡಿ ಶಿಕ್ಷಕಿ ಸುನಂದ, ಲಕ್ಷ್ಮಪ್ಪ ಉಪ್ಪಾರ್, ಹಣಮಂತ ನಾಯಕ್ ಶಾಲೆಯ ಶಿಕ್ಷಕರು ಮತ್ತು ಗ್ರಾಮದ ಯುವಕರು ವಿದ್ಯಾರ್ಥಿಗಳು ಸೇರಿ ಸಂಭ್ರಮದಿಂದ ಆಚರಿಸಿದರು.

# ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಹಾಗೂ ಮಾಸಿಕ ಶರಣ ಸಂಗಮ ಕಾರ್ಯಕ್ರಮ



ಮಲ್ಲಮ್ಮನುಡಿವಾರ್ತೆ.ಬಸವಕಲ್ಯಾಣ :– ಇಲ್ಲಿನ ಬಸವ ಧರ್ಮ ಪೀಠದ ಬಸವ ಮಹಾನೆಯ ಆವರಣದಲ್ಲಿ ಸೋಮವಾರಶಿವಯೋಗಿಸಿದ್ದರಾಮೇಶ್ವರ ಜಯಂತಿ ಹಾಗೂ ಮಾಸಿಕ ಶರಣ ಸಂಗಮ ಕಾರ್ಯಕ್ರಮ ಜರುಗಿತು.

ದಿವ್ಯ ಸಾನಿಧ್ಯ ಪೂಜ್ಯ ಶ್ರೀ ಮಹಾಜಗದ್ಗುರು ಡಾ.ಗಂಗಾದೇವಿ ಮಾತಾಜಿ ವಹಿಸಿ ಅವರು ಮಾತನಾಡಿ ಶಿವಯೋಗಿ ಸಿದ್ದರಾಮೇಶ್ವರ ಹಾಕಿ ಕೂಟ ಮಾರ್ಗದರ್ಶನದಲ್ಲಿ ನಾವು ಎಲ್ಲರೂ ನಡೆಯ ಬೇಕು ಎಂದು ಹೇಳಿದರು. ದಿವ್ಯ ಸಮ್ಮುಖ ಬೇಲೂರು ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು

ಉದ್ಘಾಟಿಸಿ ಅವರು ಮಾತನಾಡಿದರು. ವಾಣಿಜ್ಯ ಇಲಾಖೆಯ ಆಯುಕ್ತರಾದ ಡಾ.ಮಹೇಶ ಪಾಟೀಲ ಮಾತನಾಡಿ ಪೂಜ್ಯ ಮಾತಾಜಿ ಅವರು ನಿರ್ಮಿಸಿದ 108 ಅಡಿಯ ಬಸವಣ್ಣನವರ ಪ್ರತಿಮೆಯಿಂದ ಬಸವಕಲ್ಯಾಣಕ್ಕೆ ಕಳೆ ಬಂದಿದೆ ಎಂದರು.

ಉಪನ್ಯಾಸ ಪ್ರೊ.ಮೀನಾಕ್ಷಿ ಬಿರಾದಾರ ನೀಡಿ ಹನ್ನೆಡನೆಯ ಶತಮಾನದಲ್ಲಿ ವರ್ಣ, ವರ್ಗ, ಲಿಂಗ ಭೇದಗಳಿಲ್ಲದೆ ಶರಣರ ಚಿಂತನ ಮಂಥನದಿಂದ ಹೊರ ಹೊಮ್ಮಿದ ವಚನಗಳು ಮನುಕುಲಕ್ಕೆ ದಾರಿ ದೀಪವಾಗಿವೆ ಎಂದು ಹೇಳಿದರು.

ಸೋಮಶೇಖರ್ ಗಾದಗಿ ಧ್ವಜಾರೋಹಣ ನೆರವೇರಿಸಿದರು.ಈ ವೇಳೆ ಪೂಜ್ಯಶ್ರೀ ಬಸವಯೋಗಿ ಸ್ವಾಮಿಜಿ, ಪೂಜ್ಯ ಶ್ರೀ ಮಹದೇಶ್ವರ ಸ್ವಾಮಿಜಿ, ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿ, ಪೂಜ್ಯ ಶ್ರೀ ಲಾವಣ್ಯ ಮಾತಾಜಿ, ಹಾಗೂ ಅನೇಕ ಪೂಜ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಸವರಾಜ ಬುಳ್ಳಾ, ಚನ್ನಪ್ಪ ಪ್ರತಾಪುರೆ,

ರಾಜೇಂದ್ರ ಗಂದಗೆ, ರವಿಂದ್ರ ಕೋಳಕುರ, ಸುರೇಶ ಸ್ವಾಮಿ, ಸಾಹಿತಿ ಸಂಗಮೇಶ ಜವದೆ, ಆಕಾಶ ಖಂಡಾಳೆ, ದತ್ತಾತ್ರೇಯ ರಾಗಾ, ಶಿವರಾಜ ನರಶೆಟ್ಟಿ, ಜಯಶ್ರೀ ಪಾಟೀಲ, ರಾಜಶ್ರೀ ಖೂಬಾ, ಸೊನಾಲಿ ನೀಲಕಂಠೆ, ಸವಿತಾ ಪ್ರತಾಪುರೆ, ಹಲವಾರು ಶರಣ ಶರಣೆಯರು ಉಪಸ್ಥಿತರಿದ್ದರು. ಅಂಬರೀಶ ಭೀಮಣ್ಣೆ ನಿರೂಪಿಸಿದರು. ನಿರ್ಮಲಾ ಶಿವಣಕರ್ ಸ್ವಾಗತಿಸಿದರು.

ಇದೆ ಸಂದರ್ಭದಲ್ಲಿ ಪೂಜ್ಯಶ್ರೀ ಸಿದ್ದರಾಮೇಶ್ವರ ಸ್ವಾಮಿಜಿ ಅವರ 60 ನೇ ವರ್ಷದ ವರ್ಧಂತಿ ಪ್ರಯುಕ್ತ ಸನ್ಮಾನಿಸಲಾಯಿತು.

# ಪರಸನಹಳ್ಳಿ ನೂತನ ಎಸ್.ಎ.ಡಿ.ಎಂ.ಸಿ ರಚನೆ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಕೆಂಭಾವಿ ಪಟ್ಟಣದ ಪುರಸಭೆ ವ್ಯಾಪ್ತಿಯ ಪರಸನಹಳ್ಳಿ ಗ್ರಾಮದ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ 2025–26ನೆ ಸಾಲಿನಲ್ಲಿ ನೂತನವಾಗಿ ರಚನೆಯಾದಂತ ಎಡಿಎಂಸಿ ಪದಗ್ರಹಣ ಹಾಗೂ ಅಭಿನಂದನಾ ಸಮಾರಂಭವನ್ನು ಶಾಲಾ ಮೈದಾನದಲ್ಲಿ ಅದ್ದೂರಿಯಾಗಿ ನಡೆಯಿತು. ಈ ಸಂದರ್ಭದಲ್ಲಿ ಎಸ್.ಎ.ಡಿ.ಎಂ.ಸಿ ನೂತನ ಅಧ್ಯಕ್ಷ ಈರಣ್ಣ ಎಸ್ ನೈಕೋಡಿ , ಉಪಾಧ್ಯಕ್ಷ ಶ್ರೀ ಮತಿ ಶಿವಮ್ಮ ದೊಡ್ಡಮನಿ ಹಾಗೂ ಸದಸ್ಯರನ್ನು ನೇಮಕ ಮಾಡಿ ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳು ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಪಟ್ಟಣದ ನಾಗರಿಕರು ಸೇರಿದಂತೆ ಇದ್ದರು.

# ಭಾರತದ ಚರಿತ್ರೆಯಲ್ಲಿ ಐತಿಹಾಸಿಕ ದಿನವಾಗಿದೆ ದುರ್ಗಪ್ಪ ಹೆಚ್. ಪೂಜಾರಿ.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ನಗರದ ಎಸ್.ಡಿ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಯೋಜಿಸಿದ 77ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಶಾಲಾ ಮೈದಾನದಲ್ಲಿ ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ದುರ್ಗಪ್ಪ ಹೆಚ್.ಪೂಜಾರಿ ಅವರು ಭಾರತ ಸಂವಿಧಾನವು ಲಿಖಿತ ರೂಪದಲ್ಲಿ ವಿಶ್ವದ ಅತ್ಯಂತ ವಿಶಾಲವಾದ ಮತ್ತು ಶ್ರೇಷ್ಠತೆಯನ್ನು ಪಡೆದತಹ ಸಂವಿಧಾನವಾಗಿದ್ದು ಸ್ವತಂತ್ರ, ಸಮಾನತೆ, ಭ್ರಾತೃತ್ವ ಮತ್ತು ಮೂಲಭೂತ ಹಕ್ಕುಗಳನ್ನು ಭಾರತದ ಪ್ರಜೆಗಳಿಗೆ ನೀಡುವುದರ ಜೊತೆಗೆ ಭಾರತದ ಗಣರಾಜ್ಯ ಪದ್ಧತಿಯು ಭಾರತೀಯರ ಪ್ರಗತಿ ಹಾಗೂ ಸರ್ವತೋಮುಖ ಅಭಿವೃದ್ಧಿಯನ್ನು ಕಾನೂನಿನ ಮುಂದೆ ಎಲ್ಲರೂ ಸರಿ ಸಮಾನರು ಹಾಗೂ ಸರ್ವರಿಗೂ ಸಮಬಾಳು ಸಮಪಾಲು ಎಂಬ ಪ್ರಜಾ ಹಿತ ಧರ್ಮಗಳನ್ನು ಸರ್ವೋದಯದ ಪರಿಕಲ್ಪನೆಯನ್ನು ಹೊಂದುವುದರ ಮೂಲಕ ಜನವರಿ 26 1950ರ ಗಣರಾಜ್ಯೋತ್ಸವ ದಿನವನ್ನು ಭಾರತದ ಚರಿತ್ರೆಯಲ್ಲಿ ಐತಿಹಾಸಿಕ ದಿನವನ್ನಾಗಿ ಸೇರಿಕೊಂಡಿದೆ. ಎಂದು ಹೇಳಿದರು ಇದೇ ಸಂದರ್ಭದಲ್ಲಿ ಮಕ್ಕಳಿಂದ ಸಾಂಸ್ಕೃತಿ ಕಾರ್ಯಕ್ರಮ ಜರಗಿದವು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು, ಪಾಲಕರು ಮತ್ತು ಪೋಷಕರು ಹಾಗೂ ಶಾಲಾ ಶಿಕ್ಷಕಿರಾದ ಶ್ರೀಮತಿ ಶೋಭಾದೇವಿ,ಶ್ರೀಮತಿ ಆಕಾಂಕ್ಷ ಡಿ.ಪೂಜಾರಿ, ಕು. ಉತ್ತಮ್ಮ ಬೇಗಾರ್ ಇತರರು ಹಾಜರಿದ್ದರು.

# ಓಂಕಾರ್ ಪಾಟೀಲ್‌ರಿಗೆ 2026 ನೇ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆಬೀದರ:

ಬೀದರ್ ತಾಲೂಕಿನ ಕಂಗನಕೋಟೆ ಗ್ರಾಮದ ಸಾಹಿತಿಗಳಾದ ಓಂಕಾರ್ ಪಾಟೀಲ್ ಅವರಿಗೆ 2026 ನೇ ಸಾಲಿನ ಜಿಲ್ಲಾ ಗಣರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ನೆಹರು ಸ್ಟೇಡಿಯಂ ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ ಸರ್ಕಾರದ ವತಿಯಿಂದ ಸನ್ಮಾನ ಮಾಡಿ ಗೌರವಿಸಿದರು.

ಸಾಹಿತಿಗಳಾದ ಓಂಕಾರ್ ಪಾಟೀಲ್ ಅವರು ಓಂಕಾರ್ ಲಹರಿ ಶೀರ್ಷಿಕೆ ಅಡಿಯಲ್ಲಿ ಜಿಲ್ಲೆಯ ವಿವಿಧ ಸಾಹಿತಿಗಳ ಗಣನೀಯ ಸೇವೆಯನ್ನು ಕುರಿತು ಲೇಖನವನ್ನು ಬರೆಯುವುದು, ಪತ್ರಿಕೆಗಳಲ್ಲಿ ಕವನ ಕಥೆಗಳನ್ನು ಬರೆಯುವುದರೊಂದಿಗೆ ಕನ್ನಡ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ ಇವರ ಸೇವೆಯನ್ನು ಗುರುತಿಸಿ ಜಿಲ್ಲಾಡಳಿತವು ಇವರಿಗೆ ಜಿಲ್ಲಾ ಗಣರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿರುವುದಕ್ಕೆ ಹಿರಿಯ ಸಾಹಿತಿಗಳಾದ ಡಾಕ್ಟರ್ ಎಂಜಿ ದೇಶಪಾಂಡೆ, ವೀರಭದ್ರಪ್ಪ ಉಪ್ಪಿನ್, ಅರವಿಂದ ಕುಲಕರ್ಣಿ, ಜಗದೇವಿ ಮೈ ನಾಳೆ, ಸಿದ್ಧಾರೂಢ ಬಾಲ್ಕೆ, ವೀರಶೆಟ್ಟಿ ಪಾಟೀಲ್, ಡಾ ಸಿ ಆನಂದ್ ರಾವ್ ಮುಂತಾದವರು ಹರ್ಷ ವ್ಯಕ್ತಪಡಿಸಿದರು.

# ಕಲಬುರಗಿ ನೀರು ಸರಬರಾಜಿನಲ್ಲಿ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಜಲಮೂಲ ನದಿಯಾದ ಭೀಮಾ ನದಿಯಿಂದ ನಿಂತ ನೀರು ಕಲುಷಿತವಾಗಿ ಬರುತ್ತಿರುವ ಕಾರಣ ಸರಡಗಿಯ ಜಾಕ್‌ವೆಲ್ ಪಂಪ್‌ಹೌಸ್ ಸ್ಥಗಿತಗೊಳಿಸಲಾಗಿದೆ. ಆದ್ದರಿಂದ ಕೋಟನೂರ ಹಾಗೂ ಶೋರಗುಂಬಜ್ ನೀರು ಶುದ್ಧೀಕರಣ ಘಟಕದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಇದೇ ಜನವರಿ 28 ರಿಂದ 31 ರವರೆಗೆ ನಾಲ್ಕು ದಿನಗಳ ಕಾಲ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಕಲಬುರಗಿ ನಗರದ ಸಾರ್ವಜನಿಕರು ಮಹಾನಗರ ಪಾಲಿಕೆ, ಕೆಯುಐಡಿಎಫ್‌ಸಿ ಹಾಗೂ ಮೆ. ಎಲ್ ಆ್ಯಂಡ್ ಟಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಕೆಯುಡಬ್ಲ್ಯೂಎಸ್‌ಎಂಪಿ–ಕೆಯುಐಡಿಎಫ್‌ಸಿ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ. ಕಲಬುರಗಿ ನಗರದ ಕೋಟನೂರ ಹಾಗೂ ಶೋರಗುಂಬಜ್ ನೀರು ಶುದ್ಧೀಕರಣ ಘಟಕದ ವ್ಯಾಪ್ತಿಯಲ್ಲಿ ಬರುವ ಬಿದ್ದಾಪೂರ, ರಾಯರಗುಡ್ಡಿ, ವಿಶಾಲ ನಗರ, ಅಂಭಿಕಾ ನಗರ, ಪಿಂಪ್ಲಿ ಟೆಂಪಲ್, ಪಿ ಆಂಡ್ ಟಿ ಕಾಲೋನಿ, ವಿದ್ಯಾನಗರ, ಯಶವಂತ ನಗರ, ಕರುಣೇಶ್ವರ ನಗರ, ಗಣೇಶ ನಗರ, ಭಾಗ್ಯವಂತಿ ನಗರ, ದೇವಾ ನಗರ, ತಿಲಕ್ ನಗರ, ಬನಶಂಕರಿ ನಗರ, ಹರಿ ನಗರ, ಗಾಭರೆ ಲೇಔಟ್, ಜೆಂ ಶೇಟಿ ನಗರ, ಕೃಷ್ಣ ನಗರ, ತಾರಫೈಲ್, ಉದಯ ನಗರ, ಎನ್‌ಜಿಓ ಕಾಲೋನಿ, ಜೇವರ್ಗಿ ಕಾಲೋನಿ, ಮಾಕಾ ಲೇಔಟ್, ಸಂತೋಷ ಕಾಲೋನಿ, ಪಿಡಬ್ಲ್ಯೂಡಿ ಕಾಲೋನಿ, ಬ್ಯಾಂಕ್ ಕಾಲೋನಿ, ಬಾಲಾಜಿ ನಗರ, ರಹೆಮತ್ ನಗರ, ಸಂಪಿಗೆ ನಗರ, ಬುದ್ಧ ನಗರ, ರೇವಣಸಿದ್ದೇಶ್ವರ ಕಾಲೋನಿ, ಸಾಯಿ ನಗರ, ಓಜಾ ಲೇಔಟ್, ಸ್ವಾಮಿ ವಿವೇಕಾನಂದ ನಗರ, ಪ್ರಗತಿ ಕಾಲೋನಿ, ಸಿಐಬಿ ಕಾಲೋನಿ, ಶಕ್ತಿ ನಗರ, ಸ್ಟೇಷನ್ ಬಜಾರ, ಐವಾನ್ ಶಾಹಿ, ಯತೀಮ ಖಾನಾ, ಶಾಂತಿ ನಗರ, ವಿಠ್ಠಲ ನಗರ, ಖುಬಾ ಪ್ಲಾಟ್, ಮಿಸ್ಬಾ ನಗರ, ಅಜ್ಮೀರ್ ಕಾಲೋನಿ, ಕರಿಮ ನಗರ, ಗಾಲಿಫ್ ಕಾಲೋನಿ, ಮಹಮ್ಮದ ಚೌಕ್, ಖಾದಿಲ್ ಚೌಕ್, ಶಿವನಗರ, ಶಿದ್ರಾಮೇಶ್ವರ ಕಾಲೋನಿ, ನಬಿ ಕಾಲೋನಿ, ಶೇಖ ರೋಜಾ, ಕೈಲಾಸ ನಗರ, ಜಿ.ಆರ್. ನಗರ, ಹಾಗೂ ಮಿನಿ ಅಮ್ಮಲವಾಡಿ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

# ಉತ್ಸವದ ಸಿದ್ಧತಾ ಕಾರ್ಯ ಚುರುಕಾಗಲಿ: ನಿತೀಶ್ ಕೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಫೆ.5 ರಿಂದ ಮೂರು ದಿನಗಳ ಕಾಲ ನಿಗದಿಯಾದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ಇನ್ನು ಕೆಲವೇ ದಿನಗಳು ಬಾಕಿ ಇದ್ದು ಅಧಿಕಾರಿಗಳು ಮತ್ತು ಸಿಬ್ಬಂದಿ ಚುರುಕಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಹಳೆಯ ಜಿಲ್ಲಾಧಿಕಾರಿಗಳ ಆವರಣದಲ್ಲಿನ ಮಹಾನಗರ ಪಾಲಿಕೆಯ ಕೋರ್ಟ್ ಹಾಲನಲ್ಲಿ ಜನವರಿ 27ರಂದು ನಡೆದ ರಾಯಚೂರು ಉತ್ಸವದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲ ಮಂದಿರಗಳು, ಮಸೀದಿಗಳು ಹಾಗೂ ಚರ್ಚ್ ಸೇರಿದಂತೆ ಇನ್ನಿತರ ಎಲ್ಲ ದೇವಸ್ಥಾನಗಳಲ್ಲಿ ಪ್ರಾರ್ಥನಾ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಜನತೆಗೆ ಉತ್ಸವದ ಬಗ್ಗೆ ಮಾಹಿತಿ ಕೊಡುವ ಕಾರ್ಯವಾಗಬೇಕು. ರಾಯಚೂರು, ಮಾನವಿ, ಸಿಂಧನೂರ, ಲಿಂಗಸೂರು, ದೇವದುರ್ಗ, ಮಸ್ಕಿ, ಸಿರವಾರ ಸೇರಿದಂತೆ ಜಿಲ್ಲೆಯ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿನ ಕಸ ಎತ್ತುವ ವಾಹನಗಳಲ್ಲಿ ಕಡ್ಡಾಯವಾಗಿ ಜಿಂಗಲ್ ಮೂಲಕ ಉತ್ಸವದ ಪ್ರಚಾರ ಕಾರ್ಯ ನಡೆಸಬೇಕು. ಮುಖ್ಯವಾಗಿ ತಾಲೂಕು ಪಂಚಾಯತನ ಎಲ್ಲ ಕಾರ್ಯ ನಿರ್ವಹಣಾಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯ ಎಲ್ಲ ಗ್ರಾಮ ಪಂಚಾಯತಗಳ ಪಿಡಿಓ ಅವರ ಸಭೆ ಕರೆದು ಅವರ ಮೂಲಕ ಗ್ರಾಮ ಮತ್ತು ಹೋಬಳಿ ಮಟ್ಟದಲ್ಲಿ ಸಹ ಕಸ ಎತ್ತುವ ವಾಹನಗಳು ಮತ್ತು ಡಂಗೂರದ ಮೂಲಕ ಉತ್ಸವದ ಬಗ್ಗೆ ತಿಳಿಸುವ ಕಾರ್ಯ ಮಾಡಬೇಕು. ಆಯಾ ಗ್ರಾಮಗಳಲ್ಲಿನ ಶಾಲೆಗಳ ಮುಖ್ಯ ಗುರುಗಳೊಂದಿಗೆ ಚರ್ಚಿಸಿ ಗ್ರಾಮ ಪಂಚಾಯಿತಿ ಮತ್ತು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಹಯೋಗದಲ್ಲಿ ಗ್ರಾಮಸ್ಥರ ಸಹಕಾರದೊಂದಿಗೆ ಗ್ರಾಮಗಳಲ್ಲಿ ಜಾಥಾ ನಡೆಸಿ ಫೆ.5 ಹಾಗೂ ಫೆ.6 ಮತ್ತು ಫೆ.7ರಂದು ರಾಯಚೂರು ಉತ್ಸವ ನಡೆಯಲಿದೆ. ಎಲ್ಲರೂ ಭಾಗಿಯಾಗಬೇಕು ಎನ್ನುವ ಸಂದೇಶ ನೀಡಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಂಟಿ ಸಭೆ ನಡೆಸಲು ಸೂಚನೆ: ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಪ್ರತಿ ಗ್ರಾಮಗಳಲ್ಲಿ ಪ್ರತಿ ಮನೆಮನೆ ತೆರಳಿ ರಾಯಚೂರು ಉತ್ಸವದ ಬಗ್ಗೆ ಜನತೆಗೆ ತಿಳಿಸುವ ಕಾರ್ಯ ಮಾಡಬೇಕು. ಈ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಸೇರಿ ತಮ್ಮ ಹಂತದಲ್ಲಿ ಜಂಟಿ ಸಭೆ ಅಥವಾ ವಿಡಿಯೋ ಕಾನ್ಫರೆನ್ಸ್ ನಡೆಸಿ ಉತ್ಸವದ ಪ್ರಚಾರ ಕಾರ್ಯದ ಜವಾಬ್ದಾರಿಯನ್ನು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸಿ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಆಟೋ ಪ್ರಚಾರ ತುರ್ತು ಆರಂಭವಾಗಲಿ: ಜಿಲ್ಲೆಯಲ್ಲಿನ ಎಲ್ಲಾ ನಗರ, ಪಟ್ಟಣ ಪ್ರದೇಶ ಮತ್ತು ಹೋಬಳಿಗಳಲ್ಲಿ ಆಟೋ ಮೂಲಕ ಪ್ರಚಾರ ಕಾರ್ಯವು ಕೂಡಲೇ ಆರಂಭವಾಗಲಿ ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಬಸ್ಸುಗಳಿಗೆ ಪೋಸ್ಟರ್ ಅಂಟಿಸಿ: ಉತ್ಸವಕ್ಕೆ ಕೆಲವೇ ದಿನಗಳು ಬಾಕಿ ಇದೆ. ಹೀಗಾಗಿ ಪ್ರಚಾರ ಕಾರ್ಯ ಚುರುಕುಗೊಳಿಸಬೇಕು. ನಗರದಲ್ಲಿ ಸಂಚರಿಸುವ ಹಾಗೂ ಬೇರೆಡೆ ಸಂಚರಿಸುವ ಎಲ್ಲ ಬಸ್ಸುಗಳಿಗೆ ಪೋಸ್ಟರ್ ಅಂಟಿಸಿ ಪ್ರಚಾರ ಕಾರ್ಯ ನಡೆಸಬೇಕು ಎಂದು ಸೂಚನೆ ನೀಡಿದರು.

ವಿವಿಧೆಡೆ ಪ್ರಚಾರ ನಡೆಸಿ: ಪ್ರತಿ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಸಂದೇಶ ಹೋಗುವ ನಿಟ್ಟಿನಲ್ಲಿ ನಗರದ ರೈಲ್ವೆ ನಿಲ್ದಾಣ ಸೇರಿದಂತೆ ವಿವಿಧೆಡೆ ಬ್ಯಾನರ್ ಅಂಟಿಸಿ ಪ್ರಚಾರ ನಡೆಸಬೇಕು. ಫೆ.5 ರಿಂದ ಫೆ.7ರವರೆಗೆ ಯಾವ ಕಾರ್ಯಕ್ರಮಗಳು ಯಾವ ಸಮಯಕ್ಕೆ ನಡೆಯುತ್ತವೆ ಎಲ್ಲಿ ನಡೆಯುತ್ತವೆ ಎಂಬುದರ ಬಗ್ಗೆ ಪಟ್ಟಿ ಮಾಡಿ ಬ್ಯಾನರ್ ಅಳವಡಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಡಿಡಿಪಿಐ, ಡಿಡಿಪಿಯುಗೆ ಸೂಚನೆ: ಮುಖ್ಯವಾಗಿ ಎಲ್ಲ ಶಾಲೆಗಳ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಉತ್ಸವದ ಬಗ್ಗೆ ವ್ಯಾಪಕವಾಗಿ ಪ್ರಚಾರ ಹೋಗುವ ದಿಶೆಯಲ್ಲಿ ಡಿಡಿಪಿಐ ಮತ್ತು ಡಿಡಿಪಿಐ ಇಲಾಖೆಗಳ ಅಧಿಕಾರಿಗಳು ಚುರುಕಾಗಿ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಎಲ್ಲ ಶಾಲಾ ಕಾಲೇಜುಗಳಿಗೆ ಸುತ್ತೋಲೆ ಮೂಲಕ ಮಾಹಿತಿ ಕಳುಹಿಸಲು ಕೂಡಲೇ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ವೆಬ್‌ಸೈಟ್ ವೀಕ್ಷಣೆ: ರಾಯಚೂರು ಉತ್ಸವ ನಿಮಿತ್ತ ಸಿದ್ಧಪಡಿಸಿದ ವೆಬ್‌ಸೈಟ್, ಇನ್‌ಸ್ಟಾಗ್ರಾಂ, ಪೇಸ್‌ಬುಕ್, ಎನ್‌ಐಸಿ ಪೇಜ್ ಸೇರಿದಂತೆ ನಾನಾ ವೆಬ್‌ತಾಣಗಳನ್ನು ಜಿಲ್ಲಾಧಿಕಾರಿಗಳು ವೀಕ್ಷಣೆ ಮಾಡಿದರು. ಎಲ್ಲ ವೆಬ್‌ತಾಣಗಳು ಪ್ರತಿ ದಿನ ಅಪಡೇಟ್ ಆಗಬೇಕು. ಉತ್ಸವದ ಕಾರ್ಯಕ್ರಮಗಳ ಕುರಿತಂತೆ ಜನತೆಗೆ ಸ್ಪಷ್ಟ ಹಾಗು ನಿಖರವಾದ ಮಾಹಿತಿ ಒದಗಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ್ ಕಾಂದೂ, ಮಹಾನಗರ ಪಾಲಿಕೆಯು ಆಯುಕ್ತರಾದ ಜುಬಿನ್ ಮೋಹಪಾತ್ರ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಈರಣ್ಣ ಬಿರಾದಾರ, ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ ಸೇರಿದಂತೆ ವಿವಿಧ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಇದ್ದರು.

## ಕಾರ್ಯಗಾರ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ 2025–26ನೇ ಸಾಲಿನ ರಾಂಪ್ ಯೋಜನೆಯಡಿಯಲ್ಲಿ ಪಿರಿಯಾಡಿಕ್ ಮೀಟ್ಸ್ ಅಂಡ್ ನಾಲೆಜ್ ಟ್ರಾನ್ಸರ್ ಸೆಷನ್ಸ್ ವಿಥ್ ಬಿಡಿಎಸ್‌ಪಿ ಯೋಜನೆಯ ಕುರಿತು ಕೆಎಸ್‌ಎಮ್‌ಸಿ&ಎ ಬೆಂಗಳೂರು ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಕೈಗಾರಿಕೋದ್ಯಮಿಗಳಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವು ಜನವರಿ 29ರ ಬೆಳಿಗ್ಗೆ 10.30ಕ್ಕೆ ಜಿಲ್ಲೆಯ ಮಾನ್ವಿಯ ಎಪಿಎಂಸಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾನವಿ ತಾಲ್ಲೂಕು ಹಾಗೂ ಸುತ್ತಲಿನ ಕೈಗಾರಿಕಾ ಘಟಕಗಳ ಮುಖ್ಯಸ್ಥರು, ಉದ್ದಿಮೆದಾರರು ಈ ಕಾರ್ಯಾಗಾರದಲ್ಲಿ ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರಾದ ಲಕ್ಷ್ಮೀಕಾಂತ ಕುಲಕರ್ಣಿ ಅವರು ಮೊಬೈಲ್ ಸಂಖ್ಯೆ: 8861241093ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಣರಾಜ್ಯೋತ್ಸವ; ಗಾಂಧೀಜಿ ಪುತ್ಥಳಿ ಮುಂದೆ ಸರ್ವಧರ್ಮ ಪ್ರಾರ್ಥನೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಗಣರಾಜ್ಯೋತ್ಸವದ ಅಂಗವಾಗಿ ನಗರದ ಮಹಾತ್ಮ ಗಾಂಧೀಜಿ ಪುತ್ಥಳಿಯ ಮುಂಭಾಗದಲ್ಲಿ ಸರ್ವಧರ್ಮ ಪ್ರಾರ್ಥನಾ ಕಾರ್ಯಕ್ರಮವು ಜನವರಿ 26ರಂದು ನಡೆಯಿತು.

ಈ ವೇಳೆ ಲಕ್ಷ್ಮೀದೇವಿ, ಸುನೀತಾ, ನಾಗಶ್ರೀ, ಸೈಯದ್ ಇಸ್ಮಾಯಿಲ್ ಖಾದ್ರಿ, ವಿದ್ಯಾಸಾಗರ್ ಅವರು ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗಿಯಾಗಿ ವಿವಿಧ ಧರ್ಮಗಳಲ್ಲಿನ ಅಂಶಗಳ ಕುರಿತು ಪ್ರಸ್ತುತಪಡಿಸಿದರು.

ಮಹಾನಗರಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಹಾತ್ಮಾ ಗಾಂಧೀಜಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಜಾಪ್ರಭುತ್ವದ ಮಹತ್ವ ತಿಳಿಸುವ ಭಾರತದ ಲಿಖಿತ ಸಂವಿಧಾನದ ಬಗ್ಗೆ ಪ್ರತಿಯೊಬ್ಬರು ಅರಿಯಬೇಕು. ಯುವಕರು, ವಿದ್ಯಾರ್ಥಿಗಳು ಸಂವಿಧಾನದ ಮಹತ್ವವನ್ನು ತಿಳಿದುಕೊಳ್ಳಬೇಕು. ಕಾನೂನಿನಡಿಯಲ್ಲಿ ನಾವೆಲ್ಲರೂ ಕಾರ್ಯ ನಿರ್ವಹಿಸಬೇಕೆಂದರು.

ರಾಯಚೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿ ವರ್ಷದೊಳಗೆ ಪಾಲಿಕೆಯ ಆಡಳಿತವನ್ನು ಬಲಪಡಿಸುವಲ್ಲಿ ನಾವು ನಾನಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ರಾಯಚೂರಿನ ಮಹಾನಗರ ಪಾಲಿಕೆಯ ಎಲ್ಲ ಸದಸ್ಯರು ಮತ್ತು ಮಾಧ್ಯಮದವರು ನೀಡಿದ ಸಹಕಾರ ಸ್ಮರಣೀಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಪಾಲಿಕೆಯ ಜೋನಲ್ ಆಯುಕ್ತರಾದ ಪುರುರಾಜ್ ಸಿಂಗ್ ಸೋಲಂಕಿ, ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ, ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರಾದ ಬಸವರಾಜ್ ಹೆಬ್ಬಾರ್, ಪರಿಸರ ಅಭಿಯಂತರರಾದ ಜಯಪಾಲ್ ರೆಡ್ಡಿ, ಎನ್.ವಿ.ಡಿ ಸ್ಪರ್ಧಾ ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ, ಭಾರತ ಸೇವಾ ದೇಳದ ವಿದ್ಯಾಸಾಗರ್, ಭರತ್, ಶರಣಪ್ಪ ಸೇರಿದಂತೆ ಇತರರು ಇದ್ದರು.

# ಪುರುಷ ಕಾಣೆ ಪತ್ತೆಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಯಾದಗಿರಿ ಜಿಲ್ಲೆಯ ಮೈಲಾಪೂರ ಅಗಸಿ ಪ್ರಾಥಮಿಕ ಶಾಲೆಯ ಹಿಂದುಗಡೆ ಕೋಲಿವಾಡ ನಗರದ 50 ವರ್ಷದ ಪುರುಷ ದಶರಥ ಹಡಪದ ಕಳೆದ 2025ರ ಆಗಸ್ಟ್ 2 ರಂದು ಕಾಣೆ–ಯಾದ ಹಿನ್ನೆಲೆ ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಪುರುಷ ಕಾಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿದಿದೆ ಎಂದು ಯಾದಗಿರಿ ನಗರ ಪೊಲೀಸ್ ಠಾಣೆ ಠಾಣಾಧಿಕಾರಿ ಮಂಜನಗೌಡ ಅವರು ತಿಳಿಸಿದ್ದಾರೆ.

ಮೈಲಾಪೂರ ಅಗಸಿ ಪ್ರಾಥಮಿಕ ಶಾಲೆಯ ಹಿಂದುಗಡೆ ಕೋಲಿವಾಡ ನಗರದ ಈತನು ಕಳೆದ 2025ರ ಆಗಸ್ಟ್ 2 ರಂದು ಬೆಳಿಗ್ಗೆ 11 ಗಂಟೆಗೆ ಹೊರಗಡೆ ಹೋಗಿ ಬರುವುದಾಗಿ ಮನೆಯಲ್ಲಿ ಹೇಳಿ ಹೋದವನು ಇಲ್ಲಿಯವರೆಗೆ ಮರಳಿ ಮನೆಗೆ ಬರದೇ ಕಾಣೆಯಾಗಿದ್ದು ಇರುತ್ತದೆ. ಈ ಹಿನ್ನೆಲೆ ನನ್ನ ಗಂಡನು ಈ ಮೊದಲು ಒಂದೆರಡು ತಿಂಗಳವರೆಗೆ ಮಹಾರಾಷ್ಟ್ರ ರಾಜ್ಯದ ಬಿಗುವಾನ್ ಊರಿನ ಹವಾ ಮಲ್ಲಿನಾಥ ಮಠಕ್ಕೆ ಹೋಗಿ ಅಲ್ಲಿಯೇ ಇದ್ದು, ಮರಳಿ ಬರುತ್ತಿದ್ದರು. ಈಗಲೂ ಸಹ ಅದೇ ರೀತಿ ಹೋಗಿರಬಹುದು, ಮತ್ತೆ ಮನೆಗೆ ಮರಳಿ ಬರಬಹುದೆಂದು ಇಲ್ಲಿಯವರೆಗೆ ಕಾದಿದ್ದು, ಗಂಡ ಇಲ್ಲಿಯವರೆಗೆ ಮರಳಿ ಮನೆಗೆ ಬಂದಿರುವುದಿಲ್ಲ. ನಂತರ ನಾನು ಮತ್ತು ನನ್ನ ಮಗಳು ಹಾಗೂ ಅಳಿಯನಾದ ಎಲ್ಲರೂ ಕೂಡಿ–ಕೊಂಡು ನಮ್ಮ ಸಂಬಂಧಿಕರ ಮನೆಗಳಿಗೆ ಮೊಬೈಲ್ ಕರೆ ಮಾಡಿ ವಿಚಾರಿಸಲಾಗಿದೆ ಈತನ ಇರುವಿಕೆಯ ಬಗ್ಗೆ ಇವತ್ತಿನವರೆಗೂ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ.

ಕಾಣೆಯಾದ ಪುರುಷ ಚಹರಾ ಪಟ್ಟಿ ವಿವರ : ಪುರುಷ ಬಿಳಿ ಕೂದಲು, ಮೈಬಣ್ಣ ಗೋಧಿ ಬಣ್ಣ 5ಫೀಟ್ 5 ಇಂಚು ಎತ್ತರ ಇದ್ದು, ದುಂಡನೆ ಮುಖ, ಸದೃಢ ಮೈಕಟ್ಟು, ಕಪ್ಪು ಮತ್ತು ಕೆಂಪು ಚೌಕಡಿಗಳ್ಳ ಶರ್ಟ್, ಬೂದು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಕನ್ನಡ, ಹಿಂದಿ, ತೆಲುಗು, ಮರಾಠಿ, ಭಾಷೆಗಳಲ್ಲಿ ಮಾತನಾಡುತ್ತಾನೆ. ಪುರುಷ ಪತ್ತೆಯಾದಲ್ಲಿ ಯಾದಗಿರಿ ನಗರ ಪೊಲೀಸ್ ಠಾಣೆ ಠಾಣಾಧಿಕಾರಿ ಮೊ.ನಂ.7411275228 ಅಥವಾ 9980774541ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




**ಕಮಲನಗರ:ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ ವಿಶಿಷ್ಟ ಕ್ಯಾಲೆಂಡರರನ್ನು ಭಾಲ್ಕಿ ವಿಭಾಗ ಡಿ.ವೈ.ಎಸ್ಪಿ ಶಿವಾನಂದ ಪವಾಡಶೆಟ್ಟಿ ಸರ್ ಅವರಿಗೆ ಕ್ಯಾಲೆಂಡರ್ ನೀಡಿ ಹೊಸ ವರ್ಷ 2026ರ ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಕಮಲನಗರ ತಾಲೂಕ ವರದಿಗಾರ ಪರಮೇಶ ರಾಂಪುರೆ ಅವರು ಇದ್ದರು.**

# ಸಂಭ್ರಮದಿಂದ 77ನೇ ಗಣರಾಜ್ಯೋತ್ಸವ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್:**

ಸಮೀಪದ ಜನತಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 77ನೇ ಗಣರಾಜ್ಯೋತ್ಸವ ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು.

ರಾಷ್ಟ್ರಪಿತ ಮಹಾತ್ಮ ಗಾಂಧಿಜೀ ಹಾಗೂ ಡಾ. ಬಾಬಾ ಸಾಹೇಬ್ ಅಂಬೇಡ್ಕರ ಅವರ ಭಾವ ಚಿತ್ರಕ್ಕೆ ಶಾಲಾ ಶಿಕ್ಷಕ ಮೌನೇಶ ವಿಶ್ವಕರ್ಮ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಎಸ್ಡಿಎಂಸಿ ಅಧ್ಯಕ್ಷ ಹಾಗೂ ಭೂದಾನಿ ಅಮರೇಗೌಡ ಪಾಟೀಲ್ ನೇರವೆರಿಸಿದರು. ಗ್ರಾಂ. ಪ ಅಧ್ಯಕ್ಷ ಲಕ್ಷ್ಮಮ್ಮ ಚವಡಿ, ಸದಸ್ಯ ಶಿವನಗೌಡ ಮಾಲಿ ಪಾಟೀಲ್, ದುರಗಮ್ಮ ರಾಮಪ್ಪ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಭಾಗಿಯಾಗಿದ್ದರು.

ಶಾಲಾ ಮುಖ್ಯ ಗುರುಗಳು ಗುರುಬಸ್ಸಪ್ಪ, ಶಿಕ್ಷಣ ಪ್ರೇಮಿ ಬಸಣ್ಣ ರಾಠಿ, ಸೋಮಣ್ಣ, ಎಸ್ಡಿಎಂಸಿ ಸದಸ್ಯರು. ಪಾಲಕರು, ಸೇರದಂತೆ ಶಾಲಾ ವಿಧ್ಯಾರ್ಥಿಗಳು, ಶಾಲಾ ಶಿಕ್ಷಕ ಸಿಬ್ಬಂದಿಗಳು, ಗ್ರಾಮಸ್ಥರು ಇದ್ದರು.

# ವಿಬಿ ಜಿ ರಾಮ್ ಜಿ ಕಾರ್ಯಗಾರ್ರ: ಹಾಲಪ್ಪ ಆಚಾರ್



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಮಸಬ ಹಂಚಿನಾಳ ಭಾರತೀಯ ಜನತಾ ಪಾರ್ಟಿ ಆಫೀಸ್ ನಲ್ಲಿ ವಿಬಿ ಜಿ ರಾಮ್ ಜಿ ಕಾರ್ಯಗಾರ ಕುರಿತು ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾಧ್ಯಮ ರೊಂದಿಗೆ ಮಾತನಾಡಿದ ಅವರು ನಾಳೆ ಯಲಬುರ್ಗಾ ಪಟ್ಟಣದಲ್ಲಿ ಭಾರತೀಯ ಜನತಾ ಪಕ್ಷದ ಆಫೀಸ್ ನಲ್ಲಿ ವಿ ಬಿ ಜಿ ರಾಮ್ ಜಿ ಕುರಿತು ಕಾರ್ಯಗಾರ ಇರುತ್ತದೆ ಎಂದು ಹೇಳಿದರು

ಗ್ರಾಮೀಣ ಭಾಗದ ಜನತೆಗೆ ಈ ಯೋಜನೆಯು ಅಭಿವೃದ್ಧಿ ಕಡೆಗೆ ಒಯ್ಯುತ್ತದೆ ಆಡಳಿತ ಮಾಡುತ್ತಿರುವ ಕಾಂಗ್ರೆಸ್ ಪಕ್ಷವು ಈ ಯೋಜನೆ ಕುರಿತು ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ ಕಾಂಗ್ರೆಸಿನವರು ತಮ್ಮ ಆಡಳಿತದೊಳಗೆ ಭ್ರಷ್ಟಾಚಾರದಲ್ಲಿ ಮುಳಗಿಕೊಂಡು ಈ ಯೋಜನೆ ಬಗ್ಗೆ ಅಪಸ್ವರ ಎತ್ತಿ ಗ್ರಾಮೀಣ ಭಾಗದಲ್ಲಿ ಕೂಡ ಒಂದು ಪಂಚಾಯಿತಿ , ವರೆಗೂ ಪ್ರತಿ ಜಿಲ್ಲಾಮಟ್ಟದಲ್ಲೂ, ತಾಲೂಕು ಮಟ್ಟ ದಲ್ಲಿಯೂ ಕೂಡ ಇದಕ್ಕೆ ಇದಕ್ಕೆ ವಿರೋಧ ಮಾಡುವುದು ಹಾಸ್ಯಸ್ಪದ ಸಂಗತಿ ಎಂದರು.

ಗ್ರಾಮೀಣ ಭಾಗದ ಅಭಿವೃದ್ಧಿಗಾಗಿಯೇ ಮಾಡಿದ ಯೋಜನೆ 100 ದಿನಗಳ ಕೆಲಸದ ಯೋಜನೆ ಬದಲಾಗಿ 125 ದಿನಗಳಾಗಿ ಬದಲಾಗಿದೆ ಕೃಷಿ ಕಾರ್ಮಿಕರಿಗೆ ರೈತರಿಗೆ ಅನುಕೂಲವಾಗಲಿ ಎಂಬುವ ಹಿತದೃಷ್ಟಿಯಿಂದ ಮಾಡಿದ ಈ ಯೋಜನೆ ಆಡಳಿತ ಸರ್ಕಾರಕ್ಕೆ ಹೇಗೆ ನಷ್ಟ ಆಗುತ್ತದೆ ಎಂದು ನನಗೆ ಅರ್ಥ ಆಗುತ್ತಿಲ್ಲ ಎಂದು ಹೇಳಿದರು

ಹಾಗೂ 349 ದಿನಗೂಲಿಯನ್ನು 370 ರೂ ಕ್ಕೆ ದಿನಗೂಲಿಯನ್ನು ಹೆಚ್ಚಿಸಿದ್ದಕ್ಕಾಗಿ ರಾಜ್ಯ ಸರ್ಕಾರಕ್ಕೆ ಯಾವ ನಷ್ಟ ಆಗುತ್ತದೆ ನನಗೆ ಗೊತ್ತಿಲ್ಲ ಎಂದರು ಗ್ರಾಮೀಣ ಭಾಗದ ಜನರಿಗೆ ಕೆಲಸದ ದಿನಗಳು ಹೆಚ್ಚಾದವು ಹಾಗೂ ಆರ್ಥಿಕವಾಗಿ ಶಕ್ತಿ ತುಂಬುವ ದಿನಗೂಲಿ ಹೆಚ್ಚು ಆಯಿತು ಎಂದರು ಕಾಂಗ್ರೆಸ್ ಪಕ್ಷ ಈ ಯೋಜನೆಗೆ ಬಗ್ಗೆ ಅಪಪ್ರಚಾರ ಹೋರಾಟದಿಂದ ಜನ ತಲೆತಗ್ಗಿಸಬೇಕಾಗಿದೆ ಸರಿಯಾದ ಕಾರಣ ಸರಿಯಾದ ಆಧಾರಗಳಿಲ್ಲ ಈ ಯೋಜನೆ ಮಾಡುತ್ತಿರುವುದರ ಬಗ್ಗೆ ರಾಜ್ಯದ ಜನರು ಚಿಂತನೆ ಮಾಡುವಂತಹ ಕಾಲಘಟ್ಟ ವಿದು ಎಂದು ಹೇಳಿದರು.

ಹಾಜರಿಗಾಗಿ ಯೋಜನೆಯಾಗಿದ್ದ ಕೇಂದ್ರ ಪೂರ್ಣ 100 % .ನ ವ್ಯವಸ್ಥೆ ಇತ್ತು ರಾಜ್ಯ ಸರ್ಕಾರಕ್ಕೆ ಜವಾಬ್ದಾರಿ ಬರಲೆಂದು 60/40 ರಲ್ಲಿ 60% ಕೇಂದ್ರ ಸರ್ಕಾರ 40% ರಾಜ್ಯ ಸರ್ಕಾರ ಜಂಟಿ ಜವಾಬ್ದಾರಿ ಇದ್ದರೆ ಇಬ್ಬರ ಜವಾಬ್ದಾರಿ ಇದ್ದಾಗ ಮಾತ್ರ ಯೋಜನೆ ಫಲಕಾರಿಯಾಗಲು ಸಾಧ್ಯ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಕೂಡ ಬಿಲ್ಲನ್ನು ಪಾಸು ಮಾಡಿ ರಾಷ್ಟ್ರಪತಿಗಳ ಸಹಿ ಆಗಿ ಏಪ್ರಿಲ್ 1 ನಂತರ ಅನುಷ್ಠಾನಗೊಳ್ಳುತ್ತದೆ ಎಂದರು

ಗ್ರಾಮೀಣ ಭಾಗದ ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚು 2006 ರಿಂದ ಈ ಯೋಜನೆ ಪ್ರಾರಂಭವಾಯಿತು ಸುಮಾರು 10 ಬಾರಿ ಯೋಜನೆಯಲ್ಲಿ ಹೆಸರು ಬದಲಾವಣೆಯಾಗಿವೆ ನೆಹರುರೊಬ್ಬ ಯೋಜನೆ ಮಹಾತ್ಮ ಗಾಂಧಿ ನರೇಗಾ ಯೋಜನೆ ಹೀಗೆ ಕಾಲಕ್ಕೆ ತಕ್ಕಂತೆ ಮಾಡಿದ್ದು ಈ ಯೋಜನೆಗೆ ಹೆಚ್ಚು ಶಕ್ತಿ ತುಂಬಲು ಹೆಸರು ಬದಲಾವಣೆ ಮಾಡಲಾಗಿದೆ ಹಾಗೂ ಗ್ರಾಮೀಣ ಭಾಗದ ಜನರಿಗೆ ಕೆಲಸ ಸಿಗಬೇಕು ಮುಂದಿನ ಅಭಿವೃದ್ಧಿಗೆ ಮತ್ತು ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕ ಅಧ್ಯಕ್ಷ ಮಾರುತಿ ಗಾವರಾಳ, ವಿಶ್ವನಾಥ್ ಮರಿಬಸಪ್ಪನವರ ಪಕ್ಷದ ಪದಾಧಿಕಾರಿಗಳು ಇದ್ದರು.

# ಶೀಘ್ರದಲ್ಲೇ ಜಿಲ್ಲಾ ಉಸ್ತುವಾರಿಯಾಗಿ ನಮ್ಮವರೇ ನೇಮಕ: ಸಂಸದ ಈ.ತುಕಾರಾಂ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಶೀಘ್ರದಲ್ಲೆ ನಮ್ಮ ಬಳ್ಳಾರಿ ಜಿಲ್ಲೆಗೆ ನಮ್ಮವರೇ ಜಿಲ್ಲಾ ಉಸ್ತುವಾರಿಯಾಗಿ ನೇಮಕ ಆಗಲಿದ್ದಾರೆ, ಸ್ವಲ್ಪ ದಿನ ಕಾದುನೋಡಿ ಎಂದು ಸಂಸದ ಈ.ತುಕಾರಾಂ ಅವರು ಹೇಳಿದರು. ಸೋಮವಾರ ನಗರದಲ್ಲಿ ನಡೆದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ಸಮಾರಂಭದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸರ್ಕಾರಿ ಕಾರ್ಯಕ್ರಮಗಳಿಗೆ, ಧ್ವಜಾರೋಹಣ ಕಾರ್ಯಕ್ರಮ ಸೇರಿದಂತೆ ವಿವಿಧ ಸಮಾರಂಭಗಳಿಗೆ ಮಾತ್ರ ಜಿಲ್ಲಾ ಉಸ್ತುವಾರಿ ಸಚಿವರು ಸೀಮಿತರಾಗಿದ್ದಾರೆ, ಪೌರಾಡಳಿತ ಸಚಿವರು ಧ್ವಜಾರೋಹಣ ಕಾರ್ಯಕ್ರಮಕ್ಕೆ 4–5 ಬಾರಿ ಭಾಗವಹಿಸಿದ್ದು, ಇಂದು ಮತ್ತೆ ಧ್ವಜಾರೋಹಣಕ್ಕೆ ಆಗಮಿಸಿದ್ದಾರೆ, ಬಳ್ಳಾರಿಯ ಬ್ಯಾನರ್ ಗಲಾಟೆ, ಮನೆಗೆ ಬೆಂಕಿ ಹಚ್ಚಿದ ಪ್ರಕರಣ, ಜಿಲ್ಲೆಯಲ್ಲಿ ಡ್ರಗ್ಸ್, ಗಾಂಜಾ ಮಾರಾಟ, ಮಟಕಾ, ಜೂಜು, ಅಕ್ರಮ ಮರಳು ದಂಧೆ ಸೇರಿ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎನ್ನುವ ಆರೋಪಗಳು ಸಾಮಾನ್ಯವಾಗಿವೆ. ಜನರು ಯಾರನ್ನು ಕೇಳಬೇಕು, ಹೀಗಾದರೆ ಜನರ ಪರಿಸ್ಥಿತಿ ಏನು ಎನ್ನುವ ಸುದ್ದಿಗಾರರ ಪ್ರಶ್ನೆಗೆ, ಸಂಸದ ಈ.ತುಕಾರಾಂ ಅವರು ಉತ್ತರಿಸಿ, ಆತುರ ಬೇಡ, ಶೀಘ್ರದಲ್ಲೇ ನಮ್ಮವರೇ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಲಿದ್ದಾರೆ, ಕಾದು ನೋಡಿ, ಯಾರು ಎಂದು ಹೇಳೋಲ್ಲ ಎಂದು ಹೆಸರನ್ನು ಉಲ್ಲೇಖಿಸದೇ ಜಾರಿಕೊಂಡರು.

ಪೌರಾಡಳಿತ ಹಾಗೂ ಹಜ್ ಸಚಿವ ರಹೀಮ್ ಖಾನ್ ಅವರು ಮಾತನಾಡಿ,

ಗಣಿ ನಾಡು ಬಳ್ಳಾರಿಯ ಘಟನೆಯನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಅಗತ್ಯಕ್ರಮಗಳನ್ನು ಕೈಗೊಂಡಿದೆ. ಬಳ್ಳಾರಿಯಲ್ಲಿ ಶಾಂತಿ, ಸುವವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ಬದ್ಧವಾಗಿದೆ, ನಮ್ಮ ಸರ್ಕಾರದಲ್ಲಿ ಅಕ್ರಮಕ್ಕೆ ಅವಕಾಶವಿಲ್ಲ.

ಸಣ್ಣ ವಿಚಾರವನ್ನು ದೊಡ್ಡದು ಮಾಡುವವರು ಕೆಲವರು ಇರ್ತಾರೆ. ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ. ಬಳ್ಳಾರಿಯ ಘಟನೆ, ಅಕ್ರಮ ದಂಧೆಗಳು ಕುರಿತು ಹರಿದಾಡುತ್ತಿರುವ ಆರೋಪಕ್ಕೆ ಸಂಬಂಧಿಸಿ ಸರ್ಕಾರದ ಹಾಗೂ ಜಿಲ್ಲಾ ಉಸ್ತುವಾರಿ ಜಮೀರ್ ಅಹ್ಮದ್ ಖಾನ್ ಅವರ ಗಮನಸೆಳೆಯುವೆ ಎಂದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಲೀಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್, ಪಾಲಿಕೆ ಮೇಯರ್ ಪಿ.ಗಾದೆಪ್ಪ, ಪಾಲಿಕೆ ಸದಸ್ಯ ವಿವೇಕ್, ಕುಬೇರ, ಮುಖಂಡ ರವಿ ಇತರರಿದ್ದರು.

# ಮೆಕ್ಕೆಜೋಳ: ಹೆಸರು ನೋಂದಾಯಿಸಲು ಸಲಹೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ 2025–26 ನೇ ಸಾಲಿಗೆ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳ ಉತ್ಪನ್ನಕ್ಕೆ ರೈತರಿಗೆ ಬೆಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಉದ್ದೇಶಿಸಲಾಗಿದ್ದು, ಅರ್ಹ ರೈತರು ನೋಂದಾಯಿಸಿಕೊಳ್ಳುವಂತೆ ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ ಬೆಂಗಳೂರು ಶಾಖಾ ವ್ಯವಸ್ಥಾಪಕರು, ವಿಜಯನಗರ ಜಿಲ್ಲೆ ಇವರಿಂದ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳ ಉತ್ಪನ್ನಕ್ಕೆ ಮಾರುಕಟ್ಟೆ ಮಧ್ಯಪ್ರವೇಶ ದರ ಪ್ರತಿ ಕ್ವಿಂಟಾಲ್‌ಗೆ ಗರಿಷ್ಠ ರೂ. 2,150/– ನಿಗಧಿಪಡಿಸಿದ ಬೆಲೆ ಗೆ ಮೆಕ್ಕೆಜೋಳ ಉತ್ಪನ್ನಕ್ಕೆ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಆಗುವ ವಹಿವಾಟಿನ ಧಾರಣೆಯ ಆಧಾರದ ಮೇಲೆ ರೈತರಿಗೆ ಬೆಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುತ್ತದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಮಾರುಕಟ್ಟೆಗಳಲ್ಲಿ ವಹಿವಾಟು ಆಗುವ ಧಾರಣೆ ಪರಿಗಣಿಸಿ ಪ್ರತಿ ಕ್ವಿಂಟಾಲ್ ಗೆ ಗರಿಷ್ಠ ರೂ.250/– ರಂತೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲಾಗುವುದು.

ರೈತರು ನೋಂದಣಿ ಮಾಡಿಸಿಕೊಳ್ಳಲು ಜಿಲ್ಲೆಯ ವಿವಿಧೆಡೆ ನೋಂದಣಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು, ಜಿಲ್ಲೆಯ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಕೋರಿದ್ದಾರೆ.

**ನೋಂದಣಿ ಕೇಂದ್ರಗಳು:**

ಬಳ್ಳಾರಿ ತಾಲ್ಲೂಕಿನ ಶ್ರೀಧರಗಡ್ಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಶ್ರೀಧರಗಡ್ಡೆ, ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಕಚೇರಿ–ಮೊ.6363153309. ನಗರದ ಎಸ್‌ಪಿ ವೃತ್ತದ ರೈತ ಸೇವಾ ಸಹಕಾರ ನಿಯಮಿತ–ಮೊ.9535380789. ಸಂಡೂರು ಪಟ್ಟಣದ ವಿಜಯ ವೃತ್ತದ ಬಳ್ಳಾರಿ ಮುಖ್ಯ ರಸ್ತೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ–ಮೊ.9980676497. ಸಂಡೂರು ತಾಲ್ಲೂಕಿನ ಬಂಡ್ರಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ–ಮೊ.9008397644. ಸಿರುಗುಪ್ಪ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಸಿರುಗುಪ್ಪ–2 ( ಬೆಳಗಲ್ಲು), ಸಿರುಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಕಚೇರಿ–ಮೊ.7259598625.

ಕುರುಗೋಡು ಪಟ್ಟಣದ ಅಂಚೆ ಕಚೇರಿ ಹತ್ತಿರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ–ಮೊ.8951307333.

ಈ ಯೋಜನೆಯಡಿ ಪ್ರತಿ ಎಕರೆಗೆ 12 ಕ್ವಿಂಟಾಲ್ ನಂತೆ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಾಗುವ ರೈತರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕನುಗುಣವಾಗಿ ಪ್ರತಿ ರೈತರಿಗೆ ಗರಿಷ್ಠ 50 ಕ್ವಿಂಟಾಲ್ ಗೆ ಮಿತಿಗೊಳಿಸಿ ವ್ಯತ್ಯಾಸದ ಮೊತ್ತವನ್ನು ನೀಡಲಾಗುವುದು.

ಮೆಕ್ಕೆಜೋಳ ಉತ್ಪನ್ನಕ್ಕೆ ಪ್ರಚಲಿತ ಮಾರುಕಟ್ಟೆಗಳಲ್ಲಿ ವಹಿವಾಟು ಆಗುತ್ತಿರುವುದನ್ನು ಪರಿಗಣಿಸಿ ಮಾರುಕಟ್ಟೆ ಮಧ್ಯಪ್ರವೇಶ ದರ ಪ್ರತಿ ಕ್ವಿಂಟಾಲ್‌ಗೆ ಗರಿಷ್ಠ ರೂ.2,150 ಗಳನ್ನು ನಿಗದಿಪಡಿಸಿದೆ. ಈ ಮೊತ್ತಕ್ಕೆ ಅಥವಾ ಈ ಮೊತ್ತಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟವಾದಲ್ಲಿ ಈ ಯೋಜನೆಯು ಅನ್ವಯಿಸುವುದಿಲ್ಲ.

ರೈತರು ಜಿಲ್ಲೆಯಲ್ಲಿಯೇ ನೋಂದಣಿ ಮಾಡಿಸಿಕೊಳ್ಳಬೇಕು, ನೋಂದಣಿ ಮಾಡಿಸಿಕೊಂಡ ರೈತರು ಮೆಕ್ಕೆಜೋಳವನ್ನು ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಥವಾ ಹತ್ತಿರದ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ವೇದಿಕೆ ಮೂಲಕ ಮೆಕ್ಕೆಜೋಳ ವಹಿವಾಟುವಾಗುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಾದ ಕೊಟ್ಟೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಮಾರುಕಟ್ಟೆ ಪ್ರಾಂಗಣಗಳಲ್ಲಿಯೂ ಸಹ ಮಾರಾಟ ಮಾಡಿಕೊಳ್ಳಬಹುದು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳಿಂದ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ತಂತ್ರಾಂಶದಲ್ಲಿ ದಾಖಲಾದ ನೋಂದಾಯಿತ ರೈತರ ಮಾರಾಟದ ದೃಢೀಕರಣವಾದ ನಂತರ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪರಿಶೀಲಿಸಿ ವ್ಯತ್ಯಾಸದ ಮೊತ್ತವನ್ನು ಡಿಬಿಟಿ ಮುಖಾಂತರ ರೈತರ ಖಾತೆಗೆ ಪಾವತಿಸಲಾಗುವುದು.

ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ಎಥೆನಾಲ್ ಉತ್ಪಾದನೆಗಾಗಿ, ಕುಕ್ಕುಟ ಮತ್ತು ಪಶು ಆಹಾರ ತಯಾರಿಕಾ ಘಟಕಗಳಿಗೆ ಹಾಗೂ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಕ್ಕೆ ಅವ್ಯಶ್ಯವಿರುವ ಮೆಕ್ಕೆಜೋಳ ಪೂರೈಕೆ ಮಾಡಿರುವ ರೈತರಿಗೆ ಈ ಯೋಜನೆ ಅನ್ವಯಿಸುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಸಮಯ ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆಯವರೆಗೆ ಮಾತ್ರ ರೈತರ ನೋಂದಣಿ ಕಾರ್ಯ ಕೈಗೊಳ್ಳಲಾಗುವುದು. ಈ ಯೋಜನೆಯ ಅನುಷ್ಠಾನ ಅವಧಿಯು ಮೆಕ್ಕೆಜೋಳ ಉತ್ಪನ್ನದ ಮೊದಲ ವಹಿವಾಟು ಯುಎಂಪಿ ತಂತ್ರಾಂಶದಲ್ಲಿ ಆಗುವ ದಿನಾಂಕದಿಂದ ರಾಜ್ಯಾದ್ಯಂತ ಒಂದು ತಿಂಗಳ ಅವಧಿಯ ವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ ಎಂದು ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಸುಗಳ ಆರೋಗ್ಯ ಕಾಳಜಿವಹಿಸಿ:ಶಾರದಾ ಪಾನಘಂಟಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ತಾಲ್ಲೂಕಿನ ಹಂದ್ರಾಳ ಗ್ರಾಮದಲ್ಲಿ ಪಾನಘಂಟಿ ಫೌಂಡೇಶನ್ ಭಾಗ್ಯನಗರ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಕೊಪ್ಪಳ ಹಾಗೂ ಭಾರತ ಸಂಜೀವಿನಿಯ ವತಿಯಿಂದ ಬರಡು ರಾಸುಗಳ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸಸಿಗೆ ನೀರಾಕುವ ಮೂಲಕ ಪಾನಘಂಟಿ ಪೌಂಡೇಶನ್ ನ ಕಾರ್ಯದರ್ಶಿಗಳಾದ ಶಾರದಾ ರಾಘವೇಂದ್ರ ಪಾನಘಂಟಿ ಅವರು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆ ಮೂಲ ಆದಾಯದ ಜೊತೆಗೆ ಕೃಷಿಗೆ ಪೂರಕವಾಗಿದ್ದು ರಾಸುಗಳ ಆರೈಕೆ ಮುಖ್ಯವಾಗಿದ್ದು ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆಯನ್ನು ನೀಡಬೇಕು. ಆರ್ಥಿಕವಾಗಿ ಸಬಲರಾಗಲು ರಾಸುಗಳ ಆರೋಗ್ಯ ಕಾಳಜಿವಹಿಸಿ ಎಂದರು.

ಕಾರ್ಯಕ್ರಮವು ಪಶು ಇಲಾಖೆಯ ಸಹಾಯಕ ನಿರ್ದೇಶಕರಾದ ವಿನೋದ ದಿವಟರ ಅವರ ಮಾರ್ಗದರ್ಶನದಂತೆ ಗ್ರಾಮೀಣ ಪ್ರದೇಶದಲ್ಲಿನ ರಾಸುಗಳ ಆರೋಗ್ಯ ಸುಧಾರಣೆಗಾಗಿ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಇದೇ ವೇಳೆ ಪಶು ವೈದ್ಯಾಧಿಕಾರಿಗಳಾದ ಕಳಕಪ್ಪ ಹೂಗಾರ ಮಾತನಾಡಿ ಹವಾಮಾನ ಬದಲಾವಣೆಯಿಂದಾಗಿ ರಾಸುಗಳ ಆರೋಗ್ಯದಲ್ಲಿ ಏರುಪೇರಾಗುತ್ತವೆ. ಸಾಂಕ್ರಾಮಿಕ ರೋಗಗಳ ಸೊಂಕು ನಿವಾರಣಾ ಕ್ರಮಗಳನ್ನು ಮುಂಜಾಗ್ರತಾ ಕ್ರಮವಾಗಿ ಪಾಲಿಸಿ. ರಾಸುಗಳ ಗರ್ಭಧಾರಣೆಯ ಸಮಯದಲ್ಲಿ ಅವುಗಳ ಆರೈಕೆ ಬಹುಮುಖ್ಯವಾಗಿತ್ತದೆ. ತುರ್ತು ಸಮಯದಲ್ಲಿ ಮತ್ತು ಕೃತಕ ಗರ್ಭಧಾರಣೆಗಾಗಿ ಉಚಿತ ಸಂಖ್ಯೆಗಳಿಗೆ ಕರೆ ಮಾಡಿ ಆರೋಗ್ಯ ಸಲಹೆಯೊಂದಿಗೆ ಜೊತೆಗೆ ಚಿಕಿತ್ಸೆ ಪಡೆಯಿರಿ ಎಂದರು. ಆರೋಗ್ಯ ತಪಾಸಣೆಯಲ್ಲಿ ಚರ್ಮರೋಗ ಸಮಸ್ಯೆ, ಬಂಜೆತನ ಸಮಸ್ಯೆ, ಪೋಷಕಾಂಶಗಳಕೊರತೆ ಇರುವ 80 ಕ್ಕೂ ಹೆಚ್ಚು ರಾಸುಗಳು ಕಂಡುಬಂದವು ಅದರಲ್ಲಿ 22 ಹಸುಗಳ ಗರ್ಭ ತಪಾಸಣೆ ಮಾಡಲಾಯಿತು. ಜಂತು ನಿರೋಧಕ ಔಷಧಿಗಳನ್ನು ನೀಡಲಾಯಿತು. ಗ್ರಾಮಸ್ಥರು ಜಾನುವಾರುಗಳಿಗೆ ಚಿಕಿತ್ಸೆ ಪಡೆದುಕೊಂಡು ಕಾಯಿಲೆಗೆ ಔಷಧೋಪಚಾರ ಜೊತೆಗೆ ಆರೋಗ್ಯ ಸಲಹೆ ಪಡೆದುಕೊಂಡರು.

ಮಹಿಳಾ ಧ್ವನಿ ಸಂಸ್ಥೆಯ ಪ್ರಿಯದರ್ಶಿನಿ ಮುಂಡರಗಿಮಠ, ಸಂತೋಷ, ಬಿ.ಎನ್.ಹೊರಪೇಟಿ, ಯಲ್ಲಪ್ಪ ಬೋಚನಹಳ್ಳಿ, ಮಂಜಪ್ಪ ಈಟಿ, ಮೈತ್ರಿ ಕಾರ್ಯಕರ್ತರು ಗ್ರಾಮಸ್ಥರಾದ ಮಲ್ಲಪ್ಪ,ಗಾಳೆಪ್ಪ,ಹನುಮಪ್ಪ,ಶಂಕ್ರಪ್ಪ ಮತ್ತಿತರರು ಉಪಸ್ಥಿತಿ ಇದ್ದರು.

# ವಾರಕ್ಕೆ 2 ದಿನ ರಜೆಗೆ ಆಗ್ರಹಿಸಿ ಬ್ಯಾಂಕ್ ನೌಕರರ ಮುಷ್ಕರ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಾರದಲ್ಲಿ ಐದು ದಿನ ಕೆಲಸ ಎರಡು ದಿನ ರಜೆ ನೀಡಬೇಕೆಂದು ಆಗ್ರಹಿಸಿ ರಾಷ್ಟ್ರೀಕೃತ ಬ್ಯಾಂಕ್ ನೌಕರರು ಇಂದು ಮುಷ್ಕರ ನಡೆಸಿದರು.

ನಗರದ ಬೃಹತ್ ಪ್ರತಿಭಟನೆ ಮೂಲಕ ಎಸ್ ಬಿ ಐ ಬ್ಯಾಂಕ್ ಪ್ರಧಾನ ಕಚೇರಿ ಅವರಣಕ್ಕೆ ಬಂದ ನೌಕರರು ಕಳೆದ ಹತ್ತು ವರ್ಷದಿಂದ ತಮ್ಮ ಈ ಬೇಡಿಕೆ ಈಡೇರಿಸದ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು. ಬೇಡಿಕೆ ಈಡೇರೋವರೆಗೂ ನಮ್ಮ ಹೋರಾಟ ನಿಲ್ಲೋದಿಲ್ಲ ಎಂದರು.

ಜೊತೆಗೆ ರಾಷ್ಟ್ರೀಕೃತ ಬ್ಯಾಂಕ್ ಗಳ ಖಾಸಗಿಕರಣ ಕೈ ಬಿಡಬೇಕು. ಹಗಲಿರುಳು ಎನ್ನದೇ ಕೇಂದ್ರ ಸರ್ಕಾರದ ಎಲ್ಲಾ ಯೋಜನೆ ಅನುಷ್ಠಾನ ಮಾಡ್ತೇವೆ ನಾವು. ಜನರ ಸೇವೆ ಒದಗಿಸೋದ್ರಲ್ಲಿ ನಾವು ಬ್ಯಾಂಕ್ ನವರು ಮೊದಲೇ ಸಾಲಿನಲ್ಲಿ ನಿಲ್ಲುತ್ತೇವೆ ನಮ್ಮ ನೌಕರರ ಕೆಲಸದ ಭದ್ರತೆಗೆ ಒತ್ತು ನೀಡಬೇಕು. ನಿರಂತರವಾಗಿ ಸೇವೆ ಮಾಡುವ ನಮ್ಮನ್ನು ಕಡೆಗಣಿಸುತ್ತಿರೋ ಹಿನ್ನೆಲೆ ಹೋರಾಟ ಅನಿವಾರ್ಯವಾಗಿದೆ ಎಂದರು.

ಪ್ರತಿಭಟನೆಯಲ್ಲಿ ಸಂಘಟನೆಯ ಮುಖ್ಯ ಸಚೇತಕರಾದ ಸೂರಜ್ ಆರ್.ಹೆಚ್. ಆರ್ ಘನ ಮಲ್ಲಿ ಮತ್ತು ಅಶೋಕ್, ಡಿ.ರಾಮಕೃಷ್ಣ, ಧರ್ಮೇಂದ್ರ, ರವಿ ಸರ್, ಪ್ರತಾಪ್, ಶಿವರಾಜ್, ಎಸ್ ಮಂಜುಳ, ಪ್ರವೀಣ್ ಕುಮಾರ್ , ಸಿಐಟಿಯು ನ ಮುಖಂಡ ಸತ್ಯಬಾಬು, ಗ್ರಾಮೀಣ ಬ್ಯಾಂಕ್ ನ ನೌಕರರ ಸಂಘದ ಮುಖಂಡರಾದ ಶರಣ ಗೌಡ ಪಾಟೀಲ್ , ಪ್ರದೀಪ, ಜನಾರ್ಧನ, ಕೆ ಈರಣ್ಣ, ವಿ ಟಿ ನಾಗೇಶ್, ನಿಸಾರ್ ಅಹಮ್ಮದ್ ಮೊದಲಾದವರು ಪಾಲ್ಗೊಂಡಿದ್ದರು.

# ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ):**

ರೇಷ್ಮೆ ಇಲಾಖೆಯಿಂದ 2023-24 ಮತ್ತು 2024-25 ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿದ ರೇಷ್ಮೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವ ರೇಷ್ಮೆ ಬೆಳೆಗಾರರು ಕನಿಷ್ಠ 1 ಎಕರೆ ಹಿಪ್ಪುನೇರಳೆ ತೋಟ ಹಾಗೂ ಪ್ರತ್ಯೇಕ ಹುಳು ಸಾಕಾಣಿಕಾ ಮನೆ ಹೊಂದಿರಬೇಕು. 100 ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ, ಒಂದು ಎಕರೆಗೆ ರೇಷ್ಮೆ ಗೂಡಿನ ಉತ್ಪಾದನೆ 500 ಕೆ.ಜಿ.ಗಿಂತ ಕಡಿಮೆ ಇರಬಾರದು. ರೇಷ್ಮೆ ಬೆಳೆಗಾರರು ರೇಷ್ಮೆ ಪಾಸ್ ಬುಕ್, ರೇಷ್ಮೆ ಮೊಟ್ಟೆ ಖರೀದಿಸಿರುವ ಬಗ್ಗೆ ಹಾಗೂ ರೇಷ್ಮೆ ಗೂಡು ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳೊಂದಿಗೆ ಅರ್ಹ ರೈತರು ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿಗಳು ಅಥವಾ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗೆ ಫೆಬ್ರವರಿ 5 ರ ಒಳಗಾಗಿ ಅರ್ಜಿ ಸಲ್ಲಿಸಬಹುದು ಪ್ರಕಟಣೆ ತಿಳಿಸಿದೆ.

# ನಿಮಗಾಗಿ ನಾವು ಸಂಸ್ಥೆಯ ಹಬ್ಬ ಕಾರ್ಯಕ್ರಮ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಿಮಗಾಗಿ ನಾವು ಸಂಸ್ಥೆಯ ವತಿಯಿಂದ ಹಲಕುಂದಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಕ್ಕೂಟ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಈ ಸಂದರ್ಭದಲ್ಲಿ ಧ್ವಜಾರೋಹಣವನ್ನು ಮಾಜಿ ಸೈನಿಕರಾದ ಬಿ.ಎನ್ ಪ್ರಹ್ಲಾದ್ ರೆಡ್ಡಿ., ಪತ್ರಕರ್ತ ಮಂಜುನಾಥ, ಪಿ.ಆರ್.ಪಿ ಶ್ರೀನಿವಾಸ ರೆಡ್ಡಿರವರು ನೇರವೇರಿಸಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಮುಖ್ಯಗುರು ಕೆಂಚಪ್ಪ.ಕೆ ಮಾತಾಡಿ, ಗಣರಾಜ್ಯೋತ್ಸವ ದಿನವನ್ನು ಒಕ್ಕೂಟ ಹಬ್ಬವಾಗಿ ಶಾಲೆಯಲ್ಲಿ ಆಯೋಜನೆ ಮಾಡಿರುವುದು ಖುಷಿಯ ವಿಚಾರ, ಈ ಒಕ್ಕೂಟ ವ್ಯವಸ್ಥೆಯಲ್ಲಿ ನಾವೆಲ್ಲರೂ ಸಂವಿಧಾನ ನಮಗೆ ನೀಡಿರುವ ಹಕ್ಕುಗಳನ್ನು ಸ್ಮರಿಸುತ್ತಾ ತಪ್ಪದೇ ಎಲ್ಲರೂ ಸಂವಿಧಾನವನ್ನು ಗೌರವಿಸಬೇಕು ನೀತಿ ನಿಯಮಗಳನ್ನು ತಪ್ಪದೇ ಪಾಲನೆ ಮಾಡಬೇಕು ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷರಾದ ವಿನಯ್ ಕುಮಾರ್ ಎಂ.ಎಸ್ ರವರು ಮಾತಾಡಿ 77 ನೇ ಒಕ್ಕೂಟ ದಿನವಾದ ಇಂದು ನಾವೆಲ್ಲರೂ ದೇಶಕ್ಕಾಗಿ ದುಡಿದ ಮಡಿದ ಮಹನೀಯರ ಜೀವನವನ್ನು ಆದರ್ಶವಾಗಿ ಇಟ್ಟು- ಕೊಂಡು ಸಾಗಬೇಕಿದೆ ಹಾಗೂ ಸಮಾಜಮುಖಿ ಕೆಲಸಗಳಲ್ಲಿ ಎಲ್ಲರೂ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು. ಪತ್ರಕರ್ತ ಮಂಜುನಾಥ ಮಾತಾಡಿ,

ನಿಮಗಾಗಿ ನಾವು ಸಂಸ್ಥೆಯು ಕಾರ್ಯಕ್ರಮವನ್ನು ತುಂಬ ಅಚ್ಚುಕಟ್ಟಾಗಿ ಮಾಡಿದ್ದು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ವಿತರಣೆ ಮಾಡಿದ್ದು ಎಲ್ಲಾರಿಗೂ

ಸಂತೋಷದ ಸಂಗತಿ, ಅವರ ಅನ್ನಧನ್ಯ, ನಾವು ನಮ್ಮವರಿಗೆ, ನಮ್ಮ ಪರಿಸರ, ಹೊದಿಕೆ ಜೀವಕೆ ಇನ್ನೂ ಅನೇಕ ಯೋಜನೆಗಳು ನಿರಂತರವಾಗಿ ಚಾಲ್ತಿಯಲ್ಲಿದ್ದು ಅವರ ಕೆಲಸಗಳು ಎಲ್ಲಾರಿಗೂ ಮಾದರಿ ಎಂದು ತಿಳಿಸಿ, ಸಂವಿಧಾನ ಪೀಠಿಕೆಯನ್ನು ಓದಿದರು.

ಮಾಜಿ ಸೈನಿಕ ಪ್ರಹ್ಲಾದ್ ರೆಡ್ಡಿ ಮಾತಾಡಿ, ದೇಶ ಕಾಯೋ ಯೋಧರನ್ನು ಸ್ಮರಿಸುತ್ತಿರುವುದು ನಮ್ಮ ಸೇವೆಯನ್ನು ಗುರುತಿಸಿ ಸನ್ಮಾನಿಸುತ್ತಿರುವ ಕಾರ್ಯ ಶ್ಲಾಘನೀಯವೆಂದು ತಿಳಿಸಿದರು. ಗ್ರಾ.ಪಂ. ಸದಸ್ಯ ಕೇಶವರೆಡ್ಡಿ ಮಾತಾಡಿ ಶಾಲೆಯ ಅಭಿವೃದ್ಧಿಗೆ ಪಂಚಾಯಿತಿಯ ಸಹಕಾರ ಸದಾ ಇರಲಿದ್ದು ಮುಂದಿನ ದಿನಗಳಲ್ಲಿ ಮಕ್ಕಳಾ ಕಲಿಕಾ ಚಟುವಟಿಕೆಗಳ ಸಾಮಾಗ್ರಿಗಳಿಗೆ ಪಂಚಾಯಿತಿ ವತಿಯಿಂದ ನೆರವಾಗುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಲಕುಂದಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಹೊನ್ನುರಮ್ಮ ಸದಸ್ಯರಾದ ನಾಗರಾಜ್,

ಬುಡೇನ್ ಸಾಬ್, ಕೇಶವರೆಡ್ಡಿ ಇತರರು ಮಕ್ಕಳಿಗೆ ಬಹುಮಾನ ವಿತರಿಸಿದರು ಶಿಕ್ಷಕರಾದ ಶ್ರೀಮತಿ ಮೀನಾಕ್ಷಿ ಕಾಳೆ, ಶ್ರೀಮತಿ ವಿಶಾಲಾಕ್ಷಿ ಶ್ರೀಮತಿ ಜಯಲಕ್ಷ್ಮೀ ಕು.ವಿಶಾಲಾಕ್ಷಿ ಕು.ಶಮೀನಾ ಹಾಗು ಸಂಸ್ಥೆಯ ಕಾರ್ಯನಿರ್ವಾಹಕರಾದ

ಅನಿವಾಶ್, ವಸಂತ್, ವೆಂಕಟೇಶ್, ಹಸೇನ್, ಭರತ್, ರಾಜು ಕೆ ಹೆಚ್, ಉದಯ್, ರಾಜ, ದಕ್ಷಿಣ ಮೂರ್ತಿ, ವೀರೇಶ್ ಪಾಲ್ಗೊಂಡಿದ್ದರು ಶಾಲೆಯ ಮಕ್ಕಳಿಂದ ಹಾಡು ನೃತ್ಯ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿತ್ತು.

# ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ 2024-25 ಹಾಗೂ 2025-26ನೇ ಸಾಲಿನಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್ ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಂದ "ಬಾಲಗೌರವ ಪ್ರಶಸ್ತಿ"ಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮಕ್ಕಳು ಕ್ರೀಡೆ, ಸಂಗೀತ, ನೃತ್ಯ ಬಹುಮುಖ ಪ್ರತಿಭೆ, ನಟನೆ, ಚಿತ್ರಕಲೆ, ಹಾಗೂ ವಿಜ್ಞಾನ ಮತ್ತು ಸಂಶೋಧನೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು. ಅಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವವಿವರಗಳನ್ನೊಳಗೊಂಡ ಮನವಿಯೊಂದಿಗೆ ಅರ್ಜಿಯನ್ನು ಫೆ.20 ರೊಳಗಾಗಿ ಧಾರವಾಡ ಜಿಲ್ಲೆಯ ಲಕಮ್ಮನಹಳ್ಳಿಯ ಕೆಹೆಚ್‌ಬಿ ಕಾಲೋನಿಯ ಚಂದ್ರಕಾ ಲೇಔಟ್ ಹಿಂಭಾಗದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಯೋಜನಾಧಿಕಾರಿ ಕಚೇರಿ, ಅಂಚೆ ವಿಳಾಸ-580004 ಕ್ಕೆ ಸಲ್ಲಿಸುವುದು.

ನಂತರ ಬಂದ ಅರ್ಜಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ. ಈಗಾಗಲೇ ಬಾಲಗೌರವ ಪ್ರಶಸ್ತಿ ಪಡೆದವರ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

ಅರ್ಜಿಗಳನ್ನು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಧಾರವಾಡ ಜಿಲ್ಲೆಯ ಕರ್ನಾಟಕ ಬಾಲವಿಕಾಸ ಅಕಾಡೆಮಿ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಪುಸ್ತಕಗಳ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ ಬಾಲವಿಕಾಸ ಅಕಾಡೆಮಿಯು 2024 ನೇ ಸಾಲಿನ (ಜನವರಿ-2024 ರಿಂದ ಡಿಸೆಂಬರ್-2024) ಹಾಗೂ 2025 ನೇ (ಜನವರಿ-2025 ರಿಂದ ಡಿಸೆಂಬರ್-2025) ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ "ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ" ಪ್ರದಾನ ಮಾಡಲು ಉದ್ದೇಶಿಸಲಾಗಿದ್ದು, ಅರ್ಹ ವಿವಿಧ ಪ್ರಕಾರ ಪುಸ್ತಕಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2024ನೇ ಸಾಲಿನ ಹಾಗೂ 2025ನೇ ಸಾಲಿನ ಅವಧಿಯಲ್ಲಿ (ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವಧಿ) ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ (ಪಠ್ಯಾಧಾರಿತ ಬಿಟ್ಟು), ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ) ಮಕ್ಕಳ ಸಾಹಿತ್ಯ ವಿಮರ್ಶೆ ಕೃತಿ ಹೀಗೆ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದೆ.ಹಾಗಾಗಿ ಮೇಲ್ಕಾಣಿಸಿದ ಕ್ಷೇತ್ರಗಳಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಯಾವ ಸಾಲಿಗೆ ಪರಿಗಣಿಸಬೇಕೆಂಬುವುದರ ಬಗ್ಗೆ ಸ್ಪಷ್ಟವಾಗಿ ನಮೂದಿಸಲು ತಿಳಿಸಿದೆ.ಪ್ರಶಸ್ತಿಗಾಗಿ ಪರಿಗಣಿಸಲು ಅಥವಾ ಮೌಲ್ಯಮಾಪನಗೊಳಿಸಲು ಪ್ರತಿಯೊಂದು ಕೃತಿಯ 4 ಪ್ರತಿಗಳನ್ನು ಹಾಗೂ ಸ್ವವಿವರಗಳನ್ನೊಳಗೊಂಡ ಮನವಿಯೊಂದಿಗೆ ಫೆ.20 ರೊಳಗಾಗಿ ಧಾರವಾಡ ಜಿಲ್ಲೆಯ ಲಕಮ್ಮನಹಳ್ಳಿಯ ಕೆಹೆಚ್‌ಬಿ ಕಾಲೋನಿಯ ಚಂದ್ರಕಾ ಲೇಔಟ್ ಹಿಂಭಾಗದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಯೋಜನಾಧಿಕಾರಿ ಕಚೇರಿ, ಅಂಚೆ ವಿಳಾಸ-580004 ಕ್ಕೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ದೂ.0836-2465490, ಮೊ.8050392209, 7204396275, 9448981944 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಗನಗೌಡ ಕಂದಕೂರ ಅವರ ದ್ವಿತೀಯ ಪುಣ್ಯಸ್ಮರಣೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಗುರುಮಠಕಲ್ ತಾಲೂಕಿನ ಕಂದಕೂರ ಗ್ರಾಮದ ತೋಟದ ಸ್ಮಾರಕದಲ್ಲಿ ಮಾಜಿ ಶಾಸಕ ಲಿಂ. ನಾಗನಗೌಡ ಕಂದಕೂರ ಅವರ ದ್ವಿತೀಯ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಲಿಂ. ನಾಗನಗೌಡ ಕಂದಕೂರ ಅಭಿಮಾನಿಗಳ ಬಳಗ ತಿಳಿಸಿದೆ.

ಬೆಳ್ಳಿಗ್ಗೆ 10 ಗಂಟೆಗೆ ಕಂದಕೂರ ಕುಟುಂಬಸ್ಥರಿಂದ ಲಿಂ. ನಾಗನಗೌಡರ ಸ್ಮಾರಕದಲ್ಲಿ ಶಾಸ್ತ್ರೋಕ್ತವಾಗಿ ವಿಶೇಷ ಪೂಜೆ ಜರುಗುವುದು. ನಂತರ 10.30 ರಿಂದ ಮಹಾಪ್ರಸಾದ ವಿತರಣೆ ಜರುಗುವುದು. ಈ ಕಾರ್ಯಕ್ರಮಕ್ಕೆ ಸಮಸ್ತ ಕಂದಕೂರ ಅಭಿಮಾನಿಗಳು, ಹಿತೈಷಿಗಳು, ಸರ್ವರೂ ಭಾಗವಹಿಸಬೇಕೆಂದು ಲಿಂ. ನಾಗನಗೌಡ ಕಂದಕೂರ ಅಭಿಮಾನಿಗಳ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

# ಅಧ್ಯಕ್ಷರ ರಾಜಿನಾಮೆಗೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದಲ್ಲಿನ ಜನತಾ ಬಜಾರ್ ನ ಅಧ್ಯಕ್ಷರಾಗಿರುವ ಕೆ.ಎ.ವೇಮಣ್ಣ ಅವರನ್ನು ರಾಜೀನಾಮೆ ನೀಡುವಂತೆ ಜನತಾ ಬಜಾರ್ ಮಾಜಿ ಅಧ್ಯಕ್ಷ ಜಿ.ನೀಲಕಂಠಪ್ಪ ಆಗ್ರಹಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ನಾಳೆ ಕಾರ್ಯಕಾರಿ ಸಭೆ ನಡೆಯಲಿದ್ದು, ನೀವು ಜ.30 ದಿನಾಂಕ ನಮೂದಿಸಿ ಸಭೆಯು ನಡೆಯುವ ಮುನ್ನವೇ ಅಧ್ಯಕ್ಷ ಸ್ಥಾನದ ರಾಜಿನಾಮೆ ಪತ್ರಕ್ಕೆ ಸಹಿ ಮಾಡಿಕೊಡಬೇಕು ಎಂದು ವೇಮಣ್ಣ ಅವರಿಗೆ ಕೋರಿದ್ದಾರೆ.

ಇಲ್ಲದಿದ್ದ ಪಕ್ಷದಲ್ಲಿ ಸಭೆಗೆ ಕೋರಂನ ಕೊರತೆ ಆಗುವ ಸಂಭವವಿದೆ. ಅಧ್ಯಕ್ಷರ ಆಕಾಂಕ್ಷಿಗಳು 4 ಸದಸ್ಯರಿದ್ದಾರೆ. ಮುಂಬರುವ ದಿನಗಳಿಗೆ ಇದರಲ್ಲಿ ಕೊನೆ ಪಕ್ಷ ಇಬ್ಬರಾದರೂ ಅಧ್ಯಕ್ಷರಾಗಲಿ ಮತ್ತು ಇಬ್ಬರು ಉಪಾಧ್ಯಕ್ಷರಾಗಲಿ ನನ್ನ ಮತ್ತು ಕೆಲವು ನಿರ್ದೇಶಕರ ಅಭಿಪ್ರಾಯವಾಗಿದೆ.

ತಮ್ಮ ಅಧ್ಯಕ್ಷರ ಅಧಿಕಾರವಧಿ ಒಂದು ವರ್ಷವೆಂದು ಈ ಹಿಂದೆ ಮಾತಾಗಿದ್ದು, ಜನವರಿ ತಿಂಗಳಿಗೆ ತಮ್ಮ ಅಧಿಕಾರಾವಧಿ ಮುಕ್ತಾಯವಾಗುತ್ತಿದೆ. ಆದರೆ, ತಾವುಗಳು ಬರುವ ಮಾರ್ಚ್ ತಿಂಗಳಲ್ಲಿ

ರಾಜಿನಾಮೆ ಕೊಡುತ್ತೀರೆಂದು ನಮಗೆ ತಿಳಿದು ಬಂದಿದ್ದು, ಇದಕ್ಕೆ ನನ್ನ ಮತ್ತು ಕೆಲವು ನಿರ್ದೇಶಕರ ಒಪ್ಪಿಗೆ ಇರುವುದಿಲ್ಲ.

ನೀವು ತಕ್ಷಣ ರಾಜೀನಾಮೆ ನೀಡದಿದ್ದರೆ ನಮ್ಮ ದಾರಿ ನಮಗೆ, ನಿಮ್ಮ ದಾರಿ ನಿಮಗೆ ಎಂದಿದ್ದಾರೆ.

13 ತಿಂಗಳು:

ಜನತಾ ಬಜಾರ್ ನ ಹಾಲಿ ಆಡಳಿತ ಮಂಡಳಿಯ ಅವಧಿ ಬರುವ 2027 ರ ಮಾರ್ಚ್ ವರೆಗೆ ಮಾತ್ರ ಇದೆ.

ಈ ಹಿಂದೆ ನಿಮಗೆ ಒಂದು ವರ್ಷ ನಿಗಧಿಯಾಗಿತ್ತು ಮಾತಿಗೆ ಬದ್ಧರಾಗಿರಿ ಎಂದಿದ್ದಾರೆ.

ಮುಂದಿನ 13 ತಿಂಗಳ ಅವಧಿಯಲ್ಲಿ ಆರು, ತಿಂಗಳಿಗೆ ಒಬ್ಬರಂತೆ ಅಧ್ಯಕ್ಷ ಉಪಾಧ್ಯಕ್ಷರಾಗಲು ನಿರ್ದೇಶಕರುಗಳಾದ, ಪಲ್ಲೇದ ಮೈತ್ರಿ, ಕೇದಾರ್, ವೆಂಕಟೇಶ್ ಹೆಗಡೆ ಹಾಗು ಹಲಕುಂದಿ ಮಲ್ಲಿಕಾರ್ಜುನಗೌಡ ಸಿದ್ದರಾಗಿ ಈಗಾಗಲೇ ನಿರ್ದೇಶಕರುಗಳಿಗೆ ಪಾರ್ಟಿ ಕೊಟ್ಟು ತಮ್ಮ ಬೆಂಬಲ ಪಡೆಯುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಆದರೂ ನಗರದ ಮಾಜಿ ಶಾಸಕ ಸೋಮಶೇಖರ ರೆಡ್ಡಿ, ಮೋತ್ಕರ್ ಶ್ರೀನಿವಾಸ್ ಅವರ ಬೆಂಬಲವೂ ಆಕಾಂಕ್ಷಿಗಳಿಗೆ ಬೇಕಾಗಿದೆ ಎನ್ನಬಹುದು.

# ಸರ್ಕಾರಿ ನೌಕರರ ಫಾಸ್ಟ್ ಟ್ರ್ಯಾಕ್ ಕೋರ್ಟ್ ರಚನೆಗೆ ಒತ್ತಾಯ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಾಜ್ಯ ಸರ್ಕಾರಿ ನೌಕರರ ಭ್ರಷ್ಟಾಚಾರ,

ಹಣ ದುರುಪಯೋಗ ಸೇರಿ ವಿವಿಧ ಪ್ರಕರಣಗಳ ತ್ವರಿತ ವಿಚಾರಣೆಗೆ ಜಿಲ್ಲಾ ಮಟ್ಟದಲ್ಲಿ ಫಾಸ್ಟ್‌ಟ್ರ್ಯಾಕ್ ಮಾದರಿಯಲ್ಲಿ ಪ್ರತ್ಯೇಕ ಕೋಗಳನ್ನು ಪ್ರಾರಂಭಿಸಬೇಕೆಂದು ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಒತ್ತಾಯಿಸಿದ್ದಾರೆ.

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ್ ಅವರಿಗೆ ನಡೆಯುತ್ತಿರುವ ವಿಶೇಷ ಅಧಿವೇಶನದಲ್ಲಿ ಇಂದು

ಪ್ರಶ್ನೆಯನ್ನು ಕೇಳಿರುವ ಅವರು, ಬಳ್ಳಾರಿ ಮಹಾನಗರ

ಪಾಲಿಕೆ ಸೇರಿ ಕರ್ನಾಟಕ ರಾಜ್ಯಾದ್ಯಂತ ಅಧಿಕಾರಿಗಳ ಭ್ರಷ್ಟಾಚಾರ ಹೆಚ್ಚಾಗಿದೆ. ಹಣದ ದುರುಪಯೋಗ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಇಂತಹ ಎಲ್ಲಾ ಪ್ರಕರಣಗಳ ವಿಚಾರಣೆಗೆ ಸರ್ಕಾರ ಜಿಲ್ಲಾ ಮಟ್ಟದಲ್ಲಿ ಫಾಸ್ಟ್ ಟ್ರ್ಯಾಕ್ ಕೋಗಳನ್ನು ಪ್ರಾರಂಭಿಸಬೇಕು ಎಂದರು.

ಬಳ್ಳಾರಿ ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ ಆಗಿರುವ ಎನ್.ವೀರೇಶಕುಮಾರ್, ಪ್ರಥಮ ದರ್ಜೆ ಕಂದಾಯ ನಿರೀಕ್ಷಕ ಮನೋಹರ ಮ್ತು ದ್ವಿತೀಯ ದರ್ಜೆ ಸಹಾಯಕ ಕೆ. ದೊಡ್ಡಬಸಪ್ಪ ಅವರು 2.80 ಲಕ್ಷ ರೂಪಾಯಿ ಪಾಲಿಕೆಯ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಆರೋಪವನ್ನು ಎದುರಿಸುತ್ತಿದ್ದು, ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿತ ಸಿಬ್ಬಂದಿಗಳನ್ನು ಅಮಾನತು ಮಾಡಿ, ಪುನಃ

ಕೆಲಸಕ್ಕೆ ತೆಗೆದುಕೊಂಡಿರುವುದು ಸರಿಯಲ್ಲ. ಇಂಥಹವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಸಚಿವ ಭೈರತಿ . ಸುರೇಶ್ ಉತ್ತರಿಸುತ್ತ, ನಿವೃತ್ತ ನ್ಯಾಯಾಧೀಶರಾದ ದಾವಣಗೆರೆಯ ಈಶ್ವರ್ ಜಂತ್ಲಿ ಅವರನ್ನು ವಿಚಾರಣಾ ಅಧಿಕಾರಿಗಳನ್ನಾಗಿ, ಹಿಂದಿನ ಸಾಂಖಿಕ ಅಧಿಕಾರಿಗಳಾದ ಸಹಾಯಕ ನಿರ್ದೇಶಕ ರಮೇಶ್ ಅವರನ್ನು ವಿಚಾರಣಾ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಇವರು ಆರು ಸಭೆಗಳನ್ನು ನಡೆಸಿದ್ದು, ಅಂತಿಮ ವಿಚಾರಣಾ ವರದಿ ಇನ್ನೂ ಸ್ವೀಕೃತವಾಗಿಲ್ಲ.

ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವ ಕಾರಣ ಆರೋಪಿತರನ್ನು ನಿಯಮಗಳ ಪ್ರಕಾರವೇ ಬೇರೆ ವೃತ್ತಕ್ಕೆ ವರ್ಗ ಮಾಡಲಾಗಿದೆ ಎಂದರು.

ಆಗ ಸತೀಶ್ ಅವರು, ಭ್ರಷ್ಟಾಚಾರದ ಬಿಸಿ ನನಗೇ ತಾಕಿದೆ. ಕಾರಣ ಭ್ರಷ್ಟಾಚಾರ, ಹಣ ದುರುಪಯೋಗದಂತಹಾ ಪ್ರಕರಣಗಳ

ತ್ವರಿತ ವಿಚಾರಣೆಗಾಗಿ ಫಾಸ್ಟ್ ಟ್ರ್ಯಾಕ್ ಕೋರ್ಟ್ ಮಾದರಿಯಲ್ಲಿ ಪ್ರತ್ಯೇಕ ಕೋಗಳ ಅಗತ್ಯವಿದ್ದು, ಸ್ಥಾಪಿಸಲು ಸರ್ಕಾರ ಮುಂದಾಗಬೇಕು ಎಂದರು.

# ಉಪಚುನಾವಣೆ 2028 ರ ಚುನಾವಣೆಗೆ ದಿಕ್ಸೂಚಿ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ 2028ರ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಬಾಗಲಕೋಟೆ ಉಪಚುನಾವಣಾ ಉಸ್ತುವಾರಿ, ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಹೇಳಿದರು.

ನವನಗರದ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ನಡೆದ ಬಾಗಲಕೋಟೆ ಉಪ ಚುನಾವಣೆಯ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಬಾಗಲಕೋಟೆಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಬಿಜೆಪಿ ಕ್ಷೇತ್ರವನ್ನು ಭದ್ರಕೋಟೆಯಾಗಿಸಿದೆ. ಈಗ ಮತ್ತೆ ಅದನ್ನು ಮರುಸ್ಥಾಪಿಸುವ ಸಂಕಲ್ಪ ನಮ್ಮ ಮುಂದೆ ಇದೆ, ಈ ಉಪ ಚುನಾವಣೆಯಲ್ಲಿನ ಬಿಜೆಪಿ ಗೆಲುವು ನಿಶ್ಚಿತವಾಗಿದ್ದು, 2028ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಇದು ದಿಕ್ಸೂಚಿಯಾಗಲಿದೆ ಎಂದರು.

ಮಾಜಿ ಉಪ ಮುಖ್ಯಮಂತ್ರಿ, ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಮಾತನಾಡಿ, ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದಕ್ಕೆ ಸಾಕಷ್ಟು ಅವಕಾಶಗಳು ಇವೆ, ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ, ಕಾಂಗ್ರೆಸ್ಸ ಸರಕಾರದ ಆಡಳಿತಕ್ಕೆ ಜನ ಬೇಸತ್ತು ಹೋಗಿದ್ದಾರೆ. ಹೀಗಾಗಿ ಬಿಜೆಪಿ ಗೆಲ್ಲುವುದು ನಿಶ್ಚಿತ ಎಂದು ಹೇಳಿದರು.

ಬಿಜೆಪಿಯ ರಾಜ್ಯ ಉಪಾಧ್ಯಕ್ಷ, ಮಾಜಿ ಸಚಿವ ಮುರಗೇಶ ನಿರಾಣಿ ಮಾತನಾಡಿ, ಜಿಲ್ಲೆಯಲ್ಲಿ ಪಕ್ಷದ ಎಲ್ಲ ನಾಯಕರೂ ಒಗ್ಗಟ್ಟಾಗಿದ್ದೇವೆ. ಎಲ್ಲರೂ ಕೂಡಿ ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿ, ಮತ್ತೆ ರಾಜ್ಯದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಶ್ರಮವಹಿಸುತ್ತೇವೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಸಂಸದ ಪಿ.ಸಿ. ಗದ್ದಿಗೌಡರ ಹಾಗೂ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿದರು. ಸಭೆಯಲ್ಲಿ ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ, ಜಮಖಂಡಿ ಶಾಸಕ ಜಗದೀಶ ಗುಡುಗುಂಟಿ, ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ, ಮಾಜಿ ಶಾಸಕರಾದ ದೊಡ್ಡನಗೌಡ ಪಾಟೀಲ, ಜಿ.ಎಸ್.ನ್ಯಾಮಗೌಡ, ರಾಜಶೇಖರ ಶೀಲವಂತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಮಲ್ಲಯ್ಯ ಮೂಗನೂರಮಠ, ಅಶೋಕ ಲಿಂಬಾವಳಿ, ಬಸವರಾಜ ಯಂಕಂಚಿ ಸೇರಿದಂತೆ ಅನೇಕರು ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಸಾಮರಸ್ಯ ಬದುಕು ಸ್ವದೇಶಿಭಾವಕ್ಕೆ ಒತ್ತು ಕೊಡಿ
# ಸ್ವಾರ್ಥ ಬಯಕೆಯಿಲ್ಲದ ಸೇವಾ ಭಾರತಿ: ಶಂಕರ ಗುಮಾಸ್ತೆ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವದ ಸಂದರ್ಭದಲ್ಲಿ ಸಮಾಜ ಸಾಮರಸ್ಯ, ಸ್ವದೇಶಿಭಾವ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ನಾಗರಿಕ ಕರ್ತವ್ಯಗಳನ್ನು ಮೈಗೂಡಿಸಿಕೊಳ್ಳುವತ್ತ ಸಾಗಬೇಕಿದೆ ಎಂದು ಸೇವಾ ಭಾರತಿ ಟ್ರಸ್ಟ್ ಪ್ರಾಂತ ಸಂಘಟನಾ ಕಾರ್ಯದರ್ಶಿ ಶಂಕರ ಗುಮಾಸ್ತೆ ಹೇಳಿದರು.

ನಗರದ ಸಂಘಮಿತ್ರದಲ್ಲಿ ಸೇವಾ ಭಾರತಿ ಟ್ರಸ್ಟ್ ಆಶ್ರಯಧಾಮ ಪ್ರಕಲ್ಪದ್ವ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವದ ಸಂದರ್ಭದಲ್ಲಿ ಜಾತಿ-ಭೇದಗಳಿಂದ ದೂರ ಸರಿದು ಸಮರಸ ಸಮಾಜ ರಚಿಸುವುದು, ಕುಟುಂಬ ಸಂಸ್ಕಾರ ಬಲಪಡಿಸುವುದು, ಪ್ರಕೃತಿ ಮಾತೆಯ ರಕ್ಷಣೆಗೆ ಪಣತೊಡುವುದು, ಸ್ವದೇಶಿ ಉಡುಗೆ, ತೊಡುಗೆ, ಸ್ವಾವಲಂಬಿ ಭಾರತಕ್ಕೆ ಕೊಡುಗೆ ನೀಡಲು ಸ್ವದೇಶಿ ಭಾವ ವೃದ್ಧಿಸಿಕೊಳ್ಳುವುದು, ಸಾರ್ವಜನಿಕ ನಿಯಮ ಪಾಲನೆಯನ್ನು ನಮ್ಮ ಸಹಜ ಸ್ವಭಾವವಾಗಿ ಸ್ವೀಕರಿಸುವ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಹೊಂದಲಾಗಿದೆ ಎಂದರು.

1999ರಲ್ಲಿ ಆರಂಭಗೊಂಡ ಸೇವಾ ಭಾರತಿ ಟ್ರಸ್ಟ್ ರಜತ ಮಹೋತ್ಸವವನ್ನು ಆಚರಿಸಿಕೊಂಡಿದೆ. ಶಿಕ್ಷಣ, ಸ್ವಾವಲಂಬನ, ಸ್ವಾಸ್ಥ್ಯ ಸಾಮಾಜಿಕ ಪರಿಕಲ್ಪನೆಯೊಂದಿಗೆ ಕೆಲಸ ಮಾಡುತ್ತಿದೆ. ಹುಬ್ಬಳ್ಳಿಯಲ್ಲಿ ಕಿಶೋರಿಯರಿಗೆ ಆಶ್ರಯ ಕಲ್ಪಿಸುವ ಕೇಂದ್ರವನ್ನು ನಡೆಸುತ್ತಿದ್ದರೆ, ಗದಗ ಹಾಗೂ ಬಾಗಲಕೋಟೆ ಜಿಲ್ಲೆ ಮುಧೋಳದಲ್ಲಿ ದಿವ್ಯಾಂಗ ಮಕ್ಕಳ ಕೇಂದ್ರಗಳನ್ನು ನಡೆಸಿಕೊಂಡು ಬರುತ್ತಿದೆ. ಬಾಗಲಕೋಟೆಯ ಆಶ್ರಯಧಾಮ ಕಳೆದ 18 ವರ್ಷಗಳಲ್ಲಿ 76 ಮಕ್ಕಳಿಗೆ ಆಶ್ರಯ ನೀಡಿದೆ. ಇಂಥ ಕಾರ್ಯದಲ್ಲಿ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಭಾಗಿಯಾಗಬೇಕೆಂದು ಶಂಕರ ಗುಮಾಸ್ತೆ ಹೇಳಿದರು.

ಸಮಾಜದ ವಿವಿಧ ಸ್ತರಗಳಲ್ಲಿ ಸೇವಾಭಾರತಿ ಯಾವುದೇ ಸ್ವಾರ್ಥ ಬಯಕೆ ಇಲ್ಲದೆ, ಪ್ರಚಾರವೂ ಇಲ್ಲದೆ ಕೆಲಸ ಮಾಡಿಕೊಂಡು ಬರುತ್ತಿದೆ. ಇಂಥ ಕಾರ್ಯಗಳಲ್ಲಿ ಸಮಾಜವೂ ಭಾಗಿಯಾಗಬೇಕೆಂದು ಅವರು ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ಬಿ.ಎಸ್.ಪಾಟೀಲ ಮಾತನಾಡಿ, ಸ್ವಾರ್ಥದ ಕಡೆಗೆ ಸಮಾಜ ಸಾಗುತ್ತಿರುವಾಗ ಅಪರೂಪದ ಕಾರ್ಯಕ್ಕೆ ಸೇವಾಭಾರತಿ ಮುಂದಾಗಿದೆ. ಶಿಕ್ಷಣ, ಸ್ವಾವಲಂಬನೆ, ಸಾಮಾಜಿಕ ಚಿಂತನೆಗಳನ್ನು ಒಳಗೊಂಡು ಬೆರಗಾಗಿಸುವ ರೀತಿಯ ಕಾರ್ಯಗಳನ್ನು ಮಾಡುತ್ತಿದೆ. ಇಂಥ ಕಾರ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನಭಾಗವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಗುಳೇದಗುಡ್ಡ ಶ್ರೀಒಪ್ಪತ್ತೇಶ್ವರ ಸ್ವಾಮೀಜಿ, ಟೀಕಿನಮಠದ ಶ್ರೀ ಮಲ್ಲಿಕಾರ್ಜುನ ದೇವರು, ಬೆಳಗಾವಿ ಕಾರಂಜಿಮಠದ ಕಿರಿಯಶ್ರೀಗಳು ಮಕ್ಕಳಿಗೆ ಸಿಹಿ ಹಂಚಿ ಆಶೀರ್ವದಿಸಿದರು. ಬ ವಿವ ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸಮಾರಂಭದಲ್ಲಿ ಪಾಲ್ಗೊಂಡು ಸೇವಾ ಭಾರತಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಆಶ್ರಯಧಾಮ ಪ್ರಕಲ್ಪದ ಅಧ್ಯಕ್ಷ ಡಾ.ಸುಭಾಸ್ ಪಾಟೀಲ, ಕಾರ್ಯದರ್ಶಿ ಹಣಮಂತಯ್ಯ ರಾಯಚೂರ, ಜಿಲ್ಲಾ ಸಂಘಚಾಲಕ ಚಂದ್ರಶೇಖರ ದೊಡ್ಡಮನಿ ವೇದಿಕೆಯಲ್ಲಿದ್ದರು. ಬಿಟಿಡಿಎ ಮಾಜಿ ಸಭಾಪತಿ ಜಿ.ಎನ್.ಪಾಟೀಲ, ಪ್ರೊ. ಎಚ್.ಡಿ.ಪಾಟೀಲ, ಆಶ್ರಯಧಾಮ ಪ್ರಕಲ್ಪದ ಕೋಶಾಧ್ಯಕ್ಷ ಅರುಣ ದೇಸಾಯಿ, ಸದಸ್ಯರಾದ ಬಸವರಾಜ ಅಥಣಿ, ಸತೀಶ ಬೇತಾಳ ಮತ್ತಿತರರು ಇದ್ದರು.

# ವಿವಿಧ ಕಾಮಗಾರಿಗಳಿಗೆ ಜೆ.ಟಿ.ಪಾಟೀಲ ಭೂಮಿ ಪೂಜೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ 15ನೇ ಹಣಕಾಸು ಯೋಜನೆಯಡಿ 65 ಲಕ್ಷ ರೂ.ಗಳ ಅನುದಾನದಲ್ಲಿ ನಿರ್ಮಿಸಲಾಗುತ್ತಿರು ಆಯುಷ್ಮಾನ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ ಭೂಮಿ ಪೂಜೆ ನೆರವೇರಿಸಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಆಯುಷ್ಮಾನ ಆರೋಗ್ಯ ಮಂದಿರ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸರಕಾರ ಸದಾ ಸಿದ್ಧವಿದ್ದು, ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಭದ್ರಬುನಾದಿಯೊಂದಿಗೆ ಸುಸಜ್ಜಿತ ಕಟ್ಟಡ ನಿರ್ಮಿಸಬೇಕೆಂದು ತಿಳಿಸಿದರು.

ಗ್ರಾಮಸ್ಥರು ತಮ್ಮ ಗ್ರಾಮಗಳಿಗೆ ಮಂಜೂರಾದ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿ, ಇದು ನಮ್ಮ ಕೆಲಸ ನಮ್ಮ ಗ್ರಾಮದ ಕೆಲಸ ಎಂಬ ಅಭಿಮಾನದಿಂದ ಮಂಜೂರಾದ ಕಾರ್ಯಕ್ರಮಗಳನ್ನು ಮಾಡಿಸಿಕೊಳ್ಳಬೇಕು. ಗುತ್ತಿಗೆದಾರರು ತಮಗೆ ನಿಗದಿಪಡಿಸಿದ ಸಮಯದಲ್ಲಿ ಕಾರ್ಯ ಮುಗಿಸಬೇಕು.

ಸಿಮೆಂಟ್ ಕಾರ್ಯವಾಗಿರುವುದರಿಂದ ಕ್ಯೂರಿಂಗ್ ಕಡೆ ಹೆಚ್ಚಿನ ಗಮನಹರಿಸಿ ಕಟ್ಟಡ ಸುಭದ್ರವಾಗುವಂತೆ ನೋಡಿಕೊಳ್ಳಬೇಕು ಎಂದರು.

65 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಆಸ್ಪತ್ರೆಗೆ ತಳಮಹಡಿಯಲ್ಲಿ ಪ್ರಯೋಗಶಾಲೆ ಪರೀಕ್ಷಾ ಕೊಠಡಿ ರೋಗಿಗಳ ವಿಶ್ರಾಂತ ಕೊಟಡಿ ಸೇರಿದಂತೆ ಮೇಲ್ಮಹಡಿಯಲ್ಲಿ ಸುಸಜ್ಜಿತವಾದ ಎರಡು ಬೆಡ್ರೂಮ್ ಹೊಂದಿರುವ ಕಟ್ಟಡಗಳು ಇದರೊಳಗಿದ್ದು, ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಇಲ್ಲಿಯೇ ಇರಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಸೋರಕೊಪ್ಪ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಗ್ರಾಮದ ಜನರಿಗೆ ಈ ಆಸ್ಪತ್ರೆ ಅನುಕೂಲವಾಗಲಿದ್ದು ಇದರಿಂದ ಸಮಯ ಹಾಗೂ ಹಣ ಉಳಿತಾಯದ ಜೊತೆಗೆ ನಮ್ಮೂರ ಆಸ್ಪತ್ರೆ ಎಂಬ ಅಭಿಮಾನ ಮೂಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಮಾಲಾ ನಾಲತ್ವಾಡ ಮಾಜಿ ಅಧ್ಯಕ್ಷ ರುದ್ರಪ್ಪ ಮೆಣಸಗಿ ಹುಚ್ಚಪ್ಪ ನೀಲಣ್ಣವರ, ಸಂಗಣ್ಣ ನಾಲತ್ವಾಡ, ಶಂಕ್ರಪ್ಪ ದಾಳಿ ಹನುಮಂತ ಕೆಂಪಣ್ಣವರ, ವಿಠ್ಠಲ ಪೂಜಾರಿ, ಪರಶುರಾಮ್ ಮಾದರ್, ವೆಂಕಟೇಶ್ ಮಜ್ಜಿಗಿ ಹಾಗೂ ಯಡಹಳ್ಳಿ ಪ್ರೌಢಶಾಲಾ ಮುಖ್ಯ ಗುರುಗಳಾದ ಕೆ.ಎಚ್.ಮುಜಾವರ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸಿದ್ದೇಶ್ವರ ಪತ್ತಿನ ಸಂಘದಲ್ಲಿ ಸಂಭ್ರಮದ ಗಣರಾಜ್ಯೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಬೀಳಗಿ ಪಟ್ಟಣದ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ 77ನೇ ಗಣರಾಜ್ಯೋತ್ಸವವವನ್ನು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.

ಸಂಘದ ಸಂಸ್ಥಾಪಕ ಅಧ್ಯಕ್ಷ ಡಿ.ಎಂ.ಸಾವಕಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಜಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವದಲ್ಲಿ ತನ್ನ ನಿಜ ಅಸ್ತಿತ್ವವನ್ನು ಸ್ಥಾಪಿಸಿದ ದಿನ ಇದಾಗಿದ್ದು, ಗಣರಾಜ್ಯೋತ್ಸವ ಭಾರತೀಯರ ಪಾಲಿಗೆ ಅತ್ಯಂತ ಮಹತ್ವದ ದಿನವಾಗಿದೆ ಎಂದು ಹೇಳಿದರು.

ದೇಶದ ಏಕತೆ, ಸಮಾನತೆ ಮತ್ತು ಭ್ರಾತೃತ್ವವನ್ನು ಉತ್ತೇಜಿಸುತ್ತದೆ. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ನಡೆಯುವ ಆಡಳಿತವನ್ನು ನಡೆಸುವದಕ್ಕಾಗಿ ಪ್ರಜಾರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ ಎಂದರು.

ಸಂಘದ ಉಪಾಧ್ಯಕ್ಷ ಆರ್.ಬಿ.ನಬಿವಾಲೆ, ನಿರ್ದೇಶಕರಾದ ಸಂತೋಷ ಸಜ್ಜನ, ಮಹಾದೇವ ಆಸೋದಿ, ಗಣಪತಿ ಬುಡ್ಡರ, ಪರಶುರಾಮ ಮಧಗುಣಕಿ, ಜಿ. ಜಿ. ಮೇಟಿ, ಸಲಹಾ ಸಮಿತಿ ಸದಸ್ಯರಾದ ಶಿವಾನಂದ ನಾಗೋಡ, ಪ್ರಕಾಶ ಚೂರಿ, ವಿಕ್ರಂಗೌಡ ಪಾಟೀಲ, ಸಿದ್ದು ಅಣ್ಣಿಗೇರಿ, ಎಂ.ಬಿ.ಪೀರಶೆಟ್ಟಿ, ಹನಮಂತ ಪರಸಗೊಂಡ, ಗಿರಿಮಲ್ಲಪ್ಪ ಕೊರ್ತಿ, ಶಿವಲಿಂಗಪ್ಪ ಖ್ಯಾಡದ, ಶ್ರೀಶೈಲ ಸಿಕ್ಕೇರಿ, ಮುಖ್ಯಕಾರ್ಯನಿರ್ವಾಹಕ ಪ್ರವೀಣ ಮುರನಾಳ, ಲೆಕ್ಕಿಗ ಪ್ರಶಾಂತ ಪರಸಗೊಂಡ, ಚಂದ್ರ ಸುನಗದ ಮತ್ತಿತರಿದ್ದರು.

# ಉಚಿತ ಡಯಾಲಿಸಿಸ್ ಕೇಂದ್ರ ಉದ್ಘಾಟನೆ

• **ಮಲ್ಲಮ್ಮ ನುಡಿ ವಾರ್ತೆ ಕುಕನೂರ:**



ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ಅಳವಡಿಸಿದ ಡಯಾಲಿಸಿಸ್ ಕೇಂದ್ರವನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರೆಡ್ಡಿ ಅವರಿಂದ ಉದ್ಘಾಟಿಸಲಾಯಿತು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಸೆಂಟರ್ ಉದ್ಘಾಟಿಸಿದನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಬಸವರಾಜ ರಾಯರೆಡ್ಡಿ ವರದಿಗಾರರನ್ನು ಉದ್ದೇಶಿಸಿ ಮಾತನಾಡುತ್ತ ಕ್ಷೇತ್ರದ ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವ ಜನತೆಗೆ ಡಯಾಲಿಸಿಸ್‌ಗಾಗಿ ಬೇರೆ ಕಡೆಗಳಲ್ಲಿ ಹೋಗುವ ಅನಿವಾರ್ಯತೆ ಎದುರಾಗಿದ್ದು ಇದೀಗ ರಾಜ್ಯ ಸರ್ಕಾರ ಹಾಗೂ ಖಾಸಗಿಯವರ ಸಹಭಾಗಿತ್ವದಲ್ಲಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸುಮಾರು 42 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎರಡು ಡಯಾಲಿಸಿಸ್ ಮಷಿನ್ ಪ್ರಾರಂಭಗೊಂಡಿದ್ದು ಮೂತ್ರಪಿಂಡ ರೋಗಿಗಳು ಬೇರೆ ಕಡೆ ಹೋಗುವ ಅನಿವಾರ್ಯತೆ ತಪ್ಪಿದಂತಾಗಿದೆ. ಇದರ ಸದುಪಯೋಗವನ್ನು ಅವಶ್ಯಕತೆ ಇದ್ದವರು ಮಾಡಿಕೊಳ್ಳಬೇಕೆಂದು ತಿಳಿಸಿದರು.

ಸರಕಾರಿ ಆಸ್ಪತ್ರೆಗಳಲ್ಲಿ ಸಮಸ್ಯೆಗಳು ಸಾಮಾನ್ಯವಾಗಿದ್ದು ವೈದ್ಯಾಧಿಕಾರಿಗಳು ಸೇವಾ ಮನೋಭಾವನೆ ಹೊಂದಿದಾಗ ಮಾತ್ರ ಸರ್ಕಾರದ ಆರೋಗ್ಯ ಇಲಾಖೆಯ ಯೋಜನೆಗಳು ಸಾಕಾರಗೊಳ್ಳುತ್ತವೆ ಆದರೆ ವೈದ್ಯರಾಗಿ ಪ್ರಮಾಣ ಪತ್ರ ಸ್ವೀಕರಿಸುವವರು ಗ್ರಾಮೀಣ ಪ್ರದೇಶದ ಜನತೆಯ ಸೇವೆಗೆ ಹಿಂದಿಟು ಹಾಕುತ್ತಿರುವುದು ವಿಪರ್ಯಾಸವಾಗಿದ್ದು ಅವರು ಗ್ರಾಮೀಣ ಜನತೆಯ ಸೇವೆಗೆ ಮಾತ್ರ ಸರ್ಕಾರದ ಯೋಜನೆಗಳು ಜನರಿಗೆ ಸಂಪೂರ್ಣವಾಗಿ ತಲುಪಿ ಸಾಕಾರಗೊಳ್ಳುತ್ತವೆ ಎಂದರು.

ಪಟ್ಟಣಕ್ಕೆ ನೂರು ಹಾಸಿಗೆಯ ಸಾರ್ವಜನಿಕ ಆಸ್ಪತ್ರೆ, ಮಂಜೂರಾಗಿದ್ದು ಅದಕ್ಕಾಗಿ 42 ಕೋಟಿ ರೂಪಾಯಿಗಳ ಬಿಡುಗಡೆ ಸಹ ಮಾಡಲಾಗಿದೆ ಸದ್ಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಅದಕ್ಕೆ ಸಂಬಂಧಪಟ್ಟ ಕಮಿಟಿಯವರು ಶಿಫಾರಸ್ಸು ಮಾಡುವ ಜಮೀನಿನಲ್ಲಿ ಸ್ಥಳ ಗುರುತಿಸಿ ಏಪ್ರಿಲ್ ತಿಂಗಳಲ್ಲಿ ಭೂಮಿ ಪೂಜೆ ಮಾಡಿ ಸುಸಜ್ಜಿತ ಕಟ್ಟಡದೊಂದಿಗೆ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಸಲಕರಣೆ ಹಾಗೂ ನುರಿತ ಸಿಬ್ಬಂದಿಯೊಂದಿಗೆ ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆ ಜನಸೇವೆಗೆ ದೊರೆಯಲಿದೆ ಎಂದು ಹೇಳಿದರು. ಕುಕನೂರು ಭಾಗದಲ್ಲಿ ತಾಲೂಕ ಆಡಳಿತ ಸೌದದ ಅವಶ್ಯಕತೆ ಇದ್ದು ಇದಕ್ಕೆ ಅಡ್ಡಿಯಾಗಿದ್ದ ಕಾನೂನು ತೊಡಕು ನಿವಾರಣೆಯಾಗುವ ಎಲ್ಲಾ ಮುನ್ಸೂಚನೆಗಳು ಮೂರು ತಿಂಗಳಲ್ಲಿ ಎಲ್ಲಾ ಸಮಸ್ಯೆ ನಿವಾರಣೆಯಾಗಿ ಆಡಳಿತ ಸೌದೊಂದಿಗೆ ತಾಲೂಕ ಕ್ರೀಡಾಂಗಣದ ಕಟ್ಟಡ ಕಾಮಗಾರಿ ಪ್ರಾರಂಭಗೊಳ್ಳಲಿದೆ ಎಂದು ಹೇಳಿದರು.

# ಜ.27 ರಿಂದ ಮೋಟಗಿ ಬಸವೇಶ್ವರ ಜಾತ್ರಾ ಮಹೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಮೋಟಗಿ ಬಸವೇಶ್ವರ ಜಾತ್ರಾ ಮಹೋತ್ಸವವು ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ವಿಜೃಂಭನೆಯಿಂದ ಜರುಗಲಿದೆ.

**ಫೆ,1 ರಂದು ಮಹಾ ರಥೋತ್ಸವ**

ಜ. 27 ಮಂಗಳವಾರದಿಂದ ಸಣ್ಣ ರಥೋತ್ಸವ ಪ್ರಾರಂಭವಾಗಿ ಸತತ 5 ದಿನಗಳವರೆಗೆ ಜರುಗಲಿದೆ. ಪೆಬ್ರುವರಿ 1 ರಂದು ರವಿವಾರ ಬೆಳಿಗ್ಗೆ ಮೋಟಗಿ ಬಸವೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಮಹಾಮಂಗಳಾರುತಿ, ಪುಷ್ಪಾಲಂಕಾರ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯಲಿದ್ದು ಅಂದು ಸಾಯಂಕಾಲ 5ಗಂಟೆಗೆ ಮಹಾರಥೋತ್ಸವ ಜರುಗಲಿದೆ.

ಬಾಗಲಕೋಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತಾಧಿಗಳು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವಂತೆ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಪತ್ರಿಕಾಗೋಷ್ಠಿಯಲ್ಲಿ ಕೋರಿದರು. ಸಂಘದ ಗೌರವ ಕಾರ್ಯಧರ್ಶಿ ಮಹೇಶ ಅಥಣಿ, ಮಲ್ಲಿಕಾರ್ಜುನ ಸಾಸನೂರ, ಜಾತ್ರಾ ಕಮಿಟಿ ಅಧ್ಯಕ್ಷ ಸದಾನಂದ ನಾರಾ, ತಮ್ಮಣ್ಣ ಯಳ್ಳಿಗುತ್ತಿ, ಪರಶುರಾಮ ಡಾವನಗೇರಿ, ಶಿವಾನಂದ ಟವಳಿ, ಮುರಗೇಶ ಶಿವನಗುತ್ತಿ, ಬೆಣ್ಣೂರಮಠ, ಕಲ್ಯಾಣಿ, ಸಂತೋಷ ಜಕಾತಿ ಸೇರಿದಂತೆ ಅನೇಕರು ಇದ್ದರು.

# ವೃತ್ತಿ ಬಗ್ಗೆ ಗೌರವ ಬೆಳಸಿಕೊಂಡಲ್ಲಿ ಯಾವ ಕಸಬು ಕೀಳಲ್ಲ: ಅಮರೇಶ್ ಜಿ ಕೆ




• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:**

ಕೊಟ್ಟೂರು ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಇಂದು "ಸವಿತ ಮಹರ್ಷಿಗಳ ಜಯಂತಿ" ಕಾರ್ಯಕ್ರಮವನ್ನು ಆಚರಿಸಲಾಗಿದ್ದು, ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ಇಂದು ಯಾವುದೇ ಕಾಯಕ ಕೀಳಲ್ಲ. ಬಸವಣ್ಣನವರು ತಿಳಿಸಿದಂತೆ ಕಾಯಕವೇ ಕೈಲಾಸ. ಪ್ರತಿಯೊಬ್ಬರು ಅವರ ವೃತ್ತಿಯ ಬಗ್ಗೆ ಗೌರವ ಬೆಳಸಿಕೊಂಡಲ್ಲಿ ಯಾವುದೂ ಕೀಳಲ್ಲ. ಇಂದು ಬೆಳಗಾದರೆ ಮನುಷ್ಯರ ಮುಖ, ತಲೆಯನ್ನು ಸುಂದರಗೊಳಿಸುವ ಸವಿತ ಸಮಾಜದ ಕಾಯಕ ಶ್ರೇಷ್ಠವಾದದ್ದು. ಅಲ್ಲದೇ ಮದುವೆ ಮುಂತಾದ ಮಂಗಳಕರ ಕಾಯಕದಲ್ಲಿ ಎಲ್ಲರಿಗಿಂತ ಮುಂದೆ ನಿಮ್ಮ ಮಂಗಳಕರ ವಾದ್ಯ ಇರುವುದರಿಂದ ನಿಮ್ಮ ವೃತ್ತಿಯ ಶ್ರೇಷ್ಠತೆ ಕಾಣಬಹುದು. ನಿಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಿದರೆ ಅವರು ಉನ್ನತ ಹುದ್ದೆಯನ್ನು ಅಲಂಕರಿಸುವಂತೆ ಮಾಡಿ ಸಮಾಜ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗುತ್ತದೆ. ನೀವೆಲ್ಲರೂ ಸಂಘಟಿತರಾದಲ್ಲಿ ವಿವಿಧ ಸೌಲಭ್ಯವನ್ನು ಪಡೆಯಬಹುದು ಎಂದರು.

ಸವಿತ ಸಮಾಜದ ಮುಖಂಡರಾದ ಎಂ ಸತೀಶ್ ಇವರು ಸವಿತ ಮಹರ್ಷಿಗಳು ಶಿವನ ಕಣ್ಣಿನಿಂದ ಜನಿಸಿದ್ದರಿಂದ ನಮ್ಮ ಸಮಾಜವನ್ನು ನಾಯಿಂದ ಹೆಸರಿನಿಂದ ಕರೆಯುತ್ತಾರೆ. ಮಹರ್ಷಿಯ ಸೇವೆಯಿಂದ ತೃಪ್ತನಾದ ಶಿವನು ಸಂಗೀತ ಸಾಧನಗಳನ್ನು ನೀಡಿದ್ದಾನೆ. ಹಾಗಾಗಿ ನಮ್ಮ ಸಮುದಾಯಕ್ಕೆ ಸಂಗೀತ ಮತ್ತು ವಾದ್ಯಗಳು ಬಂದಿವೆ. ಅಲ್ಲದೇ ಆಯುರ್ವೇದದಲ್ಲಿ ಅಪಾರ ಜ್ಞಾನವನ್ನು ಹೊಂದಿದ್ದರಿಂದ ಉಪಕಸುಬಾಗಿ ಸಹಾ ಈ ಜನಾಂಗವು ನಡೆದುಕೊಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಕಡೆಯಿಂದ ಬೇರೆ ಸಮುದಾಯದವರು ಸಹಾ ನಮ್ಮ ಕಸುಬನ್ನು ಮಾಡುತ್ತಿದ್ದು,

ವೃತ್ತಿಯಲ್ಲಿ ನಮಗೆ ಹಿನ್ನಡೆಯಾಗುತ್ತಿದೆ. ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತರಾದ ನಮ್ಮ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ನಮ್ಮ ಸಮಾಜವನ್ನು ಪ.ಜಾ ಅಥವಾ ಪ.ಪಂ ಜಾತಿಗೆ ಸೇರಿಸಬೇಕೆಂದು ವಿನಂತಿಸಿಕೊಂಡರು.

ಕಾರ್ಯಕ್ರಮದಲ್ಲಿ ಸವಿತ ಸಮಾಜದ ತಾಲೂಕು ಅಧ್ಯಕ್ಷರಾದ ಎಂ ಬಾಲರಾಜ, ಸುಧೀರ್ ವೆಂಕಟೇಶಪ್ಪ, ಶ್ರೀನಿವಾಸ, ಯಲ್ಲಪ್ಪ, ಹರ್ಷವರ್ಧನ, ಶಿರಸ್ತೇದಾರ್ ಚಂದ್ರನಾಯ, ಉಪತಹಶೀಲ್ದಾರ್, ಅನ್ನದಾನೇಶ್, ಆಹಾರ ನಿರೀಕ್ಷಕರ ಮಂಜುನಾಥ, ಸಿಬ್ಬಂದಿ ದೇವರಾಜ, ಮಂಜುನಾಥ, ಕಂದಾಯ ನಿರೀಕ್ಷಕರ ಹರೀಶ್ ಮುಂತಾದವರಿದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು.

# 77ನೇ ಗಣರಾಜ್ಯೋತ್ಸವ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:**



ತಾಲೂಕು ಕ್ರೀಡಾಂಗಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು. ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ನೇಮಿರಾಜ ನಾಯ್ಕ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಧ್ವಜಾರೋಹಣದ ನಂತರ ತುಕಡಿ ವೀಕ್ಷಣೆ ಮಾಡಿದರು. ಪೊಲೀಸ್ ಹಾಗೂ ವಿವಿಧ ತಂಡಗಳು ಮತ್ತು ವಿವಿಧ ಶಾಲಾ ಮಕ್ಕಳ ತಂಡದಿಂದ ಧ್ವಜವಂದನೆಯನ್ನು ಸ್ವೀಕರಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಬಿ ನೀಲಪ್ಪ, ಜಂಬೂರ ಕುಮಾರಸ್ವಾಮಿ, ಆದಿ ಬಸಪ್ಪ ಗೆದ್ದಲಕಟ್ಟಿ, ಅಂಚೆ ಕೊಟ್ರೇಶ್, ಕೆ ಕೊಟ್ರೇಶ್, ಗುರುಪ್ರಸಾಧ್ ಎಸ್ ಎಂ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿ ಕಾರ್ಯಕ್ರಮವನ್ನು ನಡೆಯಿತು. ಇದರಲ್ಲಿ ಗುರುದೇವ ಆಂಗ್ಲ ಮಾಧ್ಯಮ ಶಾಲೆಯ 150 ಮಕ್ಕಳ ತಂಡದಿಂದ ವಂದೇಮಾತರಂ ಗೀತೆ ಆಕರ್ಷನೀಯವಾಗಿದ್ದು ನೋಡುಗರ ಮನಸ್ಸನ್ನು ಸೆಳೆಯಿತು.

ಕಾರ್ಯಕ್ರಮದ ವೇದಿಕೆಯಲ್ಲಿ ಕಾರ್ಯನಿರ್ವಾಹಕ ಡಾ. ಬಿ ಆನಂದ ಕುಮಾರ್ ಸಿಪಿಐ ಡಿ ದುರುಗಪ್ಪ, ಮುಖ್ಯಾಧಿಕಾರಿ ನಸರುಲ್ಲಾ, ಎಡಿ ನರೇಗಾ ವಿಜಯ ಕುಮಾರ್, ಪಿಎ ಗೀತಾಂಜಲಿ ಸಿಂಧೆ, ಉಪನ್ಯಾಸಕ ಡಾ.ಜಗದೀಶ ಚಂದ್ರಭೋಷ್ , ಶಿಕ್ಷಣ ಇಲಾಖೆಯ ಇಸಿಒ ನಿಂಗಪ್ಪ ಹಾಗೂ ಇತರರು ಇದ್ದರು.

# ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿಗೆ ಸಾವಕಾರ ಆಯ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ, ಪತ್ರಕರ್ತ ಬೀಳಗಿಯ ಡಿ.ಎಂ.ಸಾವಕಾರ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ನೀಡುವ ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಜಾನಪದ ಕಲೆಗಳ ಉಳಿವು, ಕಲಾವಿದರಿಗೆ ವೇದಿಕೆ ಕಲ್ಪಿಸುವುದು, ಸಂಘಟನಾ ಚಾತುರ್ಯತೆ, ಸಾಹಿತ್ಯ ಮತ್ತು ಮಾಧ್ಯಮ ಕ್ಷೇತ್ರದ ಸೇವೆಯನ್ನು ಗುರುತಿಸಿ ಸಾವಕಾರ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಜನೇವರಿ 31 ರಂದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದಲ್ಲಿ ಜರುಗುವ ರಾಷ್ಟ್ರೀಯ ಯುವ ವೈಭವ-2026 ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಪ್ರಕಟಣೆ ತಿಳಿಸಿದೆ.

# ಹಾಲು ಉತ್ಪಾದಕರ ಸಹಕಾರಿ ಸಂಘದ ಪಧಾದಿಕಾರಿಗಳ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:**

ತಾಲೂಕಿನ ಬೆಲವಂತರ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘದ ಪದಾದಿಕಾರಿಗಳನ್ನು ಸರ್ವಾನುಮತದಿಂದ ಅವಿರೋದವಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ವಿರುಪಾಕ್ಷಪ್ಪ ದೇವರಹೇಳು, ಉಪಾಧ್ಯಕ್ಷರಾಗಿ ಚನ್ನಪ್ಪ ಭರಮಪ್ಪನವರ,.ಸದಸ್ಯರಾಗಿ, ಈಶ್ವರಪ್ಪ ಬಸನಕೊಪ್ಪ, ಶೇಖಪ್ಪ ತಳವಾರ, ಬಸವ್ವ ಕರಿಕಟ್ಟಿ, ಲಲಿತಾ ಹೀರೆಮಠ, ಸಾವಿತ್ರಿ ಮೇತ್ರಿ, ಆಯ್ಕೆಯಾಗಿದ್ದಾರೆ.

ಇ ಸಂಧರ್ಬದಲ್ಲಿ ಮಹದೇವಪ್ಪ ಬಸನಕೊಪ್ಪ, ದೊಡ್ಡೆಶಬೇಗೂರ, ಚನ್ನಪ್ಪ ಬೆಳಗಲಿ, ಮಲ್ಲಯ್ಯ ಪೂಜಾರ, ಸಾತಪ್ಪ ಮೇತ್ರಿ, ರವಿ ಕೌಲಗೇರಿ, ಮಹಾಂತೇಶ ಹಿರೇಮಠ, ರಾಮಣ್ಣ ಕೌಲಗೇರಿ, ಇದ್ದರು.

# ಕುಡಿದ ಮತ್ತಿನಲ್ಲಿ ಹೆತ್ತಮ್ಮಳನ್ನೆ ಕೊಂದ ಮಗ

• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**



ಸಮೀಪದ ಜಕ್ಕೇರಮಡು ತಾಂಡಾದಲ್ಲಿ ತಾಯಿ ಮಕ್ಕಳಿಬ್ಬರು ಜಗಳವಾಡಿ ಕೊನೆಗೆ ತಾಯಿ ದಾರುಣವಾಗಿ ಹತ್ಯೆಯಾಗಿಡಾದ ಘಟನೆ ಜರುಗಿದೆ.

ಮೃತಮಹಿಳೆ ಚಂದವ್ವಗಂ.ಬೂದೆಪ್ಪ (45) ಎಂದು ಗುರುತಿಸಲಾಗಿದ್ದು, ಕೊಲೆಗೈದ ಮಗನನ್ನು ಮುದಗಲ್ ಪೊಲೀಸರು ವಶಕ್ಕೆ ಪಡೆದು-ಕೊಂಡಿದ್ದಾರೆ. ಬಂಧಿತನನ್ನು ಕುಮಾರ ತಂ. ಬೂದೆಪ್ಪ ಎಂದು ಗುರುತಿಸಲಾಗಿದೆ. ತಮ್ಮ ಸಂತೋಷ ಹಾಗೂ ಮೃತ ಮಹಿಳೆ ಚಂದವ್ವನೊಂದಿಗೆ ಕ್ಷುಲಕ ಕಾರಣಕ್ಕೆ ಜಗಳವಾಡಿದ್ದು, ಪರಸ್ಥಿತಿ ವಿಕೋಪಕ್ಕೆ ತಿರುಗಿ ತಾಯಿಯನ್ನು ಕೊಲೆಗೈಯಲಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಕೊಲೆಗೈದ ಮಗ ಪಾನಮತ್ತನಾಗಿರುವದು ಮೇಲ್ನೋಟಕ್ಕೆ ಕಂಡು ಬಂದಿದೆ. ಆದ-ರೆ ಪೊಲೀಸರ ವಿಚಾರಣೆಯಲ್ಲಿ ಮಾತ್ರ ಪಾನಮತ್ತನಾಗಿ ನನ್ನ ತಾಯಿಯನ್ನು ನೋಡಬೇಕು ಎನ್ನುವ ನಿಶೆಯ ಭ್ರಮೆಯಲ್ಲಿ ಪೊಲೀಸರಲ್ಲಿ ಬೇಡಿಕೊಳ್ಳುತ್ತಿರುವದು ಕಂಡುಬಂದಿತು.



ಗುರುಮಠಕಲ್ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಮಲ್ಲಮ್ಮ ನುಡಿ ಪತ್ರಿಕೆಯೊಂದಿಗೆ.

## ಮಾಜಿ ಶಾಸಕರಾದ ಎಚ್.ಪಿ. ಮಂಜುನಾಥ್ ಆಟೋ ನಿಲ್ದಾಣ ಚಾಲನೆ



**ಹುಣಸೂರು:** ತಾಲೂಕಿನ ಹನಗೋಡು ಪಟ್ಟಣದ ಪ್ರಮುಖ ಕೇಂದ್ರವಾಗಿರುವ ಬಸ್ ನಿಲ್ದಾಣದ ಎದುರು ಸಾರ್ವಜನಿಕರ ಅನುಕೂಲಕ್ಕಾಗಿ ನೂತನವಾಗಿ ನಿರ್ಮಿಸಲಾದ ಲಕ್ಷ್ಮಣ ತೀರ್ಥ ಆಟೋ ನಿಲ್ದಾಣವನ್ನು ಮಾಜಿ ಶಾಸಕರಾದ ಎಚ್.ಪಿ. ಮಂಜುನಾಥ್ ಅ ಉದ್ಘಾಟಿಸಿದರು. ನಂತರ ಸಮಾರಂಭದಲ್ಲಿ ಮಾತನಾಡಿದ ಅವರು, ಪಟ್ಟಣದ ಬೆಳವಣಿಗೆಗೆ ಅನುಗುಣವಾಗಿ ಸಂಚಾರ ವ್ಯವಸ್ಥೆಯಲ್ಲಿಯೂ ಅಗತ್ಯ ಬದಲಾವಣೆಗಳು ಅವಶ್ಯಕವಾಗಿವೆ. ಆಟೋ ಚಾಲಕರು ದಿನನಿತ್ಯ ಪ್ರಯಾಣಿಕರನ್ನು ಸುರಕ್ಷಿತವಾಗಿ ಅವರ ಸ್ಥಳಕ್ಕೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತಿದ್ದು, ಸಾರ್ವಜನಿಕ ಸೇವೆಯೇ ಅವರ ಕೆಲಸವಾಗಿದೆ ಎಂದು ಹೇಳಿದರು.

ನೂತನ ಆಟೋ ನಿಲ್ದಾಣ ಆರಂಭದಿಂದಾಗಿ ಆಟೋ ಚಾಲಕರಿಗೆ ಸುಸಜ್ಜಿತ ಸ್ಥಳ ದೊರೆಯುವ ಜೊತೆಗೆ ಪ್ರಯಾಣಿಕರು ಸುಲಭವಾಗಿ ಆಟೋ ಸೇವೆ ಪಡೆದುಕೊಳ್ಳಲು ಅನುಕೂಲವಾಗಲಿದೆ.

ಮುಂದಿನ ದಿನಗಳಲ್ಲಿ ಸಾರ್ವಜನಿಕ ಉಪಯೋಗಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ, ಪಟ್ಟಣದ ಮುಖ್ಯದ್ವಾರದಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀ ವೀರಾಂಜನೇಯ ದೇವಾಲಯ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ಭವನದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದ್ದು ಶೀಘ್ರದಲ್ಲೇ ಪೂರ್ಣಗೊಳಿಸಲು ಸಹಕರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಉದ್ಯಮಿ ಡಾ. ಎಚ್ ವಿ ಕಾರ್ತಿಕ್ ಹನಗೋಡು ಗ್ರಾ.ಪಂ.ಅಧ್ಯಕ್ಷೆ ಸಂಗೀತಾಸುರೇಶ್, ತಾ. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಲ್ಕುಣಿಕೆ ರಾಘು, ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಸುಂದರ್, ಮಾಜಿ ಅಧ್ಯಕ್ಷ ವಕೀಲಪುಟ್ಟರಾಜ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಎಚ್ ಎಸ್ ಕುಮಾರ್, ಮಾಜಿ ಸದಸ್ಯ ಚಿಕ್ಕಸ್ವಾಮಿ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ನೇರಳಕುಪ್ಪೆ ಮಹದೇವ್, ಮುಖಂಡರಾದ ಆಶಂ ಪಾಷಾ ನಂಜುಂಡ ಕಿರಂಗೂರ ಸ್ವಾಮಿ ಹಾಗೂ ಇಂತಿಯಾಜ್ ಪಾಷಾ ಹಾಜರಿದ್ದರು.

## ನೂತನ ಗ್ರಾಪಂ ಕಟ್ಟಡ ಲೋಕಾರ್ಪಣೆ



**ಕಮಲನಗರ:** ತಾಲೂಕಿನ ಮುಧೋಳ(ಬಿ) ಗ್ರಾಮದಲ್ಲಿ ನಿರ್ಮಾಣಗೊಂಡಿರುವ ನೂತನ ಗ್ರಾಮ ಪಂಚಾಯತ್ ಕಟ್ಟಡವನ್ನು ಶಾಸಕರಾದ ಶ್ರೀ ಪ್ರಭು ಬಿ. ಚವ್ಹಾಣ ಅವರು ಸೋಮವಾರ ರಂದು ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿ, ಗ್ರಾಮ ಪಂಚಾಯತ್‌ಗಳು ಗ್ರಾಮೀಣ ಆಡಳಿತದ ಮೂಲಸ್ತಂಭಗಳಾಗಿದ್ದು, ಜನಸಾಮಾನ್ಯರಿಗೆ ಸರ್ಕಾರದ ಯೋಜನೆಗಳು ಮತ್ತು ಸೇವೆಗಳು ನೇರವಾಗಿ ತಲುಪುವ ಪ್ರಮುಖ ಕೇಂದ್ರಗಳಾಗಿರುತ್ತವೆ. ಆಡಳಿತ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸೂಕ್ತ ಮೂಲಸೌಕರ್ಯ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ನಾನು ಗ್ರಾಮ ಪಂಚಾಯತ್ ಕಟ್ಟಡಗಳ ನಿರ್ಮಾಣಕ್ಕೆ ಆದ್ಯತೆ ನೀಡುತ್ತಿದ್ದೇನೆ ಎಂದರು.

ಮುಧೋಳ(ಬಿ) ಗ್ರಾಮದಲ್ಲಿ ನಿರ್ಮಾಣಗೊಂಡಿರುವ ನೂತನ ಗ್ರಾಮ ಪಂಚಾಯತ್ ಕಟ್ಟಡವು ಆಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ. ಈಗಾಗಲೇ ಗುಡಪಳ್ಳಿ, ಸಂತಪೂರನಲ್ಲಿ ಸುಂದರ ಗ್ರಾಮ ಪಂಚಾಯತಿ ಕಟ್ಟಡ ನಿರ್ಮಿಸಲಾಗಿದೆ. ಉಳಿದೆಲ್ಲ ಕಡೆಯೂ ಇದೇ ಮಾದರಿಯಲ್ಲಿ ಕಟ್ಟಡಗಳಾಗಬೇಕು ಎಂಬ ಉದ್ದೇಶ ಹೊಂದಿದ್ದೇನೆ ಎಂದರು.

ಮುಧೋಳ(ಬಿ) ನನ್ನ ಪ್ರೀತಿಯ ಗ್ರಾಮವಾಗಿದೆ. ಇಲ್ಲಿನ ಜನತೆ ಸಲ್ಲಿಸಿದ್ದ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದೇನೆ. ಶಾಲಾ ಕಟ್ಟಡ, ವಿದ್ಯುತ್ ಉಪ ಕೇಂದ್ರ ಹಾಗೂ ಮತ್ತಿತರೆ ಕೆಲಸಗಳನ್ನು ಮಾಡಲಾಗಿದೆ. ಪೊಲೀಸ್ ಠಾಣೆ ಮತ್ತು ಸಾಂಸ್ಕೃತಿಕ ಭವನ ನಿರ್ಮಿಸಿಕೊಡಬೇಕು ಎಂಬ ಬೇಡಿಕೆಗೂ ಆದ್ಯತೆಯ ಮೇರೆಗೆ ಮಾಡಿಕೊಡಲಾಗುವುದು. ಹಾಗೆಯೆ ಪಂಚಾಯತ ಆವರಣದಲ್ಲಿ ಉದ್ಯಾನವನ ಸೇರಿದಂತೆ ಮತ್ತಿತರೆ ಕೆಲಸಗಳಿಗೆ ಅನುದಾನ ಒದಗಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಗ್ರಾಮದಲ್ಲಿ ಸುಂದರ ಪಂಚಾಯತ ಕಟ್ಟಡ ತಲೆಯೆತ್ತಿ ನಿಂತಿದೆ. ಪಂಚಾಯತ ವ್ಯಾಪ್ತಿಯಲ್ಲಿನ ಎಲ್ಲ ಗ್ರಾಮಗಳನ್ನು ಸ್ವಚ್ಛವಾಗಿಡಬೇಕು. ಕುಡಿಯುವ ನೀರು, ಚರಂಡಿ, ಬೀದಿ ದೀಪಗಳು, ಶೌಚಾಲಯ ಸೇರಿದಂತೆ ಎಲ್ಲ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಪಂಚಾಯತ ಅಭಿವೃದ್ಧಿ ಅಧಿಕಾರಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಮುಧೋಳ(ಬಿ) ಚರಮೂರ್ತಿ ಮಠದ ಪೂಜ್ಯ ಡಾ.ವೈಜಿನಾಥ ಶಿವಲಿಂಗ ಶಿವಾಚಾರ್ಯರು, ಹೆಡಗಾಪೂರ ಶಿವಲಿಂಗೇಶ್ವರ ಮಠದ ಪೂಜ್ಯ ಶಿವಲಿಂಗ ಶಿವಾಚಾರ್ಯರು, ಸಿಂದಗಿಯ ಪೂಜ್ಯ ಅಭಿನವ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾಯ ಕೌಟಗೆ, ಗ್ರಾಮ ಪಂಚಾಯತ ಅಧ್ಯಕ್ಷರಾದ ಧನರಾಜ ವಡೆಯರ್, ಉಪಾಧ್ಯಕ್ಷೆ ನಿಕಿತಾ ಉದಯಕುಮಾರ, ಪಿಡಿಓ ದತ್ತಾತ್ರಿ ಪೂಜಾರಿ, ಮುಖಂಡರಾದ ಅಮೃತರಾವ ವಟಗೆ, ಮೀನಾಕ್ಷಿ ಸಂಗ್ರಾಮ್, ರಾಮಶೆಟ್ಟಿ ಪನ್ನಾಳೆ, ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ಖಂಡೋಬಾ ಕಂಗಟೆ, ಸಂಗ್ರಾಮ ಹಲಬರ್ಗೆ, ಸೇರಿದಂತೆ ಗ್ರಾಮ ಪಂಚಾಯತ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ರಾಜ್ಯಮಟ್ಟದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಡೈಮಂಡ್ ಪ್ರೌಢಶಾಲೆಯ ವಿದ್ಯಾರ್ಥಿ



ಮಾನವನ ಸರ್ವಾಂಗೀಣ ವಿಕಾಸಕ್ಕೆ ಕ್ರೀಡೆಯು ಅವಶ್ಯಕ ಹಾಗೂ ಸಹಕಾರಿಯಾಗಿದೆ. ನಮ್ಮ ಶಿಕ್ಷಣ ಸಂಸ್ಥೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗೂ ಮಹತ್ವವನ್ನು ನೀಡಲಾಗುತ್ತಿದೆ.
–ಶೇಕ್ ಮಸ್ತಾನ್ ವಲಿ
ಅಧ್ಯಕ್ಷರು ಎಸ್ ಎಸ್ ಶಿಕ್ಷಣ ಸಂಸ್ಥೆ ಭಾಲ್ಕಿ

ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗವಹಿಸಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.
–ವೈ . ಮಾಧವರಾವ್, ಕಾರ್ಯದರ್ಶಿಗಳು
ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆಗಳು

• ಪರಶುರಾಮ ಕರಣಂ, ಭಾಲ್ಕಿ

ತಾಲೂಕಿನ ಡೈಮಂಡ ಪ್ರೌಢ ಶಾಲೆಯ 2025–26ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿ ಗಣೇಶ ತಂದೆ ಶಶಿಕಾಂತ ಸಿರ್ಸೆ. ಈತನು ರಾಷ್ಟ್ರೀಯ ಕ್ರಿಕೆಟ್ ಲೀಗ್ ನಲ್ಲಿ ಭಾಗವಹಿಸಿ ರಾಜ್ಯ ಮಟ್ಟದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿ ಶಾಲೆಯ ಕೀರ್ತಿ ಹೆಚ್ಚಿಸಿದ್ದಾನೆ.

ಈ ವಿದ್ಯಾರ್ಥಿಯು ಹಲವಾರು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಶಸ್ತಿ, ಟ್ರೋಫಿಗಳು ಪಡೆದ ವಿವರ ಕೆಳಗಿನಂತಿದೆ:–

ಬೆಂಗಳೂರು ಇಂಡೋರ್ ಕ್ರಿಕೆಟ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಕ್ರಿಕೆಟ್‌ನಲ್ಲಿ ಭಾಗವಹಿಸಿ ಮೆಡಲ್‌ನ್ನು ಪಡೆದಿದ್ದಾನೆ.

ಕೋಲಾರ ಕ್ರಿಕೆಟ್ ಟೂರ್ ಕಲಬುರಗಿಯ ಕ್ರಿಕೆಟ್‌ನಲ್ಲಿ ಭಾಗವಹಿಸಿ ಪ್ಲೇಯರ್ ಆಫ್ ಮ್ಯಾಚ್ ಮುಗಿತಾ ಪ್ರಶಸ್ತಿ ಪಡೆದಿದ್ದಾನೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ರಾಯಚೂರು ಜೋನ್ ಮೂರನೇ ಡಿವಿಷನ್ ಲೀಗ್‌ನ "ಕಾಸ್ಮಸ್ ಕ್ರಿಕೆಟ್ ಕ್ಲಬ್ ಕಲಬುರಗಿ" ಪರ 56 ರನ್‌ಗಳಿಗೆ 5 ವಿಕೆಟ್ ಕಬಳಿಸಿ ಮಾರಕ ಬೌಲಿಂಗ್ ಪ್ರದರ್ಶಿಸಿದ್ದಾನೆ.

ಕಲಬುರಗಿಯಲ್ಲಿ ಅಂತರ್ ಶಾಲಾ ಟಿ–20 ಕ್ರಿಕೆಟ್ ಟೂರ್ನಿ ಸೆಮಿಫೈನಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಪಂದ್ಯ ಶ್ರೇಷ್ಠ ಪ್ರಶಸ್ತಿ ಮ್ಯಾನ್ ಆಫ್ ದಿ ಮ್ಯಾಚ್ ಪಡೆದಿದ್ದಾನೆ.

ಮಾಣಿಕ್ ಸ್ಪೋರ್ಟ್ಸ್ ಅಕಾಡೆಮಿ ಆಯೋಜಿಸಿದ ಅಂಡರ್–16 ಕ್ರಿಕೆಟ್‌ನಲ್ಲಿ "ಚಾಂಪಿಯನ್ಸ್ ಟ್ರೋಫಿ"ಯನ್ನು ಪಡೆದಿದ್ದಾನೆ.

ಈ ರೀತಿಯಾಗಿ ಹಲವಾರು ಕ್ರಿಕೆಟ್ ಪಂದ್ಯಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಮೆಡಲ್‌ಗಳನ್ನು ಪಡೆದು ರಾಷ್ಟ್ರೀಯ ಕ್ರಿಕೆಟ್ ಲೀಗ್‌ನಲ್ಲಿ ಭಾಗವಹಿಸಿ ರಾಜ್ಯ ಮಟ್ಟದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಗಣೇಶ ಸಿರ್ಸೆ ವಿದ್ಯಾರ್ಥಿಯನ್ನು ಡೈಮಂಡ್ ಪ್ರೌಢ ಶಾಲೆಯಲ್ಲಿ ಸನ್ಮಾನ ಮಾಡಲಾಯಿತು.

ಡೈಮಂಡ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶ್ರೀ ಎಸ್.ಕೆ.ಮಸ್ತಾನವಲಿ ಮಾತನಾಡಿ "ವಿದ್ಯಾರ್ಥಿಗಳು ಕ್ರೀಡೆಯನ್ನು ಗೌರವಿಸಬೇಕು, ಕ್ರೀಡೆ ನಮ್ಮ ದೇಹಕ್ಕೆ ಶಕ್ತಿ ನೀಡುತ್ತದೆ" ಎಂದು ತಿಳಿಸಿದರು ಮತ್ತು ವಾಯ್.ಮಾಧವರಾವ, ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಗೌಸಿಯಾ ಬೇಗಂ ಮತ್ತು ಮುಖ್ಯೋಪಾಧ್ಯಾಯರಾದ ಧನರಾಜ ನೀಲಂಗೆ, ಮುಖ್ಯ ಆಡಳಿತಾಧಿಕಾರಿ ಅಶ್ವಿನ್ ಭೋಸ್ಲೆ, ಆಡಳಿತಾಧಿಕಾರಿಗಳಾದ ಸುಜಾತಾ ಪಾಟೀಲ, ಸ್ವಪ್ನಾಲಿ ಕಾಶೆಂಪುರೆ, ರಾಮ ಕನಸೆ ಮತ್ತು ವಿನೋದ ಜಾಧವ, ಪಟ್ಟಣದ ಐಶ್ವರ್ಯ ಎಲೆಕ್ಟ್ರಾನಿಕ್ಸ್ ಮಾಲೀಕರಾದ ಚಂದ್ರಕಾಂತ ವಂಕೆ ಹಾಗೂ ಶಾಲೆಯ ಎಲ್ಲಾ ಶಿಕ್ಷಕರು ಹಾಗು ಸಿಬ್ಬಂದಿ ವರ್ಗದವರು ವಿದ್ಯಾರ್ಥಿಯ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

## 76ನೇ ಸಂವಿಧಾನ ದಿನಾಚರಣೆ 29ಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ದೇಶದ ಏಕತೆಗೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆಆಗದಂತೆ ಸಂವಿಧಾನದ ವಿರೋಧಿಗಳಿಗೆ ತಕ್ಕ ಪಾಠ ಕಲಿಸಲು ದೇಶಪ್ರೇಮಿಗಳು, ಅಂಬೇಡ್ಕರ್ ಅನುಯಾಯಿಗಳು ಒಗ್ಗಟ್ಟಾಗಿ ಹೋರಾಟ ರೂಪಿಸಲು, ಜನರಲ್ಲಿ ಜನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ವಾಭಿಮಾನಿ ಬಿ.ಕೃಷ್ಣಪ್ಪ ಬಣದ ಕರ್ನಾಟಕ ದಲಿತ ಸಂಘರ್ಷ ರಾಜ್ಯ ಸಮಿತಿಯಿಂದ ಜ. 29 ರಂದು ಬೆಳಿಗ್ಗೆ 11 ಕ್ಕೆ ಕೋಲಾರದ ಟಿ.ಚನ್ನಯ್ಯ ರಂಗ ಮಂದಿರದಲ್ಲಿ ರಾಜ್ಯಮಟ್ಟದ 76ನೇ ವರ್ಷದ ಸಂವಿಧಾನ ದಿನಾಚರಣೆಯ ಅಂಗವಾಗಿ ರಾಜ್ಯಮಟ್ಟದ ಬೃಹತ್ ಸಮಾವೇಶವನ್ನು ಆಯೋಜಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಮಿತಿಯ ಜಿಲ್ಲಾ ಸಂಚಾಲಕ ಚೇಳಗುರ್ಕಿ ರಾಮಣ್ಣ, ಭಾರತದ ಅಸ್ಪೃಶ್ಯತೆ, ಅಸಮಾನತೆ, ಮೌಢ್ಯ ಕಂದಾಚಾರದಿಂದ ಕೂಡಿದ ಭಾರತಕ್ಕೆ ಸಂವಿಧಾನ ರಚನಾ ಕರಡು ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದ ಸಂದರ್ಭದಲ್ಲಿ ಮನುವಾದಿಗಳು ಪ್ರಬಲವಾಗಿ ವಿರೋಧಿಸಿ ಅಂಬೇಡ್ಕರ್ ಅವರನ್ನು ಸಂವಿಧಾನದ ರಚನಾ ಸಭೆಯಲ್ಲಿ ಭಾಗವಹಿಸಿದಂತೆ ತಡೆಯೊಡ್ಡಿ ಅವಮಾನಿಸಿದ್ದರೂ, ಛಲ ಬಿಡದ ಅಂಬೇಡ್ಕರ್ ಅವರು ಸಂವಿಧಾನ ರಚಿಸಿ ಸಂವಿಧಾನದ ಮೂಲಕ ರಾಜಪ್ರಭುತ್ವದ ಸರ್ವಾಧಿಕಾರಿ ಆಡಳಿತವನ್ನು ಕೊನೆಗಾಣಿಸಿ ಪ್ರಜಾಪ್ರಭುತ್ವ ಸ್ಥಾಪಿಸಿ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿಸಿದರು.

ಸಂವಿಧಾನದ ಪ್ರತಿಗಳನ್ನು ಸುಡುವ ಮೂಲಕ ಅಂಬೇಡ್ಕರ್ ಅವರ ವಿಚಾರಗಳ ಮೇಲೆ ದಾಳಿ, ಸಂವಿಧಾನ ಬದಲಾಯಿಸುವ ಹುನ್ನಾರವನ್ನು ಮಾಡುತ್ತಲೇ ಬಂದಿದ್ದಾರೆ.

## ಶ್ರೀ ವೀರಭದ್ರೇಶ್ವರ ಜಾತ್ರೆ ಶಾಂತಿಯುತವಾಗಿ ನೆರವೇರಿಕೆ ಪೊಲೀಸ್ ಇಲಾಖೆಯ ಕಾರ್ಯ ಶ್ಲಾಘನೀಯ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್





ತಾಲ್ಲೂಕಿನ ಐತಿಹಾಸಿಕ ಶ್ರೀ ವೀರಭದ್ರೇಶ್ವರ ಜಾತ್ರೆಗೆ ಈ ವರ್ಷ ಲಕ್ಷಾಂತರ ಭಕ್ತರು ವಿವಿಧ ಜಿಲ್ಲೆಗಳು ಹಾಗೂ ರಾಜ್ಯಗಳಿಂದ ಆಗಮಿಸಿದ್ದರು. ಅಪಾರ ಜನಸಾಗರದ ನಡುವೆಯೂ ಯಾವುದೇ ತರಹದ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡ ಪೊಲೀಸ್ ಇಲಾಖೆ ಶ್ಲಾಘನೀಯ ಕಾರ್ಯ ನಿರ್ವಹಿಸಿದೆ. ಜಾತ್ರೆ ಆರಂಭಕ್ಕೂ ಮುನ್ನವೇ ಪೊಲೀಸ್ ಇಲಾಖೆ ಸಮರ್ಪಕ ಭದ್ರತಾ ವ್ಯವಸ್ಥೆ ಕಲ್ಪಿಸಿದ್ದು, ಹೆಚ್ಚುವರಿ ಪೊಲೀಸ್ ಸಿಬ್ಬಂದಿ, ಟ್ರಾಫಿಕ್ ನಿಯಂತ್ರಣ, ಸಿಸಿ ಟಿವಿ ನಿಗಾವಹಣೆ ಹಾಗೂ ಪಾದಚಾರಿಗಳ ಸಂಚಾರಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಭಕ್ತರ ಸುರಕ್ಷತೆ ಮತ್ತು ಶಾಂತಿ ಕಾಪಾಡುವಲ್ಲಿ ಪೊಲೀಸ್ ಸಿಬ್ಬಂದಿ ದಿನರಾತ್ರಿ ಶ್ರಮಿಸಿ ಕರ್ತವ್ಯ ನಿರ್ವಹಿಸಿದರು. ಪೊಲೀಸ್ ಇಲಾಖೆಯ ಸಮಯೋಚಿತ ಕ್ರಮಗಳಿಂದ ಜಾತ್ರೆ ಸಂಪೂರ್ಣವಾಗಿ ಶಾಂತಿಯುತವಾಗಿ ನೆರವೇರಿದ್ದು, ಸಾರ್ವಜನಿಕರು ಹಾಗೂ ಭಕ್ತಾದಿಗಳು ಪೊಲೀಸ್ ಇಲಾಖೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಉಳಿಸಿಕೊಟ್ಟ ರಸ್ತೆಗೆ ವಕೀಲರದ್ದೇ ಹೆಸರಿಟ್ಟ ನಿವಾಸಿಗಳು

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ



ಸುಮಾರು 20 ವರ್ಷಗಳಿಂದ ರಾಜಗೋಪಾಲನಗರ ಮತ್ತು ಲಗ್ಗೆರೆ ನಡುವಿನ ಕಸ್ತೂರಿ ಬಡಾವಣೆಯ ನಿವಾಸಿಗಳು ರಸ್ತೆಗಾಗಿ ನಡೆಸುತ್ತಿದ್ದ ಕಾನೂನು ಹೋರಾಟದಲ್ಲಿ ಕೊನೆಗೂ ಹೈಕೋರ್ಟ್ ನಲ್ಲಿ ಜಯ ದೊರತಿದೆ. ಅದೀನ ನ್ಯಾಯಾಲಯ ಹಾಗೂ ಹೈಕೋರ್ಟ್ ನಲ್ಲಿ ರಸ್ತೆಯ ಜಾಗದ ಪರವಾಗಿ ಹೋರಾಟ ನಡೆಸಿ ರಸ್ತೆಯ ಜಾಗವನ್ನು ಹೈಕೋರ್ಟ್ ವಕೀಲ ರಮೇಶ್ ಚಂದ್ರು ಉಳಿಸಿಕೊಟ್ಟ ಕಾರಣ–ಕ್ಕಾಗಿ ಅವರ ಹೆಸರನ್ನು ಆ ರಸ್ತೆಗೆ ನಾಮಕರಣ ಮಾಡುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

ಇದರಿಂದ ಸುಮಾರು 450ಕ್ಕೂ ಅಧಿಕ ಮನೆಗಳ ನಿವಾಸಿಗಳ ಸಂಚಾರ ಸುಗಮವಾಗಿದೆ. ಖಾಸಗಿ ಬಡಾವಣೆಯ ಪ್ರಮುಖ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಇಬ್ಬರು ಪ್ರಭಾವಿಗಳು ಅದು ತಮ್ಮ ನಿವೇಶನದ ಜಾಗ ಎಂದು ರಸ್ತೆಯನ್ನು ಬಂದ್ ಮಾಡಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರು. ಇದರಿಂದ ಕಸ್ತೂರಿ ಬಡಾವಣೆಯ ನಿವಾಸಿಗಳು ಸುಮಾರು ಐದು ಕಿಲೋಮೀಟರ್ ಸುತ್ತಿಕೊಂಡು ಮನೆಗಳನ್ನು ತಲುಪುವಂತಹ ಪರಿಸ್ಥಿತಿ ಎದುರಾಗಿತ್ತು. ಈ ಸಮಸ್ಯೆಯ ವಿರುದ್ಧ ಸ್ಥಳೀಯ ನಿವಾಸಿಗಳು ಸಿವಿಲ್ ಕೋರ್ಟ್ ಮೊರೆ ಹೋಗಿದ್ದರು. ಹಲವು ವರ್ಷಗಳ ಕಾಲ ವ್ಯಾಜ್ಯ ನಡೆದು ನ್ಯಾಯಮೂರ್ತಿ ಬೈರಾರೆಡ್ಡಿ ಮಧ್ಯಂತರ ತಡೆ ನೀಡಿ ಸಾರ್ವಜನಿಕರಿಗೆ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಅಲ್ಲದೆ ವಿವಾದಿತ ಜಾಗ ನಿಜವಾಗಿಯೂ ರಸ್ತೆಯೇ ಅಥವಾ ನಿವೇಶನವೇ ಎಂಬ ಬಗ್ಗೆ ವರದಿ ನೀಡುವಂತೆ ಆದೇಶ ನೀಡಿದಾಗ ಬಿಬಿಎಂಪಿ ಅಧಿಕಾರಿಗಳು ಈ ಜಾಗ ರಸ್ತೆ ಎಂದು ವರದಿ ನೀಡಿದರು. ಆದರೆ ಆ ವರದಿಯನ್ನು ಪ್ರತಿವಾದಿಗಳು ಒಪ್ಪಿರಲಿಲ್ಲ.

2025ರ ಡಿಸೆಂಬರ್ ನಲ್ಲಿ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮೊಗದಂ ಅವರಿಂದ ಏಕ ಸದಸ್ಯ ಪೀಠ ವಿವಾದಿತ ಜಾಗ ರಸ್ತೆಯಾಗಿದ್ದು ಯಾರು ಅಲ್ಲಿ ಸಂಚಾರಕ್ಕೆ ತೊಂದರೆ ಮಾಡುವಂತಿಲ್ಲ ಎಂದು ತೀರ್ಪು ನೀಡಿದ ಹಿನ್ನೆಲೆಯಲ್ಲಿ ಗಣರಾಜ್ಯೋತ್ಸವ ದಿನವಾದ ಸೋಮವಾರ ಕಸ್ತೂರಿ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದವರು ವಕೀಲ ರಾಮಚಂದ್ರ ಅವರ ಹೆಸರನ್ನು ನಾಮಕರಣ ಮಾಡಿ ನಾಮಫಲಕವನ್ನು ಅವರಿಂದಲೇ ಅನಾವರಣಗೊಳಿಸಿದ್ದಾರೆ.

ಎರಡು ದಶಕಗಳ ಕಾಲ ಪ್ರಕರಣ ನಡೆಸಿ ಕೊನೆಗೂ ನ್ಯಾಯ ದೊರಕಿಸಿಕೊಟ್ಟ ವಕೀಲರನ್ನು ಅಭಿನಂದಿಸುವುದಲ್ಲದೆ ಅವರ ಹೆಸರನ್ನೇ ರಸ್ತೆಗೆ ನಾಮಕರಣ ಮಾಡಲಾಗಿದೆ. ಇದು ನಿಜಕ್ಕೂ ನಮಗೆ ದೊರಕಿದ್ದಷ್ಟೇ ಸಂತೋಷವಾಗಿದೆ ಎಂದು ಬಡಾವಣೆಯ ನಿವಾಸಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಸ್ತೂರಿ ಬಡಾವಣೆ ಗ್ರಾಮಸ್ಥರು ಮುಖಂಡರಾದ ನಂಜುಂಡಪ್ಪ, ರಾಮೇಗೌಡ, ಹಾಲೇಶ್, ಮಣಿ, ಸಿಡಿ ರಾಜಣ್ಣ, ಹನುಮಂತಪ್ಪ, ಹಾಲೇಶ್ ಬಣೇಕರ್, ಚಿಕ್ಕಸ್ವಾಮಿ, ಮಹಿಳಾ ಮುಖಂಡರಾದ ಪ್ರೇಮ, ಮುಂತಾದವರು ಉಪಸ್ಥಿತರಿದ್ದರು.

## ಸಂವಿಧಾನ ಉಲ್ಲಂಘಿಸಿದವರು ದೇಶದ ಕ್ಷಮೆ ಕೇಳಲಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ನೆರೆ ರಾಷ್ಟ್ರಗಳಲ್ಲಿ ದಂಗೆಗಳಿಂದಾಗಿ ಆಡಳಿತ ವ್ಯವಸ್ಥೆ ಕುಸಿತಬವಾದರೂ ಭಾರತದಲ್ಲಿ ಆಡಳಿತ ವ್ಯವಸ್ಥೆ ಸುಭದ್ರವಾಗಿರುವುದಕ್ಕೆ ಕಾರಣ ಡಾ. ಬಿ ಆರ್ ಅಂಬೇಡ್ಕರ್ ಅವರ ನೇತೃತ್ವದ ತಜ್ಞರು ಕೊಟ್ಟ ಸಂವಿಧಾನ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ ವಿ ಚಂದ್ರಶೇಖರ್ ಹೇಳಿದರು.

ನಗರದಲ್ಲಿರುವ ಜೆಡಿಎಸ್ ಪಕ್ಷದ ಜಿಲ್ಲಾ ಕಛೇರಿಯಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ಅವರು ಮಾತನಾಡುತ್ತಿದ್ದರು.

"ಇಡೀ ವಿಶ್ವದಲ್ಲಿಯೇ ಅತ್ಯಂತ ಸದೃಢ ಸಂವಿಧಾನ ಹೊಂದಿದ ಏಕೈಕ ರಾಷ್ಟ್ರ ಭಾರತ. ಅಧ್ಯಕ್ಷೀಯ ಮಾದರಿಯ ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಿಥಿಲಗಳು ಕಂಡುಬರುತ್ತವೆ.

ಸದೃಢ ಸಂವಿಧಾನರಹಿತ ನೆರೆಯ ನೇಪಾಳ, ಬಾಂಗ್ಲಾದೇಶ ಹಾಗೂ ಶ್ರೀಲಂಕಾ ದೇಶಗಳಲ್ಲಿ ಸ್ಥಿತ್ಯಂತರಗಳಾಗಿವೆ. ಜಾಗತಿಕಗಳ ತಲ್ಲಣಗಳ ನಡುವೆಯೂ ಭಾರತ ದೇಶ ಸುಭದ್ರವಾಗಿ ಇರಲು ಮುಖ್ಯ ಕಾರಣ ನಾವು ಅಳವಡಿಸಿಕೊಂಡಿರುವ ಸಂವಿಧಾನ. ಇದು ವಿಶ್ವಕ್ಕೆ ಮಾದರಿ," ಎಂದರು.

ರಾಷ್ಟ್ರದ ಮೇಲೆ ತುರ್ತು ಪರಿಸ್ಥಿತಿ ಹೇರಿ ಹಾಗೂ ಸಂವಿಧಾನದ 356 ನೇ ವಿಧಿಯನ್ನು 90 ಕ್ಕಿಂತಲೂ ಹೆಚ್ಚುಸಲ ದುರ್ಬಳಕೆ ಮಾಡಿಕೊಂಡು ದಶಕಗಳ ಕಾಲ ಕಾಂಗ್ರೆಸ್ ಪಕ್ಷ ಸಂವಿಧಾನದ ಮೇಲೆ ಸವಾರಿ ನಡೆಸಿದೆ. ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಪ್ರಮಾದಕ್ಕಾಗಿ ಈಗಲಾದರೂ ದೇಶದ ಕ್ಷಮೆ ಕೇಳಬೇಕು. ತಮ್ಮನ್ನು ಚುನಾಯಿಸಿದ ಜನರ ಬೇಡಿಕೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕೊಪ್ಪಳವನ್ನು ಖಾಸಗಿ ಕಾರ್ಖಾನೆಗಳ ಮಾಲೀಕರ ಕೈಗೆ ನೀಡಿದ ಕಾಂಗ್ರೆಸ್ ಪಕ್ಷದ ಕುತಂತ್ರದ ವಿರುದ್ಧ ಜೆಡಿಎಸ್ ಪ್ರತಿಭಟನೆ ನಡೆಸಲಿದೆ. ಆ ಪಕ್ಷದ ಸಂವಿಧಾನ ವಿರೋಧಿ ನೀತಿಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಿದೆ ಎಂದರು.

ಜಾತಿ, ಕುಟುಂಬ ಹಾಗೂ ಧರ್ಮ ರಾಜಕಾರಣ ಮಾಡುತ್ತಾ ಕಳೆದ ಹತ್ತು ವರ್ಷಗಳಿಗಿಂತಲೂ ಹೆಚ್ಚಿನ ಅವಧಿಗೆ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಕೊಪ್ಪಳದಲ್ಲಿ ಸಂವಿಧಾನ ವಿರೋಧಿ ನೀತಿಯನ್ನು ಅಳವಡಿಸಿಕೊಂಡಿದೆ. ತಮ್ಮ ಕುಟುಂಬಕ್ಕೆ ಅನುಕೂಲವಾಗುವ ನೀತಿಗಳನ್ನು ಅನುಸರಿಸಿ ಗುತ್ತಿಗೆದಾರರು ಹಾಗೂ ವ್ಯಾಪಾರಸ್ಥರ ಪಾಲಿಗೆ ಮುಳುವಾದ ಶ್ರೇಯಸ್ಸು ಶಾಸಕ ಮತ್ತು ಸಂಸದರಿಗೆ ಸಲ್ಲುತ್ತದೆ.

ಸಂವಿಧಾನದ 371 ಜೆ ವಿಧಿಯಡಿ ನಮ್ಮ ಭಾಗಕ್ಕೆ ಸಿಗಬೇಕಾದ ಸವಲತ್ತುಗಳನ್ನು ಒದಗಿಸಿಕೊಡಲು ರಾಜ್ಯ ಸರಕಾರ ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದು ಪಕ್ಷದ ಜಿಲ್ಲಾಧ್ಯಕ್ಷ ಸುರೇಶ್ ಭೂಮರೆಡ್ಡಿ ಹೇಳಿದರು. ಸಂವಿಧಾನ ಪೀಠಿಕೆಯನ್ನು ಓದಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣಪ್ಪ ಜಡಿ ಪೀಠಿಕೆಯನ್ನು ಓದುವ ಚಟುವಟಿಕೆಯನ್ನು ಸಂಸ್ಕೃತಿಯಾಗಿ ಬಳಸಬೇಕು. ಅದರಲ್ಲಿ ತಿಳಿಸಲಾದ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಅದು ಪ್ರಜಾಪ್ರಭುತ್ವಕ್ಕೆ ತೋರಿಸುವ ನಿಜವಾದ ಗೌರವ ಎಂದರು.

ಪಕ್ಷದ ಓಬಿಸಿ ಜಿಲ್ಲಾಧ್ಯಕ್ಷ ಕರಿಯಪ್ಪ ಹಾಲವರ್ತಿ, ಜಿಲ್ಲಾ ಸಂಸ್ಕೃತಿ ವಿಭಾಗದ ಅಧ್ಯಕ್ಷ ಮಂಜುನಾಥ್, ಎಸ್ ಟಿ ಮೋರ್ಚಾ ವಿಭಾಗದ ಜಿಲ್ಲಾಧ್ಯಕ್ಷ ರಮೇಶ್ ಡಂಬ್ರಳ್ಳಿ, ತಾಲೂಕು ಗ್ರಾಮೀಣ ಘಟಕದ ಅಧ್ಯಕ್ಷ ವೀರೇಶಗೌಡ್ರು ದಳಪತಿ, ನಗರ ಘಟಕದ ಅಧ್ಯಕ್ಷ ಸೋಮನಗೌಡ, ನಗರ ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ ಎನ್ ಮೇದಾರ್, ಮುಖಂಡರಾದ ವಸಂತಕುಮಾರ್ ಹಟ್ಟಿ, ಸುರೇಶ್ ದದೇಗಲ್, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಕುಮಾರ ಏಣಿಗಿ, ಮಾರುತಿ ಗೌಡ ಹಿರೇಬಾಗನಾಳ, ಮಾರುತಿ ಹರಿಜನ, ಸಿದ್ದು ಪಾಟೀಲ್, ಅಭಿಷೇಕ್ ಡಂಬ್ರಳ್ಳಿ, ಮಲ್ಲೇಶ ಬೇಳೂರು, ಗಂಗಾಧರ್ ವಸ್ತ್ರದ, ವಿಜಯಕುಮಾರ್ ಕಂಪ್ಲಿ, ಬಸವರಾಜ್ ಗೊಂದಳಿ, ರಾಜು ನರೇಗಲ್ ಲಕ್ಷ್ಮಣ ಅಳವಂಡಿ, ರಂಗಪ್ಪ ಬೋವಿ, ರತ್ನಮ್ಮ ಹಿರಿಮಠ, ಶರಣಮ್ಮ ಸಂಗನಾಳ, ವೀಣಾ ಮೇದಾರ, ಅನ್ನಪೂರ್ಣ ಹಡಪಾದ, ಭಾಗ್ಯ ಐವಳಿ, ವಿಶಾಲಾಕ್ಷಿ ಕುರಬರ, ಅನಿತಾ ಹಡಪದ ಹಾಗೂ ಕಾರ್ಯಕರ್ತರು ಇತರರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)